ಶ್ರೀ ಶಿವಾನಂದ ಎಸ್. ಪಾಟೀಲ್ : ಮೊದಲು ಪ್ರಶ್ನೋತ್ತರ ಮುಗಿಸಲಿ.

ಉಪಾಧ್ಯಕ್ಷರು : ಪಾಟೀಲರೆ, ಒಂದು ಗಂಟೆಯೊಳಗೆ ಈ ನಿಯಮ–69 ಮುಗಿಯುತ್ತದೆ. ಇದು ಆದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಒಂದು ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ತೆಗೆದುಕೊಳ್ಳುತ್ತೇವೆ ಎನ್ನುವ ಅಶ್ಯೂರೆನ್ಸ್ ಆದರೂ ಕೊಡಿ. ನಿನ್ನೆ ಲ್ಯಾಪ್ಸ್ ಆಯಿತು, ಮೊನ್ನೆ ಲ್ಯಾಪ್ಸ್ ಆಯಿತು, ಇವತ್ತಾದರೂ ತೆಗೆದು ಕೊಳ್ಳುತ್ತೇವೆನ್ನುವ ಅಶ್ಯೂರೆನ್ಸಾದರೂ ಕೊಡಬೇಕಲ್ಲವೆ?

ಉಪಾಧ್ಯಕ್ಷರು : ಇವತ್ತು ಇದೆ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ.

2. ಚರ್ಚೆ (ಮುಂದುವರಿಸಲಾಗಿದೆ)

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿನ ಗಣಿ ಮಾಲೀಕರಿಂದ 150 ಕೋಟಿ ಸಂಗ್ರಹಿಸಲಾಗಿದೆ ಎನ್ನಲಾದ ವಿಷಯದ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕಳೆದ 5–6 ದಿವಸಗಳಿಂದ ಕರ್ನಾಟಕ ರಾಜ್ಯದಲ್ಲಿ ಒಂದು ರಾಜಕೀಯ ಬಿರುಗಾಳಿ ಎದ್ದಿದೆ. ಈ ಬಿರುಗಾಳಿಯನ್ನು ಎಬ್ಬಿಸಿರತಕ್ಕಂಥದ್ದು ವಿರೋಧ ಪಕ್ಷದವರಲ್ಲ. ಈ ಬಿರುಗಾಳಿಯನ್ನು ಎಬ್ಬಿಸಿರತಕ್ಕಂಥ ಆಡಳಿತ ಪಕ್ಷದ ಆಡಳಿತವನ್ನು ನಡೆಸತಕ್ಕಂಥ ಸರ್ಕಾರದಲ್ಲಿ ಒಂದು ಭಾಗವಾಗಿರತಕ್ಕಂಥ ಒಂದು ಪ್ರಮುಖ ಪಕ್ಷ ಒಂದು ಬಿರುಗಾಳಿಯನ್ನು ಎಬ್ಬಿಸಿದೆ. ಈ ಬಿರುಗಾಳಿ ಯಾವರೀತಿ ಸೃಷ್ಟಿಯಾಗಿದೆ ಎಂದರೆ ಒಬ್ಬ ಎಸ್ಪಿಯ ವರ್ಗಾವಣೆ ಮತ್ತು 150 ಕೋಟಿ ರೂ.ಗಳ ಮಧ್ಯೆ ಈ ಬಿರುಗಾಳಿ ಸೃಷ್ಟಿಯಾಗಿದೆ. ಆದರೆ ಇದರ ವಾಸ್ತವ ಬಿರುಗಾಳಿ ಎಲ್ಲಿ ಸೃಷ್ಟಿಯಾಗಿದ್ದು ಎಂದರೆ ಎಸ್.ಪಿ.ಯ ವರ್ಗಾವಣೆಯ ಪ್ರಶ್ನೆಯೂ ಅಲ್ಲ, 150 ಕೋಟಿ ರೂ.ಗಳ ಪ್ರಶ್ನೆಯೂ ಅಲ್ಲ, ಇದು ಮೈತ್ರಿ ಸರ್ಕಾರವನ್ನು ನಡೆಸತಕ್ಕಂಥ ಎರಡು ರಾಜಕೀಯ ಪಕ್ಷಗಳ ಮಧ್ಯೆ ಉಂಟಾಗಿರತಕ್ಕಂಥ ರಾಜಕೀಯ ಬಿಕ್ಕಟ್ಟು ಮತ್ತು ಪರಿಣಾಮ. ಇದು ಇದು ನಂಬರ ಒನ್. ನಂಬರ್–2, ಯಾವ ಪಕ್ಷ ಬಿರುಗಾಳಿ ಎಬ್ಬಿಸಿದೆಯೋ 150 ಕೋಟಿ ರೂ.ಗಳನ್ನು ಯಾರೋ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಿ, ಆ ಪಕ್ಷದಲ್ಲಿಯೇ ಇರತಕ್ಕಂಥ ಆಂತರಿಕ ಭಿನ್ನಾಭಿಪ್ರಾಯ ಇದು. ಈ ಎರಡು ಕಾರಣಗಳಿಂದ ಇವತ್ತು ಇಡೀ ದೇಶದಲ್ಲಿ ರಾಜಕಾರಣಿಗಳನ್ನು ಎಷ್ಟು ಹೀನವಾಗಿ ಜನ ನೋಡಲಿಕ್ಕೆ ಪ್ರಾರಂಭ ಮಾಡಿದ್ದಾರೆಂದರೆ ರಾಜಕಾರಣಿಗಳು ಎಂದರೆ ದುಡ್ಡು ಹೊಡೆಯಲಿಕ್ಕೆ ಇರತಕ್ಕಂಥವರು, ರಾಜಕೀಯ ಪಕ್ಷಗಳು ಎಂದರೆ ದುಡ್ಡು ವಸೂಲಿ ಮಾಡಲಿಕ್ಕೆ ಇರತಕ್ಕಂಥವರು ಅಂತ ಹೇಳಿ ಮೂರು ಕಾಸಿನ ಮರ್ಯಾದೆ ಇಲ್ಲದಿರತಕ್ಕಂಥ ಸ್ಥಿತಿಯಲ್ಲಿ ಇವತ್ತು ರಾಜಕೀಯ ಪರಿಸ್ಥಿತಿಯನ್ನು

ತಂದಿಟ್ಟಿದ್ದಾರೆ. 150 ಕೋಟಿ ರೂ.ಗಳು ಬಳ್ಳಾರಿ ಜಿಲ್ಲೆಗೆ ಯಾವ ಲೆಕ್ಕವೂ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಿಮಗೆ ಮಾಹಿತಿ ಇರಬೇಕೆಂದು ಕಾಣುತ್ತದೆ. 9 ಜನ ಖಾಸಗೀಯವರು ಹೆಲಿಕ್ಯಾಪ್ಟರ್‌ನ್ನು ಪರ್ಚೇಸ್ ಮಾಡಿದ್ದಾರೆ. ಇದರ ಮೇಲೆ ನೀವು ಇಮ್ಯಾಜಿನ್ ಮಾಡಿ, ಬಳ್ಳಾರಿ ಜಿಲ್ಲೆಯಲ್ಲಿ ಒಂದು ತಿಂಗಳಿಗೆ ಎಷ್ಟು ಸಾವಿರ ರೂ.ಗಳ ಟರ್ನ್‌ಓವರ್ ಆಗುತ್ತದೆಂದು, ಹಾಗಾಗಿ ಇದು 150 ಕೋಟಿ ರೂ.ಗಳ ಪ್ರಶ್ನೆ ಅಲ್ಲ. ಇದು ಎಸ್.ಪಿ ವರ್ಗಾವಣೆಯ ಪ್ರಶ್ನೆ ಅಲ್ಲ. ಎಸ್.ಪಿ. ವರ್ಗಾವಣೆಯ ಪ್ರಶ್ನೆಯಾದರೆ, ಒಬ್ಬರು ವರ್ಗಾವಣೆ ಮಾಡಿ ಎಂದು ಅನ್ನುತ್ತಿದ್ದಾರೆ ಇನ್ನೊಬ್ಬರು ಅದನ್ನು ವಿರೋಧ ಮಾಡಿದ್ದಾರೆ. ಅವನನ್ನು ಕಟ್ಟಿಕೊಂಡು ಇವರಿಗೆ ಏನಾಗಬೇಕು? ಅವನು ಬೇಕು ಎನ್ನುವವರಿಗೆ ಅವನಿಂದ ಏನು ಪ್ರಯೋಜನ ಆಗಬೇಕು? ಅವನು ಬೇಡ ಎನ್ನುವವರಿಗೆ ಏನು ತೊಂದರೆಯಾಗಿರಬೇಕು ಎಂಬುದನ್ನು ಕೇಳಬೇಕು. ಕೇವಲ ಯಾರೋ ಒಬ್ಬ ಎಸ್.ಪಿ. ವರ್ಗಾವಣೆಯ ವಿಚಾರದಲ್ಲಿ ಒಂದು ಸರ್ಕಾರವನ್ನು ಈ ರೀತಿಯಾದ ಇಕ್ಕಟ್ಟಿಗೆ ಸಿಕ್ಕಿಸುವಂಥ ಸ್ಥಿತಿ ರಾಜಕೀಯ ಕ್ಷೋಭೆಯನ್ನು ಉಂಟು ಮಾಡತಕ್ಕಂಥ ಸ್ಥಿತಿ, ರಾಜ್ಯದ ಮುಖ್ಯ ಮಂತ್ರಿಗಳ ಮೇಲೆ 150 ಕೋಟಿ ರೂ.ಗಳ ಆಪಾದನೆ ಸ್ಥಿತಿ ಉಂಟಾಗಿದೆ ಎಂದರೆ, ಒಬ್ಬ ಎಸ್.ಪಿ.ಯಿಂದಾಗಿ ಉಂಟಾಗಿದೆ ಎಂದು ಹೇಳತಕ್ಕಂಥದ್ದು ನಂಬಲಿಕ್ಕೆ ಇಲ್ಲಿ ಯಾರೂ ಪ್ರೈಮರಿ ಸ್ಕೂಲ್ ಮಕ್ಕಳು ಇಲ್ಲ. ಇದರಲ್ಲಿ, real crux of the issue ಇರತಕ್ಕಂಥದ್ದು, ಈ ಸರ್ಕಾರವನ್ನು ನಡೆಸತಕ್ಕಂಥ ಎರಡು ಪಕ್ಷಗಳು ಏನಿವೆ ಅವುಗಳ ಮಧ್ಯೆ ಬಂದಿರತಕ್ಕಂಥ ತಿಕ್ಕಾಟ ಇದು. ಮತ್ತು ಯಾರು ಆಪಾದನೆ ಮಾಡಿದ್ದಾರೆ ಆ ಪಕ್ಷದಲ್ಲಿರತಕ್ಕಂಥ ಆಂತರಿಕ ಭಿನ್ನಾಭಿಪ್ರಾಯ. ಅದಕ್ಕಿಂತ ಬಹಳ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಮೈನ್ಸ್ ಮೇಲೆ ಯಾರಿಗೆ ಹಿಡಿತ ಇರಬೇಕು. ಜೆಡಿ(ಎಸ್)ನವರ ಹಿಡಿತ ಇರಬೇಕಾ? ಬಿಜೆಪಿಯವರ ಹಿಡಿತ ಇರಬೇಕಾ ಎನ್ನತಕ್ಕಂಥದ್ದೇ ತಿಕ್ಕಾಟ. ಈ ಮೂರು ಅಂಶಗಳೇ ಇವತ್ತು ಈ ರಾಜ್ಯದ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿರತಕ್ಕಂಥದ್ದು. ಏಕೆ ಎಂದು ಹೇಳಿದರೆ, ಯಾರು ಇವತ್ತು ಈ ಬಿರುಗಾಳಿಯನ್ನು ಉಂಟು ಮಾಡಿದವರು ಜನಾರ್ಧನರೆಡ್ಡಿ ಎನ್ನತಕ್ಕಂಥ ಮನುಷ್ಯ. ಆತನೂ್ನ ಕೂಡ ಒಬ್ಬ ಮೇಲ್ಮನೆ ಸದಸ್ಯ; ಮತ್ತು ಗಣಿಯ ಮಾಲೀಕ. ಇವತ್ತು ಬಳ್ಳಾರಿ ಜಿಲ್ಲೆಯಲ್ಲಿರತಕ್ಕಂಥ ರಾಜಕೀಯ ಪಕ್ಷಗಳೆಲ್ಲರಿಗೂ ಗೊತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆಕ್ರಮ ಗಣಿಗಾರಿಕೆಯಿಂದ ಗಳಿಸಿದಂಥ ಹಣ ಯಾವ ರೀತಿಯಲ್ಲಿ ಚುನಾವಣೆಯಲ್ಲಿ ಪಾತ್ರವನ್ನು ವಹಿಸುತ್ತಿದೆ ಎಂದು ಮೊನ್ನೆ ನಡೆದ ಜಿಲ್ಲಾ ಪಂಚಾಯಿತಿ ಒಂದೊಂದು ಕ್ಷೇತ್ರದಲ್ಲಿ ಅಸೆಂಬ್ಲಿ ಕ್ಷೇತ್ರದಲ್ಲಿ ಎಷ್ಟೆಷ್ಟು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಒಂದು ಕ್ಷೇತ್ರದಲ್ಲಿ ಸುಮಾರು 2–3 ಕೋಟಿ ರೂಪಾಯಿಗಳನ್ನು

ಮೊನ್ನೆ ಖರ್ಚು ಮಾಡಿದ್ದಾರೆ. ಇದು ಅಕ್ರಮಗಣಿಗಾರಿಕೆ ಹಣವಲ್ಲದಿದ್ದರೆ ರಾಜ್ಯದ ಬೇರೆ ಯಾವ ಕಡೆಯಲ್ಲೂ ಒಂದು ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಸುಮಾರು 1 ರಿಂದ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಸೆಂಬ್ಲಿ ಚುನಾವಣೆಯಲ್ಲಿ ಪ್ರತಿ ಮನೆಗೂ ಟಿ.ವಿ.ಗಳನ್ನು ಕೊಟ್ಟಿದ್ದಾರೆ, ಅಸೆಂಬ್ಲಿ ಚುನಾವಣೆಯಲ್ಲಿ ಏನೆಲ್ಲಾವನ್ನು ಕೊಟ್ಟಿದ್ದಾರೆ. ಇದು ಯಾವುದೂ ದುಡ್ಡು? ಈ ಹಣವೆಲ್ಲಾ ಅಕ್ರಮಗಣಿಗಾರಿಕೆಯದೇ? 35 ಮಿಲಿಯನ್ ಟನ್ ಅದಿರು ಇವತ್ತು ಬಳ್ಳಾರಿ ಜಿಲ್ಲೆಯಿಂದ ತಿಂಗಳಿಗೆ ಹೊರಗೆ ಹೋಗುತ್ತಿದೆ. ಸುಮಾರು 1500 ರಿಂದ 2000 ರೂಪಾಯಿಗಳವರೆಗೆ ಒಂದು ಟನ್ ಇದರ ಬಗ್ಗೆ ಲೆಕ್ಕ ಹಾಕಿ, ಇಷ್ಟು ಸಾವಿರ ಕೋಟಿ ರೂಪಾಯಿಗಳಷ್ಟು ಹೋಗತಕ್ಕಂತಹ ಕಡೆ 150 ಕೋಟಿ ರೂಪಾಯಿಗಳು ಯಾವ ಲೆಕ್ಕಕ್ಕೂ ಇಲ್ಲ. ಆದರೆ ಆ 150 ಕೋಟಿ ರೂಪಾಯಿಗಳ ಬಗ್ಗೆ ಇವತ್ತು ಗಿರಿಕಿ ಹೊಡೆಯುತ್ತಿರುವಂತಹ ಸಮಸ್ಯೆ ಏನು? 150 ಕೋಟಿ ರೂಪಾಯಿಗಳು ದೊಡ್ಡ ಮೊತ್ತವೇ ಅಥವಾ 150 ಕೋಟಿ ರೂಪಾಯಿಗಳು ಸಾಲದು ಅಂತೆ? ಅಥವಾ ಯಾರೋ ಒಬ್ಬ ಎಸ್‌ಪಿಗೋಸ್ಕರವೇ? ಇದು ಯಾವುದೂ ಅಲ್ಲ. ಇವತ್ತು ಇವರ ಮಧ್ಯೆ ಉಂಟಾಗಿರುವುಂತಹ ರಾಜಕೀಯ ಭಿನ್ನಾಭಿಪ್ರಾಯಗಳು. ಇದರ ಬಗ್ಗೆ ಬಾರಿ ಸ್ಪಷ್ಟವಾಗಿ ಹೇಳಬೇಕೆಂದರೆ, ಜೆಡಿಎಸ್‌ನವರು ಬಿಎಂಐಸಿ ಮೇಲೆ ತೆಗೆದುಕೊಂಡಿರುವಂತಹ ನಿಲುವುಗೆ ವಿರುದ್ಧವಾದಂತಹ ನಿಲುವನ್ನು ಬಿಜೆಪಿಯವರು ತೆಗೆದುಕೊಂಡರು. ಬಿಲ್ ಪಾಸು ಮಾಡುವುದರ ಬಗ್ಗೆ. ಅದರ ವರಿಷ್ಟರು ಟಿವಿಯಲ್ಲಿ ಒಂದು ಇಂಟರ್‌ವ್ಯೂವನ್ನು ಕೊಟ್ಟರು. For obvious reasons B.J.P is not supporting to pass the Bill ಎಂದು ಹೇಳಿದರು. ಅದರ ರಿಫ್ಲೆಕ್ಷನ್ ಇದು. ಇಲ್ಲದೇ ಹೋಗಿದ್ದರೆ ಇದರ ಬಗ್ಗೆ ಬಿಜೆಪಿಯವರು ಪ್ರಾಮಾಣಿಕವಾಗಿ ಹೇಳಿಬಿಡಲಿ. ಅದೊಂದು ಜವಾಬ್ದಾರಿಯುತವಾದ ರಾಜಕೀಯಪಕ್ಷ; ಹಾಗೂ ರಾಷ್ಟ್ರೀಯ ಪಕ್ಷವಾಗಿದೆ. ಕೇಂದ್ರದಲ್ಲಿ 7 ವರ್ಷ ಅಧಿಕಾರ ನಡೆಸಿರುವಂತಹ ಪಕ್ಷ, ಈಗಲೂ 4–5 ರಾಜ್ಯಗಳಲ್ಲಿ ಅಧಿಕಾರವನ್ನು ನಡೆಸುತ್ತಿರುವಂತಹ ಪಕ್ಷ. ನಿಮ್ಮ ವಿಧಾನಪರಿಷತ್ತಿನ ಸದಸ್ಯನೊಬ್ಬ ಸರ್ಕಾರದ ಮುಖ್ಯಮಂತ್ರಿಯವರ ಮೇಲೆ ನೀವು ಬೆಂಬಲ ಕೊಡುತ್ತಿರುವಂತಹ, ನೀವು ಭಾಗಸ್ಥರಾಗಿರುವಂತಹ ಈ ಸರ್ಕಾರದ ಮುಖ್ಯಮಂತ್ರಿಯ ಮೇಲೆ ಅಂತಹ ಗಂಭೀರವಾದಂತಹ ಆಪಾದನೆಯನ್ನು ಮಾಡಿದರೆ ಇವತ್ತು ಬಿಜೆಪಿಯಿಂದ ಅಧಿಕೃತವಾಗಿ ಯಾರಾದರೂ ಆತನಿಗೆ ಒಂದು ನೋಟೀಸ್‌ನ್ನು ಕೊಟ್ಟಿದ್ದೀರಾ? ಆತನ ಹತ್ತಿರ ಎಕ್ಸ್‌ಪ್ಲನೇಷನ್‌ನ್ನು ಕೇಳಿದ್ದೀರಾ? ಆತನ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ, ಏನು ಮಾಡುತ್ತಿದ್ದೀರಿ ನೀವು? ಇಷ್ಟೆಲ್ಲಾ ಬಿರುಗಾಳಿ ಎಬ್ಬಿದೆ,

ಇನ್ನೊಂದು ಬಹಳ ಪ್ರಮುಖವಾದಂತಹ ಅಂಶ ಈ ಸರ್ಕಾರಕ್ಕೆ ಏನಾದರೂ ಘನತೆ, ಗೌರವ ಮಾನಮರ್ಯಾದೆ ಏನಾದರೂ ಇದ್ದರೆ ಆ ಪತ್ರಿಕಾ ಸಮ್ಮೇಳನ ನಡೆದಿರುವಂತಹದ್ದು. ಆ ಪತ್ರಿಕಾ ಸಮ್ಮೇಳನದಲ್ಲಿ ಇವರ ಕ್ಯಾಬಿನೆಟ್ ಮಂತ್ರಿಯೊಬ್ಬರು ಕುಳಿತಿದ್ದಾರೆ !

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಶ್ರೀರಾಮರೆಡ್ಡಿಯವರ ಹೇಳಿಕೆಗೆ ನಾನು ಇಂಟರ್‌ವಿನ್ ಆಗುತ್ತಿದ್ದೇನೆ. ಏನೆಂದರೆ ಶ್ರೀರಾಮುಲು ಅವರ ಹೆಸರು ಉಪಯೋಗ ಮಾಡುವುದು. ಅವರು ಅದರಲ್ಲಿ ಇದ್ದರು ಎಂದು ಹೇಳುವುದು.......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹಾಗೆಂದು ಹೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇದು ರೆಕಾರ್ಡ್‌ಗೆ ಹೋಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ, ನೋಡಿ, ನಾನು ಏನು ಹೇಳುತ್ತಿರುವುದು ಗೊತ್ತಾ, ...

ಶ್ರೀ ಜಗದೀಶ್ ಶೆಟ್ಟರ್ : ಜನಾರ್ಧನರೆಡ್ಡಿಯವರ ಬಗ್ಗೆ ಹೇಳುತ್ತಿದ್ದಾರೆ, ಹೇಳಲಿ. ಅದರ ಬಗ್ಗೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ, ಉಪಾಧ್ಯಕ್ಷರೆ,

ಶ್ರೀ ಜಗದೀಶ್ ಶೆಟ್ಟರ್ : ಆದರೆ ಶ್ರೀರಾಮುಲುರವರ ಬಗ್ಗೆ ಇಲ್ಲಿ ಹೆಸರು ಉಪಯೋಗ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಉಪಾಧ್ಯಕ್ಷರೆ, ಶ್ರೀರಾಮುಲುರವರು ರಾಜ್ಯ ಸರ್ಕಾರದ ಮಂತ್ರಿಗಳು, ಸಚಿವಸಂಪುಟ ದರ್ಜೆಯ ಸಚಿವರು. ಈ ಪ್ರೆಸ್ ಕಾನ್ಫರೆನ್ಸ್ ನಡೆದಿರುವುದು ಜನಾರ್ಧನರೆಡ್ಡಿಯವರ ಮನೆಯಲ್ಲಿ ಹೌದು, ಆಕಸ್ಮಿಕವಾಗಿ ಶ್ರೀರಾಮುಲುರವರು ಅಲ್ಲಿ ಇದ್ದದ್ದು ಹೌದು. ಅವರು ಅಲ್ಲಿ ಇದ್ದಾಗ ಹೇಳುತ್ತಾರೆಂದು ಹೋಗಿರಲಿಲ್ಲ. ಅವರು ಇದ್ದ ವೇಳಗೆ ಈ ವಿಚಾರವನ್ನು ಜನಾರ್ಧನರೆಡ್ಡಿಯವರು ಪ್ರಕಟ ಮಾಡಿದ ಮೇಲೆ ಶ್ರೀರಾಮುಲುರವರ ಜವಾಬ್ದಾರಿ ಏನು? As a responsible Minister, should he not say, I am not a party to this, I have nothing to do with this ಅಂತ ಹೇಳಬೇಕೋ ಅಥವಾ ಬೇಡವೋ ಉಪಾಧ್ಯಕ್ಷರೆ.

ಶ್ರೀ ಜಗದೀಶ್ ಶೆಟ್ಟರ್ : ಶ್ರೀರಾಮುಲುರವರು ಆ ಪತ್ರಿಕಾಗೋಷ್ಠಿಯಲ್ಲಿ ಇರಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಏನು ಅಂತ ಹೇಳುತ್ತಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್ : ಆ ಪತ್ರಿಕಾಗೋಷ್ಠಿಯಲ್ಲಿ ಇರಲಿಲ್ಲ ವೆನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ಏನು ಮಾತನಾಡುತ್ತಿದ್ದೀರಿ? ಜಗದೀಶ್ ಶೆಟ್ಟರ್‌ರವರೆ, you are entitled to hold defence for your Party. Absolutely nothing wrong with it. ನಾನು ಸನ್ಮಾನ್ಯ ಉಪಾಧ್ಯಕ್ಷರೆ, ತಮ್ಮಲ್ಲಿ ಇಷ್ಟೇ ನಿವೇದನೆ ಮಾಡಿಕೊಳ್ಳುತ್ತೇನೆ. ಜವಾಬ್ದಾರಿ ಹೊಂದಿರುವಂತಹ ಒಬ್ಬ ಮಂತ್ರಿಗಳಾಗಿ ಆಕಸ್ಮಿಕವಾಗಿ ಅವರಲ್ಲಿದ್ದರು ಎಂದು ಭಾವಿಸಿದರೂ ಕೂಡ ನಂತರ ಅವರ ಜವಾಬ್ದಾರಿ ಏನು? I am a Cabinet Minister ಅವರು ಹೇಳಿರುವುದಕ್ಕೂ ನಮಗೆ ಸಂಬಂಧವಿಲ್ಲ. ನಾವು ಎಲ್ಲಾ ಒಂದೇ ಜಿಲ್ಲೆಯವರು; ಅವರು ನಮ್ಮ ಜಿಲ್ಲಾ ಘಟಕದ ಅಧ್ಯಕ್ಷರು, ಬೇರೆ ಕೆಲಸಕ್ಕೆ ನಾನು ಅಲ್ಲಿಗೆ ಹೋಗಿದ್ದೆ, ಗ್ರಹಚಾರಕ್ಕೆ ನಾನು ಇರುವ ವೇಳೆಗೆ ಅವರು ಆ ಮಾತನ್ನು ಹೇಳಿದರು. ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಹೇಳಬೇಕಾದಂತಹ ಒಂದು ಹೊಣೆ ಅವರ ಮೇಲೆ ಇದೆಯೋ ಅಥವಾ ಇಲ್ಲವೋ?

ಉಪಾಧ್ಯಕ್ಷರು : ಒಂದು ನಿಮಿಷ ತಾಳಿ.

Sri K.R. Ramesh Kumar : You have a very bad case Mr. Shettar.

ಶ್ರೀ ಜಗದೀಶ್ ಶೆಟ್ಟರ್ : ಶ್ರೀರಾಮುಲುರವರು ಆ ಪತ್ರಿಕಾಗೋಷ್ಠಿಯಲ್ಲಿ ಇರಲಿಲ್ಲ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಜನಾರ್ಧನರೆಡ್ಡಿಯವರ ಬಗ್ಗೆ ಏನು ಪಾರ್ಟಿಯವರು ತೆಗೆದುಕೊಂಡರು ಅದು ನಮ್ಮ ಪಾರ್ಟಿಯ ಒಂದು ಒಳಗಿನ ಒಂದು ನಮ್ಮ ಒಂದು ವಿಚಾರವಾಗಿದೆ. ಅದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ, ಇದನ್ನು ನೀವು ಕೊಶ್ಚನ್ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ರಾಜ್ಯದ ಒಬ್ಬ ಮಿನಿಸ್ಟರ್...........

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಉತ್ತರವನ್ನು ಕೊಡುವಾಗ ಅದರ ಬಗ್ಗೆ ಹೇಳುತ್ತೇವೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಈ ರಾಜ್ಯದ ಒಬ್ಬ ಮಂತ್ರಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಏನು ಇದು ಮನೆಯ ವ್ಯವಹಾರವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಶ್ರೀರಾಮುಲುರವರು ಆ ಪತ್ರಿಕಾಗೋಷ್ಠಿಯಲ್ಲಿರಲಿಲ್ಲ

Sri K.R. Rameshkumar : He is a responsible Minister. What is he talking?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರು ಶ್ರೀರಾಮುಲುರವರ ವಿಚಾರವನ್ನು ಇಲ್ಲಿ ತರುತ್ತಿದ್ದಾರೆ. ಅವರು ಆ ಪತ್ರಿಕಾಗೋಷ್ಠಿಯಲ್ಲಿರಲಿಲ್ಲ. ಈ ವಿಷಯದ ಬಗ್ಗೆ ನಾವು ಉತ್ತರವನ್ನು ಕೊಡುವಾಗ ಎಲ್ಲವನ್ನೂ ಕೊಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರವನ್ನು ಕೊಡುವಾಗ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಪಕ್ಷದ ನಿಲುವು ಏನು? ಇದರ ಬಗ್ಗೆ ಏನೂ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಒಂದು ನಿಮಿಷ ತಾಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಪತ್ರಿಕಾಗೋಷ್ಠಿಯಲ್ಲಿದ್ದದ್ದು ನಿಜ, ಅವರು ಏನೂ ಮಾತನಾಡಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅವರು ಪತ್ರಿಕಾಗೋಷ್ಠಿಯಲ್ಲಿ ಇರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಏತಕ್ಕೆ ಹಾಗೇ ಹೇಳುತ್ತೀರಿ? He was present.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ. ನಾವು ಅವರ ಕಡೆಯಿಂದ ಈ ಬಗ್ಗೆ ಹೇಳಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಜನಾರ್ಧನರೆಡ್ಡಿಯವರ ಮನೆಯಲ್ಲಿ.. ನೋನೋ,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಹೇಳೀಯಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಹೇಳಿ ಆಗಿದೆ ಸಾರ್. ನಾನು ಏನೂ ಮಾತನಾಡಲಿಲ್ಲ, ನನಗೆ ಗೊತ್ತಾಗಲಿಲ್ಲ,

ಶ್ರೀ ಕೆ. ಜಯಪ್ರಕಾಶ್‌ಹೆಗ್ಡೆ : ಅವರು ಹೇಳಿ ಆಗಿದೆ.

Sri J.C. Madhu Swamy : Sorry to say ಅವರು ನಾನು ಇದ್ದೆ ಎಂದು ಹೇಳಿ ಆಗಿದೆ. ನಾನು ಏನೂ ಮಾತನಾಡಲಿಲ್ಲ. ಏನೂ ಗೊತ್ತಿಲ್ಲವೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದರ ಬಗ್ಗೆ ಕೊಡುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ,....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಚಿವರು ಆ ರೀತಿಯಾಗಿ ಹೇಳಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಿ ಹೇಳಿದ್ದಾರೆ?

ಉಪಾಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ,....

ಶ್ರೀ ಜಗದೀಶ್ ಶೆಟ್ಟರ್ : ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವುದು ಬೇಡ. ಏನಿದೆ ಹೇಳಿಕೆಯನ್ನು ಕೊಡಿ.

ಉಪಾಧ್ಯಕ್ಷರು : ಒಂದು ನಿಮಿಷ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಜಗದೀಶ್ ಶೆಟ್ಟರ್‌ರವರೆ,...

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಿ ಹೇಳಿದ್ದಾರೆ ತೋರಿಸಿ? ಏನು ರೆಕಾರ್ಡ್ಸ್ ಇದ್ದರೆ ಅದನ್ನು ಕೊಡಿ. ಆ ರೀತಿ ಶ್ರೀರಾಮುಲು ರವರು ಆ ಪತ್ರಿಕಾಗೋಷ್ಠಿಯಲ್ಲಿ ಇದ್ದರು ಎನ್ನುವ ಬಗ್ಗೆ ಏನಾದರೂ ಇದ್ದರೆ ಹೇಳಿ. ಸುಮ್ಮನೆ ಹಾಗೇ ನೀವು ಸದನಕ್ಕೆ ಈ ರೀತಿ ತಪ್ಪು ಮಾಹಿತಿಯನ್ನು ಕೊಡವುದಲ್ಲಾ? ಸದನಕ್ಕೆ ಈ ರೀತಿಯಾಗಿ ತಪ್ಪು ಮಾಹಿತಿಯನ್ನು ಕೊಡುವುದು ಸರಿಯಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ರೇಕಾರ್ಡ್ಸ್ ನಮ್ಮ ಹತ್ತಿರ ಇದೆ. ಇವರಿಗೆ ಕೊಡುವುದಿಲ್ಲ. ಇವರು ಅಪರಾಧಿಗಳು. ಅದು ನಿಮ್ಮ ಕೈಗೆ ಕೊಡುವುತ್ತೀರಾ? should we hand over records to the accused?

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿಯಾಗಿ ಸುಳ್ಳು ಮಾಹಿತಿಯನ್ನು ಕೊಡಬಾರದು. ಯಾವುದೇ ದಾಖಲೆ ಇಲ್ಲದೆ ಶ್ರೀರಾಮುಲುರವರು ಪತ್ರಿಕಾಗೋಷ್ಠಿಯಲ್ಲಿದ್ದಾರೆ ಎಂಬ ಸುಳ್ಳು ಹೇಳಿಕೆಯನ್ನು ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಉಪಾಧ್ಯಕ್ಷರು ಈ ರೀತಿಯಾಗಿ ಬ್ಲಾಕ್‌ಮೇಲ್ ಮತ್ತು ತಂತ್ರಗಾರಿಕೆಯಿಂದ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಶ್ರೀರಾಮುಲುರವರು ಬಂದುಹೇಳಲಿ, ಅನಂತರ ನಾವು ಮಾತನಾಡುತ್ತೇವೆ. ಅವರು ನಾನು ಇರಲಿಲ್ಲವೆಂದು ಹೇಳಬೇಕು ಅದನ್ನು ಹೇಳಿಸಿ.

ಶ್ರೀ ಜಗದೀಶ್ ಶೆಟ್ಟರ್ : ಅವರು ಇರಲಿಲ್ಲವೆಂದು ಬಂದುಹೇಳುತ್ತಾರೆ. ಸದನಕ್ಕೆ ತಪ್ಪುಮಾಹಿತಿಯನ್ನು ಕೊಡಬಾರದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೀವು ಅವರ ಪರವಾಗಿಯೇ ಮಾತನಾಡುತ್ತಿದ್ದೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಬಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ನೀವು ಆಪಾದನೆಯನ್ನು ಮಾಡುತ್ತಿದ್ದೀರಿ. ಮಾನ್ಯ ಶ್ರೀರಾಮುಲುರವರು ಪತ್ರಿಕಾಗೋಷ್ಠಿಯಲ್ಲಿರಲಿಲ್ಲ.

ಉಪಾಧ್ಯಕ್ಷರು : ಶ್ರೀರಾಮುಲುರವರು ಈ ಸದನದಲ್ಲಿ ಇಲ್ಲ. ಈಗ ಅವರ ವಿಚಾರವನ್ನು ಮಾತನಾಡುವುದು ಬೇಡ. ಅವರು ಬಂದ ಮೇಲೆ ಬೇಕಾದರೆ ಅದರ ಬಗ್ಗೆ ಮಾತನಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಅವರ ಕಡೆಯಿಂದ ಸ್ಪಷ್ಟೀಕರಣವನ್ನು ಕೊಡಿಸುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ವಕೀಲ ವೃತ್ತಿಯನ್ನು ನಡೆಸಿದ್ದೀರಿ, ಒಂದು ಕೇಸ್‌ನಲ್ಲಿ ಕಂಪ್ಲೈಂಟ್ ಇದ್ದಾಗ ಒಬ್ಬರು ಕಂಪ್ಲನೆಂಟ್, ಆಕ್ಯೂಸ್ಟ್ ಆದಾಗ ವಿಚಾರಣೆಯು ಪ್ರಾರಂಭವಾಗಿ ಐ.ಓ. ನೇಮಕವಾಗಿ ವಿಚಾರಣೆಯು ಪ್ರಾರಂಭವಾದಂತಹ ಹಂತದಲ್ಲಿ ನಮ್ಮ ಹತ್ತಿರ ಏನೇನು ಡಾಕ್ಯುಮೆಂಟ್ಸ್ ಇರುತ್ತದೆ, ಅದರ ಕಾಪಿಯನ್ನು ಅವರು ಡಿವೆಂಡ್ ಮಾಡಿಕೊಳ್ಳುವ ಬಗ್ಗೆ ಬೇಕಾಗಿದ್ದರೆ ಅವರಿಗೆ ಕೊಡಬಹುದೇ ಹೊರತು ವಿಚಾರಣೆ ಪ್ರಾರಂಭವಾಗುವ ಮೊದಲು ಹಂತದಲ್ಲಿಯೇ ಯಾರ ಮೇಲೆ ಆಪರಾಧವನ್ನು ಮಾಡಿರುತ್ತೇವೋ ಅವರು ಅಪರಾಧಿಗಳೆಂದು ಕೊಡ ನಾವು ಹೇಳುವುದಿಲ್ಲ. ನಾವು ಮೊದಲೇ ಡಾಕ್ಯುಮೆಂಟ್ಸ್‌ನ್ನು ಕೊಡುವುದಕ್ಕೆ ಆಗುತ್ತದೆಯೇ? ಇದು ಸಾಧ್ಯವೇ ಹೇಳಿ. ಮಾನ್ಯ ಸುಬ್ರಮಣ್ಯನಾಯ್ಡುರವರು ಬ್ಲಾಕ್‌ಮೇಲ್ ಎಂದು ಹೇಳುತ್ತಾರೆ. ಬ್ಲಾಕ್‌ಮೇಲೆ ಎಂಬ ಪದಕ್ಕೆ ಅರ್ಥವೇನು?

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : 100 ಪರ್ಸೆಂಟ್ ಹೌದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆಯಿತು 100 ಅಲ್ಲದಿದ್ದರೆ 1000 ಪರ್ಸೆಂಟ್ ಅಂತ ಹೇಳಿ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಬ್ಲಾಕ್‌ಮೇಲ್ ತಂತ್ರಗಾರಿಕೆಯನ್ನು ತಾವು ಮಾಡುತ್ತಿದ್ದೀರಿ. ತಾವು ಹಿರಿಯ ಸದಸ್ಯರಿದ್ದೀರಿ, ಅನುಭವಿಗಳಾಗಿದ್ದೀರಿ, ತಮ್ಮ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಎಲ್ಲರಿಗೂ ಕೂಡ ಸಾರಸಗಟಾಗಿ ತಮ್ಮ ಹತ್ತಿರ

ಮಾಹಿತಿಗಳು ಎಲ್ಲಾ ಪುರಾವೆಗಳು ಇದ್ದಾವೆಂದು ಹೇಳಿ ತಾವು ತಪ್ಪು ಮಾಹಿತಿಯನ್ನು ಹೇಳುತ್ತಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಬಹಳ ಸಂತೋಷ. ನಿಮ್ಮ ತಿಳುವಳಿಕೆಗೆ ಧನ್ಯವಾದಗಳು.

ಉಪಾಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಈಗ ರೂಲ್–69ನಲ್ಲಿ ಚರ್ಚೆಯಾಗುತ್ತಿದೆ. ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ, ಅವರು ಮಾತನಾಡಲಿ. ಅವರು ಏನು ಕೇಳುತ್ತಾರೆ ಅದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳಿದರೆಂದರೆ ಇವತ್ತು ವಿಚಾರಣೆಯು ನಡೆಯಬೇಕು, ವಿಚಾರಣೆಯು ನಡೆಯುವಂತಹ ಸಂದರ್ಭದಲ್ಲಿ ನಾವೆಲ್ಲಾ ಕಾಗದಪತ್ರಗಳನ್ನು ಹಾಜರು ಮಾಡುತ್ತೇವೆ, ನಮ್ಮ ಸಾಕ್ಷಿಗಳನ್ನು ಹಾಜರು ಮಾಡುತ್ತೇವೆ, ಅದಕ್ಕಿಂತ ಮುಂಚೆ ನಾವು ಏತಕ್ಕೆ ಹೇಳಬೇಕೆಂದು ಹೇಳಿದರು. ಆದರೆ ನಾನು ಜನಾರ್ಧನರೆಡ್ಡಿಯವರ ಹೇಳಿಕೆ ಏನಿದೆ, ಅದರ ಹಿನ್ನಲೆಯಲ್ಲಿ ಏನು ಮಾತನಾಡುತ್ತಾರೆ ಅದರ ಬಗ್ಗೆ ನಾನು ಏನೂ ತಕರಾರು ಮಾಡುತ್ತಿಲ್ಲ. ಅದರ ಬಗ್ಗೆ ಪಕ್ಷ ಏನು ನಿಲುವು ತೆಗೆದುಕೊಳ್ಳುತ್ತದೆ ಪಕ್ಷ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ನಾವು ಉತ್ತರ ಹೇಳುವಂತಹ ಸಂದರ್ಭದಲ್ಲಿ ಸರ್ಕಾರ ಅದರ ಬಗ್ಗೆ ಹೇಳುತ್ತದೆ. ಮಾನ್ಯ ಶ್ರೀರಾಮುಲು ಕ್ಯಾಬಿನೆಟ್, ಮಿನಿಸ್ಟರ್‌ರವರ ಬಗ್ಗೆ ಏನು ಒಂದು ವಿಷಯವನ್ನು ಇಲ್ಲಿ ಮಂಡನೆ ಮಾಡುತ್ತಿದ್ದಾರೆ, ಸದನದ ರೆಕಾರ್ಡ್‌ನಲ್ಲಿ ಸರಿಯಾದಂತಹ ಮಾಹಿತಿಯು ಹೋಗಬೇಕು. ಆ ಕ್ಯಾಬಿನೆಟ್ ಮಿನಿಸ್ಟರ್‌ರವರ ಬಗ್ಗೆ ತಪ್ಪು ಮಾಹಿತಿಯು ಹೋಗಬಾರದು ಎನ್ನುವ ಉದ್ದೇಶದಿಂದ ಶ್ರೀರಾಮುಲುರವರು ಆ ಒಂದು ಪತ್ರಿಕಾಗೋಷ್ಠಿಯಲ್ಲಿ ಹಾಜರಿರಲಿಲ್ಲವೆನ್ನುವಂತಹದ್ದರ ಬಗ್ಗೆ ನಾನು ಸ್ಪಷ್ಟೀಕರಣಗೊಳಿಸುತ್ತೇನೆ. ಯಾವ ವ್ಯಕ್ತಿ ಆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿಲ್ಲವೋ ಅಂತಹ ವ್ಯಕ್ತಿಯ ಬಗ್ಗೆ ಮಾತನಾಡುವುದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ತಮ್ಮ ಮುಖಾಂತರ ಮಾನ್ಯ ಶೆಟ್ಟರ್‌ರವರಲ್ಲಿ ಅತ್ಯಂತ ಗೌರವದಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮೊನ್ನೆ ಒಂದು ದಿವಸ ಕೊಶ್ಚನ್ ಹವರ್‌ನಲ್ಲಿ ಶ್ರೀರಾಮುಲುರವರು ಉತ್ತರವನ್ನು ಕೊಡುವ ಬಗ್ಗೆ ನಾವು ನೋಡಿದ್ದೇವೆ. Though he is a first timer, ಅವರು ಬ್ರಿಲಿಯೆಂಟಾಗಿ ಉತ್ತರವನ್ನು ಕೊಡುತ್ತಾರೆ. He is a very well informed person. ಅವರು ಇದ್ದಾರೆ, ಅವರು ಬಂದು ಡಿಫೆಂಡ್ ಮಾಡಿಕೊಳ್ಳಲಿ. ಅವರಿಗೆ ಆಗದೇ ಹೋದರೆ ನೀವು ಮಾಡಬಹುದು. ಇದು ಏನು ವಿಚಿತ್ರ?

Sri Jagadish Shettar : In the mean time, ಈ ಸದನದ ರೆಕಾರ್ಡ್‌ನಲ್ಲಿ ತಪ್ಪು ಮಾಹಿತಿಗಳು ಹೋಗಬಾರದು ಎಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಈಗ ಶ್ರೀರಾಮುಲುರವರು ಉತ್ತರ ಹೇಳುವುದಕ್ಕೆ ಇನ್ನೂ ಸಮಯವಿದೆ. ನೀವು ಯೀಲ್ಡ್ ಆಗ ಬೇಡಿ. ದಯವಿಟ್ಟು ಮುಂದುವರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರೆವಿನ್ಯೂ ಮಿನಿಸ್ಟರ್ ಮಾತನಾಡಲಿಕ್ಕೆ ನಿಂತರೆ ನಾವು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ? ಒಳ್ಳೆಯ ಕಥೆ ಹೇಳುತ್ತಿದ್ದೀರಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರಿಬ್ಬರೂ ಒಂದೇ ಜಿಲ್ಲೆಯವರು, ಅದಕ್ಕೆ ಒಬ್ಬರಿಗೊಬ್ಬರು ಈಲ್ಡ್ ಆಗುತ್ತಿರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ಮಾನ್ಯ ನಾಯ್ಡು ಅವರು ಬ್ಲಾಕ್ ಮೇಲ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಬ್ಲಾಕ್ ಕೋಟ್ ಹಾಕಿಕೊಂಡು ಬಂದಿರುವವರು ಅವರು. ನಾವು ಬರೇ ವೈಟ್ ಬಟ್ಟೆ ಹಾಕಿಕೊಂಡು ಬಂದಿದ್ದೇವೆ. ನಮ್ಮ ಮೇಲೆ ಬ್ಲಾಕ್‌ಮೇಲ್ ಮಾಡುತ್ತಾರೆಂದು ಹೇಳುತ್ತಾರೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಸಿ.ಪಿ.ಎಂ. ಅವರ ಹತ್ತಿರ ಬ್ಲಾಕ್ ತಂತ್ರಗಾರಿಕೆ ಇರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನೀವು ಯಾವುದೇ ಕೋಟ್ ಹಾಕಿಕೊಂಡರೂ ನಮ್ಮ ರಾಜೇಂದ್ರನ್ ಅವರು ನಿನ್ನೆ ಹಾಕಿಕೊಂಡ ಬಂದ ಕೋಟಿನಷ್ಟು ಚೆನ್ನಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಯಿತು ಬಿಡಿ, ಅದು ನನಗೂ ರಾಜೇಂದ್ರನ್‌ರವರಿಗೆ ಬಿಟ್ಟಂಥ ವಿಚಾರ, ಅದರ ಬಗ್ಗೆ ನೀವ್ಯಾಕೆ ತಲೆಕಡಿಸಿಕೊಳ್ಳುತ್ತೀರಿ. ಶ್ರೀರಾಮುಲುರವರು ಆ ಪ್ರೆಸ್ ಮೀಟ್‌ಲ್ಲಿ ಇರಲಿಲ್ಲ ಎಂದು ಜಗದೀಶ್ ಶೆಟ್ಟರ್‌ರವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ನಾವೂ ಸಹ ಒಪ್ಪಿದ್ದೇವೆಂದೇ ಇಟ್ಟುಕೊಳ್ಳೋಣ, ಒಂದು ವಾರದಿಂದ ಈ ಸದನದಲ್ಲಿ ಆ ವಿಚಾರ ಚರ್ಚೆಯಾಗುತ್ತಿದೆ, ಇದು ರೆಕಾರ್ಡ್‌ಗೆ ಹೋಗಬಾರದು ಎಂದು ಶೆಟ್ಟರು ಹೇಳುತ್ತಿದ್ದಾರೆ, ನಿನ್ನೆ ಎಷ್ಟು ಸಲ ಅದೇ ವಿಚಾರ ರೆಕಾರ್ಡ್‌ಗೆ ಹೋಗಿದೆ ತೆಗೆದು ನೋಡಿಸಿ, ನಿನ್ನೆ, ಮೊನ್ನೆ ಆಚೆ ಮೊನ್ನೆ ಎಷ್ಟು ಸಲ ಶ್ರೀರಾಮುಲುರವರು ಆ ಪ್ರೆಸ್‌ಮೀಟ್‌ನಲ್ಲಿ ಹಾಜರಿದ್ದರು ಎನ್ನುವುದು ದಾಖಲಾಗಿದೆ, ರೆಕಾರ್ಡ್ ತೆಗೆಸಿ ನೋಡಿ. ಜಗದೀಶ್ ಶೆಟ್ಟರ್ ಹೇಳಿದ್ದನ್ನೇ ಒಪ್ಪಿಕೊಂಡರೂ ಸಹ ಒಂದು ವಾರದಿಂದ ಶ್ರೀರಾಮುಲುರವರ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಆ ಮನುಷ್ಯ ಇದುವರೆಗೂ ಬಾಯಿಯನ್ನೇ ಬಿಟ್ಟಿಲ್ಲ. 'ನಾನು ಆ ಪ್ರೆಸ್ ಮೀಟ್‌ನಲ್ಲಿ ಇದ್ದೆ ಅಥವಾ

ಇಲ್ಲವೆಂದು' ಹೇಳಿಲ್ಲ. ಜೊತೆಗೆ ಮಾನ್ಯ ಶ್ರೀರಾಮುಲುರವರು ಭಾರೀ ಸ್ಪಷ್ಟವಾಗಿ ಹೇಳಿದ್ದಾರೆ, 'ನಾನು ಅಲ್ಲಿ ಇದ್ದದ್ದು ನಿಜ, ನಾನು ಹೋದಂಥ ಸಂದರ್ಭದಲ್ಲಿ ಪತ್ರಿಕಾಗೋಷ್ಠಿ ನಡೆಯುತ್ತದೆಂಬ ವಿಷಯ ನನಗೆ ಗೊತ್ತಿರಲಿಲ್ಲ, ನಾನು ಹೋದೆ, ಪತ್ರಿಕಾಗೋಷ್ಠಿಯಲ್ಲಿ ಇಂತಹ ವಿಚಾರವನ್ನು ಮಾತನಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ. ನಾನು ಅಲ್ಲಿ ಇದ್ದದ್ದು ನಿಜ' ಎಂದು ಹೇಳಿದ್ದಾರೆ, ಟಿ.ವಿ.,ಯಲ್ಲಿ ತೋರಿಸಿದ್ದಾರೆ, ದಿನಪತ್ರಿಕೆಗಳಲ್ಲಿ ವರದಿಯಾಗಿವೆ, ಅವರು ಮನೆಯಲ್ಲೇ ಇದ್ದೆ ಎಂದು ಹೇಳಿದ್ದಾರೆ, ಹೌದೋ? ಅಲ್ಲವೋ? ಇಷ್ಟೆಲ್ಲಾ ಚರ್ಚೆ ಆಗಿರಬೇಕಾದರೆ ನಾನು ಸದನಕ್ಕೆ ತಪ್ಪು ಮಾಹಿತಿ ಕೊಡುವಂಥ ಪ್ರಶ್ನೆ ಎಲ್ಲಿ ಬಂತು? ನಾನೊಬ್ಬನೇ ಈ ವಿಚಾರ ಹೇಳುತ್ತಿಲ್ಲ, ನಾಲ್ಕು ದಿವಸಗಳಿಂದ ಎಲ್ಲರೂ ಈ ವಿಚಾರವನ್ನು ಹೇಳಿದ್ದಾರೆ. ಹಾಗಾಗಿ ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೇನಾದರೂ ಘನತೆ, ಗೌರವ, ಮಾನ ಮರ್ಯಾದೆ, ಜವಾಬ್ದಾರಿಯೇನಾದರೂ ಇದ್ದರೆ ಒಬ್ಬ ಕ್ಯಾಬಿನೆಟ್ ಮಂತ್ರಿಯ ಮುಂದೆ ಆ ಕ್ಯಾಬಿನೆಟ್ ಮಂತ್ರಿಮಂಡಲದ ಸದಸ್ಯರಾಗಿರುವಂಥ ಮುಖ್ಯಮಂತ್ರಿಗಳ ಮೇಲೆ ಒಂದು ಆಪಾದನೆ ಮಾಡುವಾಗ ಬಾಯಿ ಮುಚ್ಚಿಕೊಂಡು ಕುಳಿತಿದ್ದರೆ, ಆ ಮಂತ್ರಿಯನ್ನು ಅವರು ಇನ್ನೂ ಹೇಗೆ ಅವರ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡಿದ್ದಾರೆ? How they are keeping him in the Cabinet? If they are having any sense of responsibility, sense of integrity ಸ್ವಲ್ಪ ಏನಾದರೂ ಇದ್ದರೆ ಆ ಮಂತ್ರಿಯನ್ನು ಇನ್ನೂ ಏಕೆ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡಿದ್ದಾರೆ? ಎರಡನೆಯದು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟ ವಿಚಾರವೆಂದು ನಮ್ಮ ಸ್ನೇಹಿತರಾದ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಹೇಳಿದರು, ನಾನು ಖಂಡಿತ ಒಪ್ಪುತ್ತೇನೆ, ಸರ್ಕಾರದ ಮೇಲೆ ಆಪಾದನೆ ಮಾಡದೆ ನೀವೂ-ನೀವು ಅನಂತಕುಮಾರ್‌ರವರ ಮೇಲೆ ಯಡಿಯೂರಪ್ಪ, ಯಡಿಯೂರಪ್ಪನವರ ಮೇಲೆ ಅನಂತ್ ಕುಮಾರ್, ಅವರ ಮೇಲೆ, ಇವರ ಮೇಲೆ ನೀವೇನಾದರೂ ಆರೋಪ, ಪ್ರತ್ಯಾರೋಪಗಳನ್ನು ಮಾಡಿದರೆ ಅದು ನಿಮ್ಮ ಪಾರ್ಟಿ ವಿಚಾರ, ಅದರ ಬಗ್ಗೆ ನೀವು ಸದನದಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆಯಿಲ್ಲವೆಂಬುದನ್ನು ನಾನು ಖಂಡಿತ ಒಪ್ಪುತ್ತೇನೆ. That is purely your internal affair, ನಿಮ್ಮ party affair, ಅದು ನಮಗೆ ಸಂಬಂಧವಿಲ್ಲ, ಅದನ್ನು ಕೇಳಲಿಕ್ಕೆ ನಮಗೆ ಹಕ್ಕೂ ಸಹ ಇಲ್ಲ. ಆದರೆ ನಾವಿಲ್ಲಿ ಪ್ರಶ್ನೆ ಕೇಳುತ್ತಿರುವುದು, which has been made against the Chief Minister of this Karnataka State. ಮುಖ್ಯಮಂತ್ರಿಯವರ ಮೇಲೆ ಆಪಾದನೆ ಮಾಡಿದ ಮೇಲೆ ಆ ಸರ್ಕಾರದಲ್ಲಿ ಭಾಗಸ್ಥರಾಗಿರುವಂತಹ ನೀವು

ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಇದ್ದೀರಿ, ಕ್ಯಾಬಿನೆಟ್‌ನಿಂದ ಶ್ರೀರಾಮುಲುರವರನ್ನು ತೆಗೆಯಲಿಲ್ಲ, ಜನಾರ್ಧನ ರೆಡ್ಡಿಯವರಿಗೆ ಒಂದು ನೋಟಿಸ್ ಸಹ ಕೊಡಲಿಲ್ಲ. ಇನ್ನೂ ವಿಪರ್ಯಾಸ ಏನು ಗೊತ್ತೇ ಅಧ್ಯಕ್ಷರೇ, ಕರುಣಾಕರ ರೆಡ್ಡಿಯವರು ಲೋಕಸಭಾ ಸದಸ್ಯರು ಮತ್ತು ಕೆಲವು ಬಿ.ಜೆ.ಪಿ. ಮುಖಂಡರು ಅವತ್ತು ರಾತ್ರಿ 1.30 ಗಂಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡುತ್ತಾರೆ, ಅದೇ ಸಂದರ್ಭದಲ್ಲಿ ಜನಾರ್ಧನರೆಡ್ಡಿಯವರು ಉಪಮುಖ್ಯಮಂತ್ರಿಗಳವರ ಮನೆಯಲ್ಲಿ ಕುಳಿತಿದ್ದಾರೆ, ಜನಾರ್ಧನರೆಡ್ಡಿಯವರು ಏತಕ್ಕೆ ಹೋಗಲಿಲ್ಲವೆಂದರೆ ಅವರು ಉಪ ಮುಖ್ಯಮಂತ್ರಿಗಳವರ ಮನೆಯಲ್ಲಿ ಕುಳಿತು ಮಾತನಾಡುತ್ತಿದ್ದಾರೆ. ಇವರು ಉಪ ಮುಖ್ಯಮಂತ್ರಿ, ಅವರು ಮುಖ್ಯಮಂತ್ರಿ ! ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರತಕ್ಕಂಥ ಒಬ್ಬ ಲೋಕಸಭಾ ಸದಸ್ಯ ಅದೇ ಪಕ್ಷದ ಮುಖಂಡ ಮುಖ್ಯಮಂತ್ರಿಗಳ ಜೊತೆ 'ಏನೋ ಮಿಸ್ಟೇಕ್ ಆಗಿದೆ, ಬಾಯಿ ತಪ್ಪಿ ಮಾತನಡಿದ್ದಾರೆ, ನಾವು ಅದನ್ನು ಸರಿಪಡಿಸುತ್ತೇವೆಂದು ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತಾರೆ. ಜನಾರ್ಧನರೆಡ್ಡಿಯವರು ಬಂದು ಉಪಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡುತಿದ್ದಾರೆ, ಇದು ಏನು ತೋರಿಸುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಸರ್, ನನಗೆ ನಿಮ್ಮ ಬಗ್ಗೆ ತುಂಬಾ ಗೌರವವಿದೆ. ಯಾವುದು ಸತ್ಯವಲ್ಲದ ಸಂಗತಿಗಳನ್ನು, ಸತ್ಯಕ್ಕೆ ದೂರವಾದ ಸಂಗತಿಯನ್ನು ಈ ಮನೆಯಲ್ಲಿ ನಿಂತು ಮಾತನಾಡಬೇಕಾದರೆ, ನಾನು ಇಲ್ಲಿ ಕುಳಿತಿರುವಾಗಲೇ, ತಾವು ಹೇಳುವ ವಿಚಾರಗಳ ಬಗ್ಗೆ ಯೋಚನೆ ಮಾಡಿ ಮಾತನಾಡಬೇಕಾಗುತ್ತದೆ. ಇದು ಸತ್ಯಕ್ಕೆ ದೂರವಾದಂಥ ಸಂಗತಿ. ಜನಾರ್ಧನರೆಡ್ಡಿಯವರು ವಿಧಾನಪರಿಷತ್ ಸದಸ್ಯರು, ಇನ್ನೊಬ್ಬರು ನಮ್ಮ ಲೋಕಸಭಾ ಸದಸ್ಯರು, ಎರಡು ಮೂರು ಬಾರಿ ತಾವು ಹೇಳಿದ್ದೀರಿ, ಒಂದು ಶ್ರೀರಾಮುಲು ಮಂತ್ರಿಗಳು, ಅವರು ಆ ಪ್ರೆಸ್ ಮೀಟ್‌ನಲ್ಲಿದ್ದರು ಎಂದು ಹೇಳುತ್ತೀರಿ, ಇದು ಸತ್ಯಕ್ಕೆ ದೂರವಾದ ಸಂಗತಿ, ಎರಡನೆಯದು ಜನಾರ್ಧನರೆಡ್ಡಿಯವರು ಯಾವಗಲೂ ನನ್ನನ್ನು ಭೇಟಿ ಮಾಡುತ್ತಿರುತ್ತಾರೆ. ಆದರೆ ಅವತ್ತು ರಾತ್ರಿ ಜನಾರ್ಧನರೆಡ್ಡಿಯವರು ನಮ್ಮ ಮನೆಯಲ್ಲಿದ್ದರು ನಮ್ಮ ಎಂ.ಪಿ. ಹಾಗೂ ಮತ್ತಿತರರೆಲ್ಲಾ ನಮ್ಮ ಮುಖ್ಯಮಂತ್ರಿಗಳ ಮನೆಗೆ ಹೋಗಿದ್ದರು, ಮುಖ್ಯಮಂತ್ರಿಗಳ ಮನೆಗೆ ಯಾರು ಹೋಗಿದ್ದರೋ ಅದು ನನಗೆ ಗೊತ್ತಿಲ್ಲ, ಆ ದಿವಸ ರಾತ್ರಿ ಜನಾರ್ಧನರೆಡ್ಡಿಯವರು ನಮ್ಮ ಮನೆಯಲ್ಲಿರಲಿಲ್ಲ. ಇದು ಸತ್ಯಕ್ಕೆ ದೂರವಾದಂಥ ಮಾತು. ನನಗೆ ಇದರಲ್ಲೇನು ಭಯ, ನಮ್ಮ ಮನೆಯಲ್ಲಿ ನಮ್ಮ ಪಕ್ಷದ ಎಂ.ಎಲ್.ಸಿ. ನನ್ನ ಜೊತೆಯಿದ್ದರೂ ಎಂದು ಹೇಳಲಿಕ್ಕೆ ನನಗೆ

ಸಂಕೋಚವೇಕೆ? ಈಗಲೂ ಅವರು ನಮ್ಮ ಜೊತೆಯಲ್ಲಿಯೇ ಇದ್ದಾರೆ, ಅವರು ಏನು ಹೇಳಿಕೆ ಕೊಡುತ್ತಾರೆ? ಅವರೇನು ಮಾತನಾಡುತ್ತಾರೆ? ಇದರ ಬಗ್ಗೆ ಚರ್ಚೆ ಆಗುತ್ತಿದೆ, ಇದು ಬಹಳ ಮಹತ್ವವಾದುದು, ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಾವೂ ಕೂಡ ಸಿದ್ಧರಿದ್ದೇವೆ. ಚರ್ಚೆ ಮಾಡಿ, ಆದರೆ ನೀವು ಹೇಳಿದಂಥ ಸತ್ಯ ಸಂಗತಿ ಅಲ್ಲ. ಮುಖ್ಯಮಂತ್ರಿಗಳನ್ನು ಯಾರು ಅಂದು ಭೇಟಿ ಮಾಡಿದ್ದರೋ ನನಗೆ ಗೊತ್ತಿಲ್ಲ, ಆದರೆ ಆ ಟೈಮಿನಲ್ಲಿ ಜನಾರ್ಧನರೆಡ್ಡಿಯವರು ಇಲ್ಲಿ ಕುಳಿತಿದ್ದರು, ಎಂ.ಪಿ. ಮತ್ತು ಉಳಿದ ಸದಸ್ಯರೆಲ್ಲಾ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರು ಎನ್ನುವುದು ಸತ್ಯಕ್ಕೆ ದೂರವಾದ ಸಂಗತಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಈ ಐದು ದಿವಸಗಳಿಂದ ಇಲ್ಲಿ ಏನು ಆರೋಪ, ಪ್ರತ್ಯಾರೋಪ, ಅಪವಾದಗಳ ಬಗ್ಗೆ ಚರ್ಚೆ ನಡಯುತ್ತಿದೆ, ಇದ್ಯಾವುದಕ್ಕೂ ಯಾರ ಹತ್ತಿರವೂ ಡಾಕ್ಯೂಮೆಂಟರಿ ಎವಿಡೆನ್ಸ್ ಇಲ್ಲ, ಯಾರ ಹತ್ತಿರವೂ ಇಲ್ಲ, ನಮ್ಮ ಹತ್ತಿರವಂತೂ ಏನೇನೂ ಇಲ್ಲ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಯಾವುದೇ ಡಾಕ್ಯುಮೆಂಟರಿ ಎವಿಡೆನ್ಸ್ ಇಲ್ಲ, ಜನಾರ್ಧನ ರೆಡ್ಡಿಯವರು ಯಡಿಯೂರಪ್ಪನವರ ಮನೆಯಲ್ಲಿ ಕುಳಿತಿದ್ದರು ಎನ್ನುವುದಕ್ಕೂ ಸಹ ನಮ್ಮ ಹತ್ತಿರ ಯಾವುದೇ ಡಾಕ್ಯುಮೆಂಟ್ಸ್ ಎವಿಡೆನ್ಸ್ ಏನೂ ಇಲ್ಲ. ಆದರೆ ಪತ್ರಕರ್ತರು ಹೋಗಿ ಕರುಣಾಕರ ರೆಡ್ಡಿ ಮತ್ತು ಇನ್ನು ಕೆಲವರು ಬಿ.ಜೆ.ಪಿ ಮುಖಂಡರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸಮಾಧಾನ ಮಾಡುತ್ತಿರುವಂಥ ಪರಿಸ್ಥಿತಿಯಲ್ಲಿ ಜನಾರ್ಧನರೆಡ್ಡಿಯವರು ಏಕಿರಲಿಲ್ಲವೆಂದು ಕೇಳಿದರೆ, ಆ ಮನುಷ್ಯ 'ನಾನು ಉಪ ಮುಖ್ಯಮಂತ್ರಿಗಳವರ ಮನೆಯಲ್ಲಿದ್ದೆ, ಅದಕ್ಕೋಸ್ಕರ ನನಗೆ ಮುಖ್ಯಮಂತ್ರಿಗಳವರ ಮನೆಗೆ ಹೋಗಲಿಕ್ಕೆ ಆಗಲಿಲ್ಲ' ಎಂದು ನೇರವಾಗಿ ಪತ್ರಿಕೆಯವರಿಗೆ ಹೇಳಿದ್ದಾರೆ. ಇದು ಪತ್ರಿಕಾ ವರದಿಯಷ್ಟೇ. ನಮ್ಮ ಹತ್ತಿರ documentary evidence ಏನೂ ಇಲ್ಲ, ನಾವೇನೂ ವಿಡಿಯೋ ತೆಗೆದಿಟ್ಟಿಲ್ಲ. ಅದು ಪತ್ರಿಕಾ ವರದಿ ಸುಳ್ಳು ಎಂದಾದರೆ ಅದು ಬೇರೆ ಪ್ರಶ್ನೆ That is altogether a different thing. ನಾನು ಹೇಳುತ್ತಿರುವುದು ಏಕೆಂದರೆ, ಇವರಲ್ಲಿರುವ ಆಂತರಿಕ ಕಿತ್ತಾಟದ ಗಂಭೀರತೆ ಏನು ಎಂಬುದರ ಬಗ್ಗೆ ಹೇಳುತ್ತಿದ್ದೇನೆ. ಜನಾರ್ಧನರೆಡ್ಡಿಯವರು ಉಪಮುಖ್ಯಮಂತ್ರಿಯವರ ಮನೆಯಲ್ಲಿ ಕುಳಿತಿದ್ದರೇ? ಕರುಣಾಕರ ರೆಡ್ಡಿಯವರು ಮುಖ್ಯಮಂತ್ರಿಗಳವರ ಮನೆಗೆ ಹೋಗಿದ್ದರೆ? ಸಮಾಧಾನ ಪಡಿಸಿದರೇ? That is all different things. That is all hypothetical questions. The question is how internal crisis of the B.J.P. is sharpening every day in and out and how it is affecting this coalition

Government? No.1. No.2, how this sharp contradicts in the internal contradiction of this coalition Government between J.D(S) and B.J.P. has sharpening every day in and out and that affects the whole administration of the State. About that only, we are concerned. We are not concerned about their internal biekerings.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಹೇಳುವುದು ಸರಿ. ನಾನು ಮಧ್ಯದಲ್ಲಿ ಪ್ರವೇಶಿಸುವುದಿಲ್ಲ, ದಯಮಾಡಿ ನಿಮಗೆ ಆಸಕ್ತಿಯಿದ್ದಿದ್ದರೆ, ನಿಮ್ಮ ಐದು ಜನ ಸ್ನೇಹಿತರನ್ನು ನಮ್ಮ ಶಾಸಕಾಂಗ ಪಕ್ಷದ ಜಂಟಿ ಶಾಸನಸಭೆಗೆ ಕರೆಯುತ್ತಿದ್ದೆವು. ಇಷ್ಟೊಂದು ನಮ್ಮಲ್ಲಿ ಒಗ್ಗಟ್ಟಾಗಿರಬೇಕೆಂದಿದ್ದರೆ ನಮ್ಮ ಸರ್ಕಾರದ ರಚನೆ ಮಾಡುವಾಗ ಎಷ್ಟು ಒಗ್ಗಟ್ಟು, ಆತ್ಮವಿಶ್ವಾಸ ನಿಮ್ಮಲ್ಲಿತ್ತೋ ಅದಕ್ಕಿಂತ ನೂರು ಪಟ್ಟು ಹೆಚ್ಚಾಗಿ ನಿನ್ನೆ ನಮ್ಮ ಜಂಟಿ ಜೆ.ಡಿ.ಎಸ್. ಹಾಗು ಬಿ.ಜೆ.ಪಿ ಪಕ್ಷದ ಶಾಸನ ಸಭೆ ಹೋಟೆಲ್ ಅಶೋಕದಲ್ಲಿ ನಡೆಯಿತು, ಇನ್ನು ನಲವತ್ತು ತಿಂಗಳು ಯಾವ ರೀತಿ ಆಡಳಿತ ನಡೆಸಬೇಕು, ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಯಾವರೀತಿ ಒಟ್ಟಾಗಿ ಹೋಗಬೇಕು ಎಂಬುದರ ಬಗ್ಗೆ ಚರ್ಚೆಯಗಿದೆ, ಇನ್ನು ಮುಂದೆ ನಿಮಗೆ ಆಸಕ್ತಿಯಿದ್ದರೆ ನಿಮ್ಮ ಐದು ಜನ ಸದಸ್ಯರನ್ನು ಸಭೆಗೆ ಕರೆಯುತ್ತೇವೆ. ರಮೇಶ್‌ಕುಮಾರ್ ದೂರದಲ್ಲಿ ಕುರ್ಚಿಯಲ್ಲಿ ಕುಳಿತು ನೋಡಿ ಕಾಂಗ್ರೆಸ್‌ನವರು ಹೇಗೆ ಒಗ್ಗಟ್ಟಾಗಿ ಬಂದರು, ನಾವು ಹೇಗೆ ಒಗ್ಗಟ್ಟಾಗಿ ಇದ್ದೇವೆ ಎಂದು.

(ಗೊಂದಲ)

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಯಡಿಯೂರಪ್ಪನವರೇ, ಎಲ್ಲಾ ಸಮ್ಮಿಶ್ರ ಸರ್ಕಾರಗಳು ಬಿದ್ದು ಹೋಗುವವರೆಗೆ ಒಗ್ಗಟ್ಟಾಗೇ ಇರುತ್ತವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಈ ಕಡೆಯಲ್ಲಿಯೂ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದರು, ಈಗ ಆ ಕಡೆಯಲ್ಲಿಯೂ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದಾರೆ, ಬಹಳ ಚೆನ್ನಾಗಿ ನಾಲ್ಕು ತಿಂಗಳಲ್ಲಿ ಆ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದಾರೆ. ನಟಭಯಂಕರ ಎನ್ನುವಂಥ ಅತ್ಯಂತ ಹೆಚ್ಚಿನ ಪಾತ್ರ ಅಂದರೆ ಸುಬ್ಬಯ್ಯನಾಯ್ಡು, ಜೆ.ಎಚ್. ವೀರಣ್ಣನವರು, ಹಿರಣ್ಣಯ್ಯನವರು ಅನೇಕ ದೊಡ್ಡ ದೊಡ್ಡ ಕಲಾವಿದರು ಮಾಡಿದಂಥ ಪಾತ್ರಗಳಂತೆ...

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ ಒಂದು ದಿವಸ ಬೃಹನ್ನಳೆ ಎನ್ನುತ್ತಾರೆ, ಒಂದು ದಿವಸ ನಟ ಭಯಂಕರ ಎನ್ನುತ್ತಾರೆ, ನೀವು ಯಾವುದಾದರೊಂದು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಬೃಹನ್ನಳೆ ಎನ್ನುವುದೂ ಸಹ ಪಾತ್ರವೇ, ಅದೆಷ್ಟು ನಾಜೂಕಾಗಿ ಪಾತ್ರವನ್ನು ನೀವು ಮಾಡುತ್ತೀರಿ ಅದಕ್ಕೆ ನಟನಾ ಚಾತುರ್ಯ ಎನ್ನುತ್ತಾರೆ, ಬಹಳ ಚೆನ್ನಾಗಿ ಪಾತ್ರ ಮಾಡುತ್ತೀರಿ. ನಿಜವಾಗಿಯೂ ನೀವು ರಾಜಕಾರಣಕ್ಕೆ ಬರದೆ ಬಹುಶಃ ರಂಗಭೂಮಿಯಲ್ಲಿದ್ದಿದ್ದರೆ ನೀವು ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಯನ್ನು ಪಡೆದುಕೊಂಡು ಈ ರಾಜ್ಯದಲ್ಲಿ ಎಲ್ಲಾ ಕಲಾವಿದರನ್ನು ಮೀರಿಸಿ ಅತ್ಯುನ್ನತವಾದ ಸ್ಥಾನಕ್ಕೆ ನೀವು ಹೋಗುತ್ತಿದ್ದೀರಿ ಎಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಹೊಸದಾಗಿ ಕಲಾವಿದರ ಬಗ್ಗೆ ಮಾತನಾಡಬೇಕಾದರೆ, ಭಾಗವತರು ಇರಬೇಕಲ್ಲಾ ಸಾರ್. ನಾನು ಮೊದಲನೇಸಾರಿ ವಿಧಾನ ಸಭೆಗೆ ಬಂದಾಗ ಯಡಿಯೂರಪ್ಪನವರು ವಾಟಾಳ್ ನಾಗರಾಜ್‌ರವರ ವಿಶ್ವಾಸ, ಆತ್ಮೀಯ, ಸ್ನೇಹಿತ, ಅವರಿಬ್ಬರದ್ದೂ ನೋಡಿದ ಮೇಲೆ ನಿಜಕ್ಕೂ ಕೂಡ ಇವರು ಯಾವುದೇ ನಾಟಕದಲ್ಲಿ ಯಶಸ್ವಿಯಾಗುತ್ತಾರೆ ಎಂಬ ವಿಶ್ವಾಸ ನನಗೆ ಅವತ್ತೂ ಇತ್ತು, ಇವತ್ತಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಅವರೂ ನಮ್ಮ ಜೊತೆ ಸೇರಿ, ಇನ್ನೂ ಚೆನ್ನಾಗಿ ನಾಟಕವಾಡುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾಟಕ ಆಡುವುದರಲ್ಲಿ ಅವರೇ ನಮ್ಮ ಗುರುಗಳು. ನಿಮ್ಮ ಮಾರ್ಗದರ್ಶನದಲ್ಲೇ ನಾವು ಮಾಡುತ್ತಾ ಇರುವುದು.

ಶ್ರೀ ಎಸ್. ರಾಜೇಂದ್ರನ್ : ಗಂಡ ಹೆಂಡತಿ ಮಾತನಾಡಿಕೊಳ್ಳುತ್ತಾರಂತೆ. ಏನೆಂದರೆ, ಮಾರ್ಕೆಟ್‌ನಲ್ಲಿ, ಷಾಪಿಂಗ್‌ನಲ್ಲಿ ಬಂದು ನೋಡಿ, ನನ್ನ ಹೆಂಡತಿ ಜೊತೆಯಲ್ಲಿ ಎಷ್ಟು ಪ್ರೀತಿ ತೋರಿಸುತ್ತಿನೆ ಅಂತ. ಮನೆಯಲ್ಲಿ ಮಾತ್ರ ನಾನು ಸಪರೇಟಾಗಿ ನಿಲ್ಲುವುದಕ್ಕಾಗುತ್ತದೆಯೇ? ಇದು ಮನೆ, ಇಲ್ಲಿ ನೀವು ಪ್ರೀತಿ ತೋರಿಸದೆ, ಅಲ್ಲಿ ಹೋಗೋಣ ಎಂದರೆ ನಾವು ನೋಡುವುದಕ್ಕಾಗುತ್ತದೆಯೇ?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಆನಂದಕುಂದ ಹೆಗಡೆ ಎಂದು ಶಾಸಕರಾಗಿದ್ದರು. ಅವರು ಒಂದು ಕತೆ ಹೇಳಿದರು. ಮದುವೆಯಾದ ಟೈಮಿನಲ್ಲಿ ಹೆಂಡತಿ ಹೇಳಿದಹಾಗೆ ಗಂಡ ಕೇಳುವುದು. ಸ್ವಲ್ಪ ಸಮಯದ ನಂತರ ಗಂಡ ಹೇಳಿದ ಹಾಗೆ ಹೆಂಡತಿ ಕೇಳುವುದು. ಅದರ ನಂತರ, ಅವರಿಬ್ಬರು ಮಾತನಾಡುವುದು ಅಕ್ಕಪಕ್ಕದ ಮನೆಯವರ ಮಾತು ಕೇಳುವುದು ಹಾಗೆ ನಾವು ಕೇಳುತ್ತಾ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಒಂದು ವಿಚಾರವನ್ನು ಬಾರಿ ಚೆನ್ನಾಗಿ ಹೇಳಿದರು. ಬಿ.ಜೆ.ಪಿ.ಯಲ್ಲಿ ಆಂತರಿಕ

ಭಿನ್ನಾಭಿಪ್ರಾಯ ಇಲ್ಲ. ನಮ್ಮ ಮಿತ್ರಪಕ್ಷಗಳ ಮಧ್ಯೆ ಬಾರಿ ಒಗ್ಗಟ್ಟು ಇದೆ. ಯಾವುದೇ ತೊಂದರೆ ಇಲ್ಲ ಎಂದು. ಹಾಗಾದರೆ, ನಾನೊಂದು ಪ್ರಶ್ನೆಯನ್ನು ಯಡಿಯೂರಪ್ಪನವರಿಗೆ ಕೇಳುತ್ತೇನೆ. ಆನಂತಕುಮಾರ್ ಮತ್ತಿತರೆಲ್ಲಾ ಸೇರಿ ಪತ್ರಿಕಾ ಸಮ್ಮೇಳನದಲ್ಲಿ ಎರಡನೇ ದಿವಸ, ಜನಾರ್ಧನ ರೆಡ್ಡಿಯವರು ಆಪಾದನೆ ಮಾಡಿದ ಮಾರನೇ ದಿವಸ ಏನೆಂದು ಹೇಳಿದರು ಸಾರ್. ಏನು ಹೇಳಿದರು ಅನಂತಕುಮಾರ್. ಇವರು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ, ಲೋಕಸಭಾ ಸದಸ್ಯರು. ಇವರು ಪತ್ರಿಕಾ ಸಮ್ಮೇಳನ ಮಾಡಿ ಮಾರನೇ ದಿವಸವೇ ಏನೇನು ಡಿಮ್ಯಾಂಡ್ ಮಾಡಿದರು? ನೀವು, ಮಿತ್ರಪಕ್ಷಗಳಾದ ನಾವು ಬಾರಿ ಒಗ್ಗಟ್ಟಾಗಿದ್ದೇವೆಂದು ಹೇಳುತ್ತೀರಲ್ಲಾ, ನಾವು ಇಲ್ಲಿ ಬಿ.ಎಂ.ಐ.ಸಿ. ವಿಚಾರವನ್ನು ಚರ್ಚೆ ಮಾಡುವಾಗ, ಮುಖ್ಯಮಂತ್ರಿಗಳು ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲು ನಾನು ಬಿಲ್ಲನ್ನು ತಂದೇತರುತ್ತೇನೆ, ಆ ಬಿಲ್‌ತರುವುದರಲ್ಲಿ ನನ್ನ ಅಧಿಕಾರ ಹೋದರೂ ನಾನು ತಯಾರಿದ್ದೇನೆ, ನಾನು ಎಷ್ಟು ದಿವಸ ಮುಖ್ಯಮಂತ್ರಿಯಾಗಿರುತ್ತೇನೋ ನನಗೆ ನಂಬಿಕೆ ಇಲ್ಲ. ಈ ಮಾತನ್ನು ಸ್ಪಷ್ಟವಾಗಿ ಅಷ್ಟು ವೀರಾವೇಷದಿಂದ ಹೇಳಿದರು. ಆಮೇಲೆ, ಮಾನ್ಯ ಯಡಿಯೂರಪ್ಪನವರು ಹೇಳಿಕೆ ಕೊಟ್ಟರು. ನಾವು ರೈತರ ಜಮೀನನ್ನು ವಾಪಸ್ಸು ಕೊಡುವುದಕ್ಕೆ ತಯಾರಿದ್ದೇವೆಯೇ ಹೊರತು, ಬಿಲ್ ತರುವುದಕ್ಕೆ ತಯಾರಿಲ್ಲ ಎಂದು ಹೇಳಿದರೆ, ಇದು ಒಗ್ಗಟ್ಟೇ? ಯಾವುದಕ್ಕೋ ಸಂಬಂಧ ಇಲ್ಲದೇ ಇರುವುದನ್ನೆಲ್ಲಾ ಮಾತನಾಡುತ್ತೀರಿ. ಇದು ಯಾವ ಪಾರ್ಟಿ ಒಗ್ಗಟ್ಟು?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಹೇಳುತ್ತಿರುವುದು ಪೂರಾ ಅಸತ್ಯ ಎನ್ನುವುದಕ್ಕೆ ಅನಂತಕುಮಾರ್ ಅವರು ಚೈನಾದಲ್ಲಿದ್ದರು, ಆ ದಿನ ಪತ್ರಿಕಾಗೋಷ್ಠಿಯನ್ನೇ ಮಾಡಿಲ್ಲ. ಇದು ನಿಮಗೆ ಗೊತ್ತಿಲ್ಲ ಅಷ್ಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ, ಪತ್ರಿಕೆಯವರನ್ನು ಕೇಳೋಣ, ಅವರಿದ್ದರೋ ಯಾರಿದ್ದರೋ ನಮಗೆ ಗೊತ್ತಿಲ್ಲ. ಈಶ್ವರಪ್ಪನವರೇ, ನಾನು ಊಹೆ ಮಾಡಲಿಲ್ಲ. ಪತ್ರಿಕೆಯವರು ಇದ್ದಾರೆ, ಅವರು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಆ ಪತ್ರಿಕಾ ಹೇಳಿಕೆಯನ್ನಾದರೂ ತೋರಿಸಿ. ಈ ರೀತಿ ಅಸತ್ಯ ಸಂಗತಿಗಳನ್ನು ಸದನದ ಮುಂದೆ ತರುವಂಥಾದ್ದು ನಿಮ್ಮಂಥ ಹಿರಿಯ ಸದಸ್ಯರಿಗೆ ಶೋಭೆ ಅಲ್ಲ.

ಒಬ್ಬ ಸದಸ್ಯರು : ಈ ಗೋಬೆಲ್ ಸತ್ಯ ಗೊತ್ತಲ್ಲಾ, ಸಾವಿರ ಸಾರಿ ಸುಳ್ಳು ಹೇಳಿದರೆ, ಅದು ಸತ್ಯವಾಗುತ್ತಂತೆ. ಶ್ರೀರಾಮರೆಡ್ಡಿಯವರಿಗೆ, ಸಾವಿರ ಸಾರಿ ಸುಳ್ಳು ಹೇಳಿದರೆ, ಅದು ಸತ್ಯವಾಗುತ್ತದೆ ಎಂದು ಗೊತ್ತಿದ್ದೇ ಹೇಳುತ್ತಿದ್ದಾರೆ.

ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು : ಕೇಂದ್ರದ ಯು.ಪಿ.ಎ ಸರ್ಕಾರದಲ್ಲಿ ಕಾಂಗ್ರೆಸ್‌ನವರು ಏನು ಹೇಳುತ್ತಾರೆ, ಬೇರೆ ಬೇರೆ ಮಿತ್ರ ಪಾರ್ಟಿಯವರು ಏನು ಹೇಳುತ್ತಾರೆ ಎಂಬುದನ್ನೂ ಹೇಳಲಿ.

ಶ್ರೀ ವಾಟಾಳ್ ನಾಗರಾಜ್ : ಸದ್ಯಕ್ಕಂತೂ ಇಲ್ಲಿ ಭಾರತೀಯ ಜನತಾ ಪಾರ್ಟಿ ಮಂತ್ರಿಗಳೇ ಜಾಸ್ತಿ ಕುಳಿತಿದ್ದೀರಿ. ಜಯಕುಮಾರ್ ಒಬ್ಬರನ್ನು ಬಿಟ್ಟರೆ ಇನ್ಯಾರೂ ಜೆ.ಡಿ.ಎಸ್ ಮಂತ್ರಿಗಳು ಇಲ್ಲ. ಅವರೆಲ್ಲಾ ಎಲ್ಲಿ ಹೋದರೋ ಆ ವಿಚಾರ ಬೇರೆ. ಆದರೆ, ನೀವು ನಗುನಗುತ್ತಾ ಕುಳಿತಿದ್ದೀರಿ, ಅವರು ಮಾತ್ರ ಎಲ್ಲೋ ಒಂದು ಕಡೆ ದುಖಃದಲ್ಲಿ ಇದ್ದಹಾಗೆ ಇದ್ದಾರೆ. ಜಯಕುಮಾರ್‌ರವರೇ, ಏನು ಪರಿಸ್ಥಿತಿ ಎಂಬುದನ್ನು ಸ್ವಲ್ಪ ಹೇಳಿ. ನಿಮ್ಮದೇನಾದರೂ ಇದ್ದರೆ ನಾವು ಸರಿಪಡಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿಯೆಂದೂ ಸೃಷ್ಟಿ. ಪತ್ರಿಕಾಗೋಷ್ಠಿ ಮಾಡಿದರು, ಅವರು ಎಲ್ಲಿ ಹೋಗಿದ್ದಾರೆ, ಇವರು ನಗುತ್ತಿದ್ದಾರೆ, ಅವರು ದುಃಖದಲ್ಲಿದ್ದಾರೆ. ಇದು ನಾಟಕ ಹೌದೋ ಅಲ್ಲವೋ ಅವರು ನಾಟಕದ ಪಾತ್ರವನ್ನು ಚೆನ್ನಾಗಿ ಪ್ರದರ್ಶನ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತುಕೊಂಡು ಮಾಡಿದ್ದೇನು? ಆಮೇಲೆ, ಜಗದೀಶ್ ಶೆಟ್ಟರ್ ಇಲ್ಲಿ ಕುಳಿತುಕೊಂಡು ಏನು ಮಾಡಿದರು? ನೀವು ಇಲ್ಲಿ ಕುಳಿತೇ ಇರಲಿಲ್ಲವೇ? ನಿಮಗೆ ಇಲ್ಲಿಯ ಪರಿಚಯ ಇಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ನಾವು ಆ ಕಡೆ ಇದ್ದಾಗ, ಈ ರೀತಿಯ ಹಸಿ ಸುಳ್ಳು ಹೇಳುತ್ತಾ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಬರೀ ಬಿಸಿ ಸುಳ್ಳು ಹೇಳುತ್ತಾ ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಯಡಿಯೂರಪ್ಪನವರೇ, ಸಂತೋಷ. ನಮ್ಮ ಕಳಕಳಿ, ನೀವು ಒಗ್ಗಟ್ಟಾಗಿ ಸರಿಯಾದ ರೀತಿಯಲ್ಲಿ ಸರ್ಕಾರ ನಡೆಸಬೇಕು. ಅದು ಬಿಟ್ಟು, ಸರ್ಕಾರ ಉರುಳಿಸಿಬಿಡಿ ಎಂದಲ್ಲ ನಮ್ಮ ಕಳಕಳಿ. ನಮ್ಮದು ಆ ಕಳಕಳಿ ಅಲ್ಲ. ಆದರೆ, ಇದನ್ನೆಲ್ಲಾ ಸುಳ್ಳು ಎಂದು ಜಗದೀಶ್ ಶೆಟ್ಟರ್ ಹೇಳುತ್ತಿದ್ದಾರೆ. ಒಪ್ಪಿಕೊಳ್ಳೋಣ, ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. ನಿನ್ನೆ ನಿಮ್ಮ ಜಂಟಿ ಶಾಸಕರ ಸಭೆಯಲ್ಲಿ ಏನು ನಡೆಯಿತು? ಇದೂ ಪತ್ರಿಕೆಯಲ್ಲಿ ಬಂದಿರುವುದೇ. ನನ್ನ ಹತ್ತಿರ ಏನೂ ಎವಿಡೆನ್ಸ್ ಇಲ್ಲ. ಜಾಯಿಂಟ್ ಲೆಜಿಸ್ಲೇಟರ್ ಪಾರ್ಟಿ ಮೀಟಿಂಗ್‌ನಲ್ಲಿ ನಿಮ್ಮ ಪಕ್ಷದ ಶಾಸಕರೇ ಜನಾರ್ಧನ ರೆಡ್ಡಿ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೇಳಿದರೋ ಇಲ್ಲವೇ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಪಕ್ಷದ ಶಾಸಕರ ಸಭೆಯಲ್ಲಿ ಏನೇನು ಆಗುತ್ತಿದೆ ಎಂಬುದು ನಮಗೆ ಗೊತ್ತಿದೆ. ನೀವು ಪತ್ರಿಕೆ ಆಧಾರದ ಮೇಲೆ, ಪತ್ರಿಕೆಯಲ್ಲಿ ಬಂದಿರುವ ವಿಚಾರಗಳ ಮೇಲೆ ಈ ರೀತಿಯಲ್ಲಿ ಹೇಳಿಕೆ ಕೊಡುವುದು ಸರಿಯಲ್ಲ. ಅದೇನಾಯಿತು, ಇದೇನಾಯಿತು. ಅವರೇನು ಹೇಳಿದರು. ಇವರೇನು ಕೇಳಿದರು. ಇದೆಲ್ಲಾ ಬೇಡ. ನಿಮಗೆ ಏನು ಬೇಕು ಕೇಳಿ, ನಾವು ಉತ್ತರ ಕೊಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಜಗದೀಶ್ ಶೆಟ್ಟರಿಗೆ ಒಂದು ವಿಚಾರ ಗೊತ್ತಿರಬೇಕು. ಈ ನಾಲ್ಕು ದಿವಸಗಳಿಂದ ಏನೆಲ್ಲಾ ವಿಚಾರಗಳು ಚರ್ಚೆಯಾಗುತ್ತಿದಿಯೋ ಇವೆಲ್ಲವೂ ಪತ್ರಿಕಾ ವರದಿಗಳ ಆಧಾರದ ಮೇಲೆಯೇ ಚರ್ಚೆಯಾಗುತ್ತಿದೆಯೇ ಹೊರತು ಯಾರೂ ಡಾಕ್ಯುಮೆಂಟರಿ ಎವಿಡೆನ್ಸ್ ತೋರಿಸಿಲ್ಲ. ನಾನು ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಏನು ಹೇಳುತ್ತಾ ಇದ್ದೇನೆ, ನನ್ನ ಹತ್ತಿರ ಯಾವುದೇ ಡಾಕ್ಯುಮೆಂಟರಿ ಎವಿಡೆನ್ಸ್ ಇಲ್ಲ. ನಾನೂ ಹೇಳುತ್ತಿರುವುದು ಪತ್ರಿಕಾ ವರದಿ ಆಧಾರದ ಮೇಲೆಯೇ. ಜನಾರ್ಧನ ರೆಡ್ಡಿಯವರು ಹೇಳಿರುವ 150 ಕೋಟಿ ರೂ ವಿಚಾರವೂ ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು. ನಿನ್ನೆ ಕೂಡ ಜನಾರ್ಧನ ರೆಡ್ಡಿ ಡೆಲ್ಲಿಗೆ ಹೋಗುವುದಕ್ಕೆ ಮೊದಲು ಹೇಳಿದ್ದಾರೆ, ನಾನು ಯಾವುದೇ ಕಾರಣದಿಂದ ರಾಜಿಯಾಗುವುದಿಲ್ಲ, ನನ್ನ ಹತ್ತಿರ ಡಾಕ್ಯುಮೆಂಟ್ ಇದೆ ಎಂದು ಪತ್ರಕರ್ತರಿಗೆ ಹೇಳಿದ್ದಾರೆ. ನಾನು ಹೇಳುತ್ತಾ ಇರುವುದು ಇದೆಲ್ಲಾ ಪತ್ರಿಕಾ ಹೇಳಿಕೆಗಳೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಶಬ್ದವನ್ನೂ ಮಾತನಾಡಿಲ್ಲ. ಪತ್ರಿಕೆಯವರು ಊಹೆ ಮಾಡಿ ಬರೆದರೆ, ನಾನೇನು ಮಾಡಲಿ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ : ಹೋಗಲಿ ಸಾರ್. ಜನಾರ್ಧನ ರೆಡ್ಡಿಯವರು ಎಲ್ಲಿದ್ದಾರೆ ಸ್ವಲ್ಪ ಹೇಳಿ. ನಾವು ಡೆಲ್ಲಿಗೆ ಹೋದರು ಎಂದು ಹೇಳುತ್ತಾ ಇದ್ದೇವೆ. ಅವರು ನಿಮ್ಮ ಮನೆಯಲ್ಲಿ ಇದ್ದಾರೆಯೇ ಅಥವಾ ಈಶ್ವರಪ್ಪನವರ ಮನೆಯಲ್ಲಿದ್ದಾರೆಯೇ ಅಥವಾ ನೀವಿಬ್ಬರೂ ಸೇರಿ ಬೇರೆ ಕಡೆ ಏನಾದರೂ ಇಟ್ಟಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಟೀಕೆ ಮಾಡಬೇಕು, ಅವರಿಗೆ ಯಾವುದೂ ವಿಷಯಗಳು ಇಲ್ಲ, ಅದಕ್ಕೆ ರೂಲ್ 69ರ ಅಡಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ವಿರೋಧ ಪಕ್ಷವಾಗಿ ಅವರ ಕರ್ತವ್ಯ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಆಶ್ಚರ್ಯ ಎಂದರೆ, ಕಳೆದ ನಾಲ್ಕುವರೆ ತಿಂಗಳಲ್ಲಿ ನಾವು ಮಾಡಿರತಕ್ಕ ಒಳ್ಳೆಯ ಕೆಲಸಗಳನ್ನಾದರೂ ಮಾತನಾಡಬೇಕು. ಅಥವಾ ಕಳೆದ ನಾಲ್ಕೂವರೆ ತಿಂಗಳಲ್ಲಿ ಜನರ ಹಿತದೃಷ್ಟಿಯಿಂದ ಈ ಕೆಲಸಗಳು ಆಗಬೇಕಾಗಿತ್ತು , ನೀವು ಮಾಡಿಲ್ಲ ಎನ್ನುವುದಕ್ಕೆ ಮಹತ್ವ ಕೊಡಬೇಕಾಗಿತ್ತು. ಪತ್ರಿಕಾ ವರದಿಗಳನ್ನು

ಹಿಡಿದುಕೊಂಡು ಚರ್ಚೆ ಮಾಡುತ್ತಾ ಇದ್ದರೆ, ಅದರ ಪರಿಣಾಮ ಏನೆಂದು ನಿಮಗೇ ಗೊತ್ತಾಗುತ್ತದೆ. ಬೆಟ್ಟ ಅಗೆದು ನಿಮಗೆ ಆ ಇಲಿಯೂ ಸಿಗುವುದಿಲ್ಲವೆಂದು ನಾನು ಹೇಳಿದ್ದೇನೆ. ಇಷ್ಟೊಂದು ಜ್ವಲಂತ ಸಮಸ್ಯೆಗಳಿರುವ ಈ ಸಂದರ್ಭದಲ್ಲಿ ಅಥವಾ ಈ ಭಯೋತ್ಪಾದನೆ ಬಗ್ಗೆ ಒಂದರೆಡು ದಿವಸ ಚರ್ಚೆಯಾಗಿದ್ದರೂ ಅನುಕೂಲವಾಗುತ್ತಿತ್ತು. ಅಥವಾ ಗ್ರಾನೈಟ್ ಲಾಭಿ ಅಥವಾ ಬೇರೆ ಲಾಭಿಗಳಿಂದ ಏನೇನು ಪರಿಣಾಮಗಳಾಗುತ್ತಿವೆ, ಈ ದೃಷ್ಟಿಯಿಂದ ಕಬ್ಬಿಣದ ಅದಿರಿನ ಬಗ್ಗೆ, ಮ್ಯಾಂಗನೀಸ್ ಬಗ್ಗೆ ಹೇಗೆ ಲೂಟಿಯಾಗುತ್ತಿದೆ ಎಂಬುದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. ನಾವು ಅವುಗಳನ್ನು ತಲೆಬಾಗಿ, ಸ್ವೀಕಾರ ಮಾಡಿ ಸರಿ ಪಡಿಸುತ್ತೇವೆ. ಅದಕ್ಕಾದರೂ ಈ ಸಭೆಯನ್ನು ಉಪಯೋಗ ಮಾಡಿಕೊಳ್ಳಿ. ಆ ಪತ್ರಿಕೆಯಲ್ಲಿ ಬಂದಿರುವಂಥ 4–5 ವಾಕ್ಯಗಳ ಬಗ್ಗೆ ಮಾತನಾಡಲು ನಿಮಗೇನಿದೆ? ಎಲ್ಲರೂ ಅದನ್ನೇ ಹೇಳುತ್ತಿದ್ದೀರಿ. ಇನ್ನು ಏನಾದರೂ ಹೊಸದನ್ನು ಹುಡುಕಿ. ನಮ್ಮ ಶಿವಕುಮಾರ್‌ರವರಿಗೆ ನಾನು ಹೇಳಿದೆ. ಅವರು ಹಿರಿಯ ಸಚಿವರಾಗಿದ್ದವರು. ಏನಾದರೂ ಮಾಹಿತಿ ಇದೆಯೇ ಎಂದು. ಅದನ್ನೆಲ್ಲಾ ಕೊಡಿ ಸ್ಪೀಕರ್ ಅವರಿಗೆ ಎಂದೆ. ಅದನ್ನಾದರೂ ಚರ್ಚೆ ಮಾಡಿ, ನಾವು ರೆಡ್ಡಿ ಇದ್ದೇವೆ ಎಂದು ಹೇಳಿದೆ. ಯಾವುದೂ ಇಲ್ಲದೇ, ಆ ಪತ್ರಿಕೆ ತುಣುಕು ಹಿಡಿದುಕೊಂಡು ಈ ರೀತಿ ಚರ್ಚೆ ಮಾಡಿದರೆ ನಾನೇನು ಹೇಳಬೇಕೋ ಗೊತ್ತಿಲ್ಲ. ಈ ರಾಜ್ಯದ ಜನ ಏನೆಂದುಕೊಂಡಾರು;

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರ ಮಾತಿನ ಅಭಿಪ್ರಾಯ ಏನು ಬಂತೆಂದರೆ, ಪತ್ರಿಕೆಯವರು ಬರೆದದ್ದೆಲ್ಲಾ ಸತ್ಯಕ್ಕೆ ದೂರವಾದದ್ದು ಎಂದು. ಅಂದರೆ, ಈ ಸದನದಲ್ಲಿ ನಡೆದದ್ದನ್ನು ಅವರೇನು ಬರೆಯುತ್ತಾರೆ, ಅದೂ ಸಹ ಜನರಿಗೆ ಹೋಗುವಂಥಾದ್ದು ಸತ್ಯಕ್ಕೆ ದೂರವಾದದ್ದು. ಆದ್ದರಿಂದ, ಅವರಿಗೆ ಅವಕಾಶ ಏಕೆ ಕೊಡುತ್ತೀರಿ. ಪತ್ರಕರ್ತರಿಗೆ ಗ್ಯಾಲರಿ ಏಕೆ, ಅವರು ಏಕೆ ಬಂದು ಕುಳಿತುಕೊಳ್ಳಬೇಕು, ಅವರೇಕೆ ಬರೆಯಬೇಕು ಎಂಬುದು ತೀರ್ಮಾನವಾಗಬೇಕು.

ಉಪಾಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ನಿಮ್ಮ ಭಾಷಣ ಮುಗಿಯಿತೇ? ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ, ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಯಡಿಯೂರಪ್ಪನವರು ಹೇಳುತ್ತಾ ಇದ್ದಾರೆ, ಜ್ವಲಂತ ಸಮಸ್ಯೆಗಳು ಇವೆ, ಅವುಗಳನ್ನು ಚರ್ಚೆ ಮಾಡಿ. ಪೇಪರ್ ಹಿಡಿದುಕೊಂಡು ಬಂದು ಏಕೆ ಮಾತನಾಡಿ, ಟೈಮ್ ವೇಸ್ಟ್ ಮಾಡುತ್ತೀರಿ ಎಂದು. ನಿಜ, ಆ ಪೇಪರಿನಲ್ಲಿ ಬಂದಿರತಕ್ಕ ವಿಚಾರದ ಬಗ್ಗೆ ಇವರೇಕೆ ತಲೆ ಕೆಡಿಸಿಕೊಂಡರು? ಈ ಸರ್ಕಾರ ಏಕೆ ತಲೆಕಡಿಸಿಕೊಂಡಿತು? ರಾಜಿ ಮಾಡಲಿಕ್ಕೆ ಇವರೇಕೆ ಒದಾಡುತ್ತಿದ್ದಾರೆ?

ನಮ್ಮ ಪ್ರಶ್ನೆ, ಜ್ವಲಂತ ಸಮಸ್ಯೆಗಳು ಇಲ್ಲವೆಂದಲ್ಲ. ಈ ಸರ್ಕಾರ ಆ ರೀತಿಯಾದಂಥ ರಾಜಕೀಯ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡರೆ, ಈ ಜ್ವಲಂತ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಅಭಿವೃದ್ಧಿ ಕಾರ್ಯಗಳು ನಡೆಯುವುದಿಲ್ಲ, ಆಡಳಿತ ಯಂತ್ರ ಕುಸಿಯುತ್ತೆ, ಇದು ನಮ್ಮ ಕಳಕಳಿಯೇ ಹೊರತು, ನಿಮ್ಮ ಜಗಳ ನಮಗೆ ಬೇಕಾಗಿಲ್ಲ. 150 ಕೋಟಿ ರೂ ತೆಗೆದು ಕೊಂಡರೆ ನನಗೇನು? ನಾವು ಅಷ್ಟನ್ನು ನೋಡಿಯೇ ಇಲ್ಲ. 150 ಕೋಟಿ ರೂಪಾಯಿಗಳು ಎಷ್ಟು ಸೈಜು ಇರುತ್ತೆ ಎಂಬುದು ನಮಗೆ ಗೊತ್ತಿಲ್ಲ. ಬಿಡಿ, ಅದು ನಮಗೆ ಬೇಕಾಗಿಲ್ಲ. ಆ 150 ಕೋಟಿ ರೂ. ಬಗ್ಗೆ ನಾನು ತಲೆಕೆಡಿಸಿಕೊಳ್ಳುತ್ತಾ ಇಲ್ಲ. ಆ 150 ಕೋಟಿ ರೂ ಹೆಸರಿನಲ್ಲಿ ಸರ್ಕಾರದ ಮೇಲೆ ಆಗತಕ್ಕ ಪರಿಣಾಮ, ಸರ್ಕಾರದ ಆಡಳಿತ ಯಂತ್ರದ ಮೇಲೆ ಆಗತಕ್ಕ ಪರಿಣಾಮ, ಸಾರ್ವಜನಿಕರಲ್ಲಿ, ರಾಜಕಾರಣಿಗಳಲ್ಲಿ ಬಗ್ಗೆ ಬರತಕ್ಕ ಅಭಿಪ್ರಾಯ.. ಏನು ಇವತ್ತು ಎನ್ನತಕ್ಕಂಥಾದ್ದನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ನಾವು ಆಲೋಚನೆ ಮಾಡಬೇಕು. ಅದನ್ನು ಬಿಟ್ಟು ನಾವು ಏನು ಪತ್ರಿಕಾ ಹೇಳಿಕೆಗಳನ್ನು ಹಿಡಿದುಕೊಂಡು ಸಮಯವನ್ನು ಹಾಳು ಮಾಡಿ ಚರ್ಚೆ ಮಾಡಿ ಹೋಗುವುದಕ್ಕೆ ಬಂದಿಲ್ಲ. ನಾವು ಅಷ್ಟು ಬೇಜವಾಬ್ದಾರಿ ಜನ ಅಲ್ಲ. ಆದರೆ ನಮ್ಮ ಕಳಕಳಿ ನಮ್ಮ ಸಮಸ್ಯೆ ಇರತಕ್ಕಂಥಾದ್ದು ಈ ಎಲ್ಲಾ ರಾಜಕೀಯ ಬಿಕ್ಕಟ್ಟಿನ ಪರಿಣಾಮಗಳು ಸರ್ಕಾರದ ಮೇಲೆ ಪರಿಣಾಮವಾಗುತ್ತದೆ. ಸರ್ಕಾರ ಕುಸಿಯುತ್ತೆ, ಸರ್ಕಾರ ಬಿದ್ದು ಹೋಗುತ್ತದೆ. ಆರು ತಿಂಗಳಿಗೆ ವರ್ಷಕ್ಕೆ ಒಂದು ಸರ್ಕಾರ ಬೀಳುತ್ತಿದ್ದರೆ ಈ ರಾಜ್ಯದ ಗತಿ ಏನು? ಈ ರಾಜ್ಯದ ಅಭಿವೃದ್ಧಿ ಪ್ರಶ್ನೆ ಏನು? ಅಭಿವೃದ್ಧಿರಂಗ ಅಂತ ಹೆಸರು ಇಟ್ಟುಕೊಂಡಿದ್ದೀರಿ. ಆಗ ಏನು ನಡೆಯುತ್ತದೆ ನಿಮ್ಮ ಅಭಿವೃದ್ಧಿ ರಂಗ? ಅದು ನನ್ನ ಪ್ರಶ್ನೆ. ನಿಮ್ಮ ಪತ್ರಿಕಾ ಹೇಳಿಕೆ ನಿಮ್ಮ 150 ಕೋಟಿ ರೂ, ನಿಮ್ಮ ಯಾವೋನೋ ಎಸ್.ಪಿ. ಟ್ರಾನ್ಸ್‌ಫರ್, ಅದಲ್ಲ ನಮ್ಮ ಪ್ರಶ್ನೆ. ಎಸ್.ಪಿ.ಗಳು ಟ್ರಾನ್ಸ್‌ಫರ್ ಆಗುತ್ತಿರುತ್ತಾರೆ ಹೋಗುತ್ತಿರುತ್ತಾರೆ ಬರುತ್ತಿರುತ್ತಾರೆ 150 ಕೋಟಿ ರೂ ಅಲ್ಲ ಸಾವಿರಾರು ಕೋಟಿ ರೂ ಚುನಾವಣೆಯಲ್ಲಿ ಖರ್ಚು ಮಾಡುತ್ತೀರಿ, ಯಾರು ಖರ್ಚು ಮಾಡಿಲ್ಲ ಹೇಳಿ. ಎಲ್ಲರೂ ಮಾಡುತ್ತಾರೆ. ಅದಲ್ಲ ಪ್ರಶ್ನೆ ಇಲ್ಲಿ. ಇಲ್ಲಿ ಪ್ರಶ್ನೆ ಉದ್ಭವಿಸಿರತಕ್ಕಂಥದ್ದು ರಾಜಕೀಯ ಮತ್ತು ಆಡಳಿತಾತ್ಮಕ ಬಿಕ್ಕಟ್ಟು ರಾಜ್ಯದ ಮೇಲೆ ಯಾವ ರೀತಿ ಪರಿಣಾಮವಾಗುತ್ತೆ ಎನ್ನತಕ್ಕಂಥಾದ್ದು ಅದರ ಬಗ್ಗೆ ಜವಾಬ್ದಾರಿ ಇರತಕ್ಕಂಥಾದ್ದು ವಿರೋಧಪಕ್ಷದವರಿಗೆ, ಇಲ್ಲಿ ಕುಳಿತವರಿಗೆ, ಬೇರೇನೂ ಇಲ್ಲ ನಮಗೆ, ನಿಮ್ಮ ಮೇಲೆ ಮಸಿ ಬಳಿದು ನಮಗೆ ಬೇರೇನೂ ಆಗಬೇಕಾಗಿಲ್ಲ ಅಥವಾ ನಿಮ್ಮನ್ನು ಉರುಳಿಸಿಬಿಟ್ಟು ನಾನು ಮತ್ತು ವಾಟಾಳ್ ನಾಗರಾಜ್ ಮತ್ತು ಮಾಧುಸ್ವಾಮಿಯವರು ಬಂದು ಅಲ್ಲಿ ಸರ್ಕಾರವನ್ನು ರಚಿಸತಕ್ಕಂಥ ಸ್ಥಿತಿಯಲ್ಲಿ ಇಲ್ಲ ನಾವು. ಅದನ್ನು ಬಿಟ್ಟುಬಿಡಿ

ದಯವಿಟ್ಟು; ನಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ವಿರೋಧಪಕ್ಷ, ಈ ಎಲ್ಲಾ ಬೆಳವಣಿಗೆಗಳು ರಾಜ್ಯದ ಮೇಲೆ ಉಂಟಾಗತಕ್ಕಂಥ ಪರಿಣಾಮದ ಬಗ್ಗೆ ನಮಗೆ ಕಾಳಜಿ ಇದೆಯೇ ಹೊರತು ನಿಮ್ಮ ಸರ್ಕಾರ, ನಿಮ್ಮ ಮಂತ್ರಿಮಂಡಲ ಇದರ ಬಗ್ಗೆ ಅಲ್ಲ ನಮಗೆ ಕಾಳಜಿ ಇರತಕ್ಕಂಥಾದ್ದು, ಮಾನ್ಯ ಅಧ್ಯಕ್ಷರೇ, ಆದ್ದರಿಂದ ಇವತ್ತು ಇವರು ಇಷ್ಟೆಲ್ಲಾ ಹೇಳಿದರಲ್ಲಾ, ನಾನು ಒಪ್ಪಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಇದುವರೆಗೂ 150 ಕೋಟಿರೂ ನಾನು ತೆಗೆದುಕೊಂಡಿಲ್ಲ. ಅವರು ಸುಳ್ಳು ಆಪಾದನೆಯನ್ನು ಮಾಡಿದ್ದಾರೆ ಅಂತ ಒಂದು ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಬಿ.ಜೆ.ಪಿ ಯವರಿಂದ ಅವರು ಸುಳ್ಳು ಸ್ಟೇಟ್‌ಮೆಂಟ್ ಮಾಡಿದ್ದಾರೆಂದು ಒಂದು ಸ್ಟೇಟ್‌ಮೆಂಟ್ ಇಲ್ಲ. ಫಾರೆಸ್ಟ್ ಮಿನಿಸ್ಟರ್‌ರವರ ಸ್ಟೇಟ್‌ಮೆಂಟ್ ಇಲ್ಲ. ನಾನು ಪತ್ರಿಕಾಗೋಷ್ಠಿಯಲ್ಲಿ ಇರಲಿಲ್ಲ ಅಂತ ಸಚಿವ ಶ್ರೀರಾಮುಲು ಇದುವರೆಗೂ ಬಾಯಿ ಬಿಚ್ಚಿಲ್ಲ. ಇದ್ದರೋ ಇಲ್ಲವೋ ಅಂತ ಹೇಳಿ, ಏನು ತೋರಿಸುತ್ತೇ ಇದು? ಇದು ಪತ್ರಿಕಾ ಹೇಳಿಕೆಗಳಾ? ಹೇಳಿದ್ದಾರಾ ಕೇಳಿ, ಮುಖ್ಯಮಂತ್ರಿಗಳು ಡಿನೈ ಮಾಡಿದ್ದಾರಾ? ನನಗೆ ಅವರು ಕೊಟ್ಟಿಲ್ಲ. ಅವರು ಸುಳ್ಳು ಆಪಾದನೆ ಮಾಡುತ್ತಿದ್ದಾರೆ ಅಂತ ಹೇಳಿ ಏನಾದರೂ ಹೇಳಿಕೆ ಕೊಟ್ಟಿದ್ದಾರಾ? ಮಾನ್ಯ ಯಡಿಯೂರಪ್ಪನವರು ಆಗಲಿ....

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನನಷ್ಟ ಮೊಕದ್ದಮೆ ಹಾಕುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಯಿತಾ. ಮಾನ್ಯ ಯಡಿಯೂರಪ್ಪನವರು ಮತ್ತು ಬಿ.ಜೆ.ಪಿ ಪಕ್ಷ ಮುಖ್ಯಮಂತ್ರಿಗಳ ಮೇಲೆ ನೀನು ಆಪಾದನೆ ಮಾಡಿದ್ದೀಯ ಅಂತ ಹೇಳಿ ನೀವೇನಾದರೂ ಕಾರಣ ಕೇಳಿದ್ದೀರಾ? ಮಾನ್ಯ ಸಚಿವ ಶ್ರೀರಾಮುಲು ಪತ್ರಿಕಾಗೋಷ್ಠಿಯಲ್ಲಿ ಇದ್ದರು ಅಂತ ಹೇಳತಕ್ಕಂಥಾದ್ದು ಬಂದಿದೆ ಅದನ್ನು ಅವರು ಇದುವರೆಗೂ ನಾನು ಇರಲಿಲ್ಲ ಅಂತ ಹೇಳಿಲ್ಲ. ಇದರ ಅರ್ಥ ಏನು? ಇದರ ಅರ್ಥ ಏನು? ಸದನದಲ್ಲಿ ಹೇಳಿದ್ದಾರೆ. ಅವರು ಸದನದಲ್ಲಿ ಹೇಳಿಕೆ ಕೊಡಬೇಕಾಗಿತ್ತು. ವಾಸ್ತವವಾಗಿ ನಿಜ ಹೇಳಬೇಕೆಂದು ಆದರೆ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಸರ್ಕಾರದ ಮುಖ್ಯಸ್ಥರು, ಪತ್ರಿಕೆಯಲ್ಲಿ ಬಂದಂತಹ ಸುದ್ದಿಯ ಬಗ್ಗೆ ಮಾರನೇ ದಿನ ಈ ಇಲ್ಲಿ ಸದನ ನಡೆಯುತ್ತಿದೆ ಸದನದಲ್ಲಿ ಅವರು ಸು–ಮೋಟೋ ಸ್ಟೇಟೆಮೆಂಟ್ ಕೊಡಬೇಕಾಗಿತ್ತು ಅದರ ಬಗ್ಗೆ. ಯಾರೂ ಕೇಳುವ ಅವಶ್ಯಕತೆ ಇರಲಿಲ್ಲ. ಯಾವ ಚರ್ಚೆಯ ಅವಶ್ಯಕತೆ ಇರಲಿಲ್ಲ ಸರ್ಕಾರದ ಪರವಾಗಿ ಸು–ಮೋಟೋ ಸ್ಟೇಟ್‌ಮೆಂಟ್ ಅಸೆಂಬ್ಲಿಯಲ್ಲಿ ನೀವು ಕೊಡಬೇಕಾಗಿತ್ತು, ಸದನ ನಡೆಯುತ್ತಿದೆ ಇಲ್ಲಿ, ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಹಾದಿಬೀದಿಯಲ್ಲಿ ಮಾತನಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುವಾಗ ಹೇಳುತ್ತಾರೆ. ಏನೂ ತೊಂದರೆ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಪ್ರಶ್ನೆ ಅದು; ನೀವು ಉತ್ತರ ಕೊಡಬೇಕು ಅಂತಲೇ ನಾವು ಮಾತನಾಡುತ್ತಿರುವುದು, ಸುಮ್ಮ ಸುಮ್ಮನೆ ಮಾತನಾಡುತ್ತಿದ್ದೇವೆಯೇ ನಾವು? ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಆಡಳಿತ ನಡೆಸುತ್ತಾ ಇರತಕ್ಕಂಥ ಪಕ್ಷಗಳು ರಾಜಕೀಯ ಬೇಜವಾಬ್ದಾರಿತನದ ಪರಮಾವಧಿಯಿಂದಾಗಿ ಇವತ್ತು ಇಡೀ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಆಡಳಿತ ಯಂತ್ರ ಕುಸಿಯುತ್ತಿದೆ. ಇವತ್ತು ಈ ತಕರಾರು ಬಂದಿರತಕ್ಕಂಥಾದ್ದಕ್ಕೆ ಇನ್ನೊಂದು ಮುಖ್ಯ ಕಾರಣ ಬಳ್ಳಾರಿ ಜಿಲ್ಲೆಯಲ್ಲಿ ಮೈನಿಂಗ್ಸ್ ನಡೆಯುತ್ತಿದೆ. ಆ ಮೈನಿಂಗ್ಸ್‌ನಲ್ಲಿ ಒಂದು ಪಕ್ಷದವರದ್ದೇ ಡಾಮಿನೇಶನ್. ಆ ಪಕ್ಷದವರಿಗೆ ಏಕೆ ಇರಬೇಕೆಂದು ಹೇಳಿ ಇನ್ನೊಂದು ಪಕ್ಷದವರ ಮಧ್ಯೆ ಪ್ರವೇಶ. ಅವರಿಬ್ಬರ ತಿಕ್ಕಾಟ, ಪ್ರದರ್ಶನ, ಧರಣಿಗಳು, ಒಬ್ಬರಮೇಲೆ ಒಬ್ಬರು ಕೌಂಟರ್‌ಗಳು ಹೋರಾಟ... ಯಾರ ಮೇಲೋ ಗೊತ್ತಿಲ್ಲ ನನಗೆ ಎರಡು ಪಕ್ಷಗಳಿಗೆ ಒಬ್ಬ ಪಕ್ಷದವರು ಒಬ್ಬರ ವಿರುದ್ಧ ಇನ್ನೊಬ್ಬರು ಧರಣಿ ಮಾಡುತ್ತಾರೆ, ಇವರ ವಿರುದ್ಧವೇ ಮೆರವಣಿಗೆ ಮಾಡುತ್ತಾರೆ ಜನ ಕರೆದುಕೊಂಡು ಬಂದು. ಇನ್ನೋಬ್ಬರು ಅವರ ವಿರುದ್ಧ ಮಾಡುತ್ತಾರೆ; ಏಕೆ ಈ ರೀತಿ ಮಾಡುತ್ತಾ ಇರತಕ್ಕಂಥಾದ್ದು. ಆದರೆ ಇಲ್ಲಿ ಒಬ್ಬ ಎಸ್.ಪಿ. ಸರ್ಕಾರವನ್ನು ಉರುಳಿಸತಕ್ಕಂಥ ಸ್ಥಿತಿಗೆ ಬಂದಿದ್ದಾನೆ. ಒಬ್ಬ ಎಸ್.ಪಿ. ವರ್ಗಾವಣೆ ಈ ಸರ್ಕಾರವನ್ನು ಉರುಳಿಸುತ್ತೆ, ಎನ್ನತಕ್ಕಂಥ ಪ್ರಶ್ನೆ ಬಂದರೆ ಈ ಬಂದರೆ ಈ ರಾಜ್ಯದ ಪರಿಸ್ಥಿತಿ ಏನಾಗಬಹುದು ಅಂತ ಆಲೋಚನೆ ಮಾಡಿ, After all, ಒಬ್ಬ ಐಪಿಎಸ್ ಆಫೀಸರ್. ಅವನ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಹಾಗಾದರೆ ಅವನು ಬೇಕು ಅಂತ ಕೇಳತಕ್ಕಂಥವರ ಉದ್ದೇಶ ಏನು? ಅವನು ವರ್ಗಾವಣೆಯಾಗಬೇಕು ಎಂದು ಹೇಳತಕ್ಕಂಥವರ ಉದ್ದೇಶ ಏನು? ಇದರಲ್ಲಿ ಇಬ್ಬರದ್ದೂ ಏನೋ ಪಾತ್ರ ಇದೆ. ಅದಕೋಸ್ಕರವೇ ಅವರಿಬ್ಬರ ಇಂಟ್ರೆಸ್ಟ್ ಅವನು ಇದ್ದರೆ ನಮ್ಮ ಇಂಟ್ರೆಸ್ಟ್ ಪ್ರೊಟೆಕ್ಟ್ ಆಗುತ್ತೆ ಅಂತ ಒಂದು ಗುಂಪು. ಅಂದರೆ ಇಂಟ್ರೆಸ್ಟ್ ಆ ಇಂಟ್ರೆಸ್ಟ್ ಏನು? ಅದು ಬಿಜಿನೆಸ್ ಇಂಟ್ರೆಸ್ಟ್. ಆ ಬಿಜಿನೆಸ್ ಇಂಟ್ರೆಸ್ಟ್‌ನಿಂದ ಇವತ್ತು ಅಲ್ಲಿಗೆ ನಿಮ್ಮಗಳ ವ್ಯಾಪಾರಗಳ ಹಿತದೃಷ್ಟಿಯಿಂದ ಈ ರಾಜ್ಯದ ಜನರನ್ನು ಬಲಿ ಕೊಡುತ್ತೀರಾ? ರಾಜ್ಯ ಸರ್ಕಾರವನ್ನು ಬಲಿ ಕೊಡುತ್ತೀರಾ? ಯಾರ ಪಾಪಕ್ಕೆ ಯಾರು ದಂಡ ತೆರಬೇಕು ಇಲ್ಲಿ? ನಿಮ್ಮ ಬಿಜಿನೆಸ್ ಇಂಟ್ರೆಸ್ಟ್‌ಗಳು, ನಿಮ್ಮ ವ್ಯಾಪಾರದ ಇಂಟ್ರೆಸ್ಟ್‌ಗಳು ನಿಮ್ಮ ವ್ಯಾಪಾರಗಳ ಇಂಟ್ರೆಸ್ಟ್‌ಗೋಸ್ಕರ ಕರ್ನಾಟಕ ರಾಜ್ಯದ 5 ಕೋಟಿ

ಜನರ ಭವಿಷ್ಯವನ್ನು ಹಾಳು ಮಾಡುತ್ತೀರಾ ನೀವು? ಈ ಸದನದ ಮರ್ಯಾದೆ ಕಳೆಯುತ್ತೀರಾ? ಈ ರಾಜ್ಯದ ರಾಜಕಾರಣಿಗಳ ಮರ್ಯಾದೆಯನ್ನು ಕಳೆಯುತ್ತೀರಾ ನೀವು? ಈಗಲೇ ರಾಜಕಾರಣಿಗಳು ಮೂರಾಬಟ್ಟೆ ಆಗಿದೆ ಅವರ ಪರಿಸ್ಥಿತಿ ಸಾರ್ವಜನಿಕರ ಮುಂದೆ. ಮಾನ ಮರ್ಯಾದೆ ಇಲ್ಲದೆ ಹೋಗಬೇಕಾಗುತ್ತದೆ. ಒಂದು ದಿವಸ ಮಾನ್ಯ ಅಧ್ಯಕ್ಷರೆ ನಾನು ಬಸ್ಸಿಗೆ ಹೋಗುತ್ತಿದ್ದೆ ರಾತ್ರಿ ವೇಳೆ, ಶಾಸಕನಾಗಿದ್ದಾಗಮೊದಲನೇ ಬಾರಿಗೆ; ನನ್ನ ಜೊತೆಯಲ್ಲಿ ಒಬ್ಬರು ಶಾಸಕರು ಬಸ್ಸು ಹತ್ತಿದರು. ಅವರು ಗುರುತೇ ಸಿಗಲಿಲ್ಲ ನನಗೆ. ಅವರ ಡ್ರೆಸ್ ಚೇಂಜ್ ಆಗಿದೆ. ಕೊನೆಗೆ ಒಂದು ಎರಡು ನಿಮಿಷ ನೋಡಿ ಆದ ಮೇಲೆ ಏನ್ ಸಾರ್ ಇದು ಅಂತ ಕೇಳಿದ ಅವರು ಇಲ್ಲಿ ಹಾಕುತ್ತಿದ್ದಂತಹ ಡ್ರೆಸ್ ಬೇರೆ. ಆ ಬಸ್ಸಿಗೆ ಹತ್ತಿದಾಗ ಇದ್ದ ಡ್ರೆಸ್ಸ್ ಬೇರೆ. ಏನ್ ಸಾರ್ ಇದು ಅಂತ ಕೇಳಿದೆ, ಆಯ್ಯೋ ಸಾರ್ ಆ ಬಟ್ಟೆ ಹಾಕಿಕೊಂಡು ಬಸ್ಸುನಲ್ಲಿ ಬಂದರೆ ನನ್ನನ್ನು ಕಳ್ಳನನ್ನು ನೋಡಿದ ಹಾಗೆ ನೋಡುತ್ತಾರೆ ಸಾರ್ ಅಂದರು. ರಾಜಕಾರಣಿಗಳ ಪರಿಸ್ಥಿತಿ ಇವತ್ತು ಅಲ್ಲಿಗೆ ಬಂದಿದೆ. ಶ್ರೀರಾಮರೆಡ್ಡಿ ಒಬ್ಬನ ಪ್ರಶ್ನೆ ಅದರೆ ದೇಶ ಏನೂ ಹಾಳಾಗುವುದಿಲ್ಲ ನಮ್ಮ ರಾಜಕಾರಣಿಗಳ ಪರಿಸ್ಥಿತಿಯನ್ನು ನಾನು ಹೇಳುತ್ತಿರುವುದು. ಇದು ಎಷ್ಟು ಅಂಥಃ ಪತನಕ್ಕೆ ಹೋಗಿದೆ, ಎಷ್ಟು ಪಾತಾಳಕ್ಕೆ ನಾವು ತಲುಪಿದ್ದೇವೆ ಮಾನ ಮರ್ಯಾದೆ ಬಿಟ್ಟಿದ್ದೇವೆ, 150 ಕೋಟಿ ಅಲ್ಲ 500 ಕೋಟಿ ತಿಂದಿದ್ದಾನೆ ಅಂತ ಹೇಳಿದರೂ ಬಾಯಿ ಮುಚ್ಚಿಕೊಂಡಿದ್ದೇವೆ. ಬಾಯಿ ಬಿಚ್ಚುವುದಕ್ಕೆ ನಾವು ತಯಾರಿಲ್ಲ. ಅದು ಸತ್ಯವೋ, ಸುಳ್ಳೊ ಅಂತ ಹೇಳುವುದಕ್ಕೆ ತಯಾರಿಲ್ಲ, ಇದಕ್ಕಿಂತ ಮಾನ ಮರ್ಯಾದೆ ಬಿಟ್ಟು ಓಡಾಡಬೇಕಾ ಬೀದಿಗಳಲ್ಲಿ, ಏನು ಇದರ ಅರ್ಥ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಗೌರವವಾಗಿ ಮಾತನಾಡಬೇಕು. ಎಲ್ಲರಿಗೂ ಮಾನ ಮರ್ಯಾದೆ ಇದೆ ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಅಮೇಲೆ ಪತ್ರಿಕೆಯಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಅದನ್ನೇ ಒತ್ತಿ ಒತ್ತಿ ಹೇಳಿ ಪುನರಾವರ್ತನೆ ಏಕೆ ಮಾಡುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕುಂಬಳಕಾಯಿ ಕಳ್ಳ ಅಂದರೆ ನೀವು ಹೆಗಲು ಮುಟ್ಟಿ ಏಕೆ ನೋಡಿಕೊಳ್ಳುತ್ತೀರ, ಇವರಿಗೆ ಏಕೆ ಸಂಕಟ? ಮಾನ್ಯ ಅಧ್ಯಕ್ಷರೆ ಜವಾಬ್ದಾರಿ ಇದ್ದಿದ್ದರೆ......

(ಗೊಂದಲ)

(4–5 ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದ್ದರಿಂದ ರೆಕಾರ್ಡ್ ಮಾಡಲಿಲ್ಲ)

ಅವರಿಗೆ ಆ ರೀತಿಯ ಜವಾಬ್ದಾರಿ ಸರ್ಕಾರಕ್ಕೆ ಇದ್ದಿದ್ದರೆ ಪತ್ರಿಕೆಯಲ್ಲಿ ಬಂದ ಮಾರನೇ ದಿನ ಸದನ ಸೇರಿದೆ, ಅವರೇ ಸ್ವಯಂ ಪ್ರೇರಣೆಯಿಂದ ಈ ಸದನಕ್ಕೆ ಸ್ಟೇಟ್‌ಮೆಂಟ್ ಕೊಟ್ಟು ಮಾಹಿತಿ ಕೊಡಬೇಕಾಗಿತ್ತು ಈ ರೀತಿ ಅಗಿದೆ ಅಂತ, ಏಕೆ ಕೊಡಲಿಲ್ಲ? ಗದ್ದಲವಾಗಿ, ಚರ್ಚೆಯಾಗಿ, ಇಲ್ಲಿ ಮಾರಾಮಾರಿ ನಡೆದು ಅಸೆಂಬ್ಲಿಯಲ್ಲಿ ಹೊಡೆದಾಟದ ಮಟ್ಟಕ್ಕೆ ಹೋಗಿ ಅಷ್ಟೆಲ್ಲಾ ಆಗಬೇಕಾಗಿ ಇತ್ತಾ ರಾದ್ಧಾಂತ; ಯಾರು ಅವಕಾಶ ಮಾಡಿಕೊಟ್ಟರು ಅದಕ್ಕೆ? ಅವತ್ತು ಬಂದ ತಕ್ಷಣ ಸದನದಲ್ಲಿ ಎದ್ದು ಸರ್ಕಾರದ ಪರವಾಗಿ ಯಾರಾದರೂ ಮುಖ್ಯಮಂತ್ರಿಯೋ ಇನ್ನೊಬ್ಬರೋ ಮುಖ್ಯಮಂತ್ರಿಯೇ ಉತ್ತರ ಕೊಡಬೇಕೆಂದೇನೂ ಇರಲಿಲ್ಲ ಯಾರಾದರೂ ಒಬ್ಬರು ಎದ್ದು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತಲ್ಲಾ. ಏಕೆ ಕೊಡಲಿಲ್ಲ? ಇದು ಬೇಜವಾಬ್ದಾರಿತನದ ಪರಮಾವಧಿ ಅಲ್ಲವೇ ಈ ಸರ್ಕಾರದ್ದು? ಅದರ ಪರಿಣಾಮ ಇವತ್ತು ಏನಾಗಿದೆ? ನಿಮ್ಮ ಬಿಜಿನೆಸ್ ಇಂಟ್ರೆಸ್ಟ್‌ಗಳಿಗೋಸ್ಕರ ಒಂದು ರಾಜ್ಯವನ್ನು ಹಾಳು ಮಾಡುವುದಕ್ಕೆ ಹೊರಟಿದ್ದೀರಿ ನೀವು; only for the business interest. Nothing else is there. Who has to dominate the mines in Bellary? ಇದು ಒಂದೇ ಒಂದು ಕಾರಣಕೋಸ್ಕರ ಸರ್ಕಾರವನ್ನು ಬಲಿ ತೆಗೆದುಕೊಳ್ಳುತ್ತೀರಾ ನೀವು? ಇದನ್ನು ಮಾತನಾಡಿದರೆ ನಾವು ಬೇಜವಾಬ್ದಾರಿ ವಿರೋಧಪಕ್ಷ ಅಂತ ಹೇಳುತ್ತೀರಿ, ಜವಾಬ್ದಾರಿ ಇರತಕ್ಕಂಥವರು ಸ್ಟೇಟ್‌ಮೆಂಟ್ ಎತಕ್ಕೆ ಕೊಡಲಿಲ್ಲ? ಅದ್ದರಿಂದ ಮಾನ್ಯ ಅಧ್ಯಕ್ಷರೇ, ಇದು ಈ ಸಮ್ಮಿಶ್ರ ಸರ್ಕಾರದಲ್ಲಿರತಕ್ಕಂಥ ರಾಜಕೀಯ ಅಂತರಿಕ ಬಿಕ್ಕಟ್ಟಿನ ಪರಮಾವಧಿ; ಎರಡನೆಯದು ಬಿಜೆಪಿ ಪಕ್ಷದಲ್ಲಿರತಕ್ಕಂಥ ಆಂತರಿಕ ಕಿತ್ತಾಟ; ಇದರ ಪರಿಣಾಮ ಇದು; ಮೂರನೆಯದು ಬಳ್ಳಾರಿ ಜಿಲ್ಲೆಯ ಬಿಜಿನೆಸ್ ಇಂಟ್ರೆಸ್ಟ್; ಇವು ಮೂರು ಸೇರಿ ಇವತ್ತು ಈ ರಾಜ್ಯವನ್ನು ಹಾಳು ಮಾಡುವುದಕ್ಕೆ ಹೊರಟಿದ್ದು. ಇದಕ್ಕೆ ನಾವು ಬಿಡುವುದಕ್ಕೆ ತಯಾರಿಲ್ಲ. They have to come out. ನಮ್ಮ ಹತ್ತಿರ ಎವಿಡೆನ್ಸ್ ಇಲ್ಲ ಒಪ್ಪುತ್ತೇವೆ ನಾವು. ಪ್ರಾಮಾಣಿಕವಾಗಿ ನಮ್ಮ ಹತ್ತಿರ ಏನೂ ಎವಿಡೆನ್ಸ್ ಇಲ್ಲ. ನಾವು ಒಪ್ಪುತ್ತೇವೆ ಅದನ್ನು. ನಮ್ಮ ಹತ್ತಿರ ಇಲ್ಲ. ಇದ್ದವರು ತೋರಿಸುತ್ತಾರೆ. ಆ ವಿಚಾರ ಬಿಡಿ. ಆದರೆ ನಮ್ಮ ಕಳಕಳಿ ಇರತಕ್ಕಂಥಾದ್ದು ಈ ಎಲ್ಲದರ ಪರಿಣಾಮದಿಂದ ರಾಜ್ಯದ ಮೇಲೆ ಏನು ಪರಿಣಾಮವಾಗುತ್ತೆ, ಸರ್ಕಾರದ ಮೇಲೆ ಏನು ಪರಿಣಾಮವಾಗುತ್ತೆ ಜನತೆಯ ಪರಿಸ್ಥಿತಿ ಏನಾಗುತ್ತೆ, ರಾಜಕಾರಣದ ಪರಿಸ್ಥಿತಿ ಏನಾಗುತ್ತೆ ಎನ್ನತಕ್ಕಂಥಾದ್ದು ಬಿಟ್ಟರೆ ನಮ್ಮದು ಬೇರೆ ಯಾವುದೂ ಕಳಕಳಿ ಇಲ್ಲ. ಆದ್ದರಿಂದ ನಾನು ಇಷ್ಟೇ ತಮ್ಮಲ್ಲಿ ವಿನಂತಿಸುತ್ತೇನೆ. This Government should come out with clean hand. Let them

reveal. Otherwise, they should quit. I am not blaming any individual minister. The whole government is jointly responsible for this. Both the parties are responsible for this, not any individual is responsible. It is a purely a political affair. It is a political crisis. It has business interest. ಆದ್ದರಿಂದ ಅಧ್ಯಕ್ಷರೇ, ಇದು ಸಂಪೂರ್ಣವಾಗಿ ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಏನು ಸತ್ಯ ಯಾವುದು ಅಸತ್ಯ ಎಂಬುದು. ಇಷ್ಟನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೆ,

ಉಪಾಧ್ಯಕ್ಷರು : ಅನ್ನದಾನಿಯವರೋ ಅಥವಾ ವೆಂಕಟೇಶರವರೋ ಇಷ್ಟಪಟ್ಟರೆ ಮಾತನಾಡಬಹುದು.

ಡಾ॥ ಕೆ. ಅನ್ನದಾನಿ : ಒಂದು ಸಂದರ್ಭದಲ್ಲಿ ಅಲ್ಲ ಪ್ರತಿ ಸಲವೂ ಹಿಂದೆ ಕೂತಿರುವ ಬೆಂಚಿನವರಿಗೆ ಅವಕಾಶ ಕೊಡುತ್ತಿಲ್ಲ. ಸಬ್ಜೆಕ್ಟ್ ಬಂದಾಗ ಮಾತನಾಡಲು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಎನ್. ಧರಂಸಿಂಗ್ : ಅವರು ಇಷ್ಟಪಟ್ಟರೆ ಯಾರಾದರೂ ಮಾತನಾಡಲಿ.

ಉಪಾಧ್ಯಕ್ಷರು : ಮಾತನಾಡಬಯಸುವವರ ಹೆಸರು ಈ ಕಡೆ ಕೊಟ್ಟಿಲ್ಲ. ಬೇಕಾದರೆ ಓದುತ್ತೇನೆ.

ಡಾ॥ ಕೆ. ಅನ್ನದಾನಿ : ಈ ಸಂದರ್ಭದಲ್ಲಲ್ಲ ಪ್ರತಿ ಸಂದರ್ಭದಲ್ಲೂ ಹಿಂದೆ ಕೂತಿರುವವರಿಗೆ ಎಷ್ಟು ಜನಕ್ಕೆ ಅವಕಾಶ ಸಿಕ್ಕಿದೆ ನಮಗೇನೂ ನಾಲೆಜ್ ಇಲ್ಲವಾ? ಅವರೊಬ್ರೇ ಬುದ್ಧಿವಂತರಾ? ಈ ವಿಚಾರದ ಮೇಲೆ ನಿನ್ನೆಯಿಂದ ನಿಯಮ 69ರ ಅಡಿ ಚರ್ಚೆಯಾಗುತ್ತದೆ ಇದೆ. ಮಾಧುಸ್ವಾಮಿ ವಾಟಾಳ್‌ನಾಗರಾಜ್, ಖರ್ಗೆ ಸಾಹೇಬ್ರು, ಧರಂಸಿಂಗ್ ಸಾಹೇಬ್ರು, ಶ್ರೀರಾಮರೆಡ್ಡಿ ಎಲ್ಲರೂ ಮಾತ ನಾಡಿದ್ದಾರೆ. ಈಗ ಅವರ ಹತ್ತಿರ ವಿಚಾರ ಇಲ್ಲವಲ್ಲಾ ಅದಕ್ಕೇ ಈ ಕಡೆ ಕೈತೋರಿಸುತ್ತಿದ್ದಾರೆ ಮಾತನಾಡಿ ನೀವು ಅನ್ನುತ್ತಿದ್ದಾರೆ. ಸಬ್ಜೆಕ್ಟ್ ಇದ್ದಾಗ ನಮಗೆ ಅವಕಾಶ ಸಿಗುವುದಿಲ್ಲ.

ಉಪಾಧ್ಯಕ್ಷರು : ನಿಮ್ಮ ಅಭಿಪ್ರಾಯ ನಮಗೆ ಅರ್ಥವಾಗಲಿಲ್ಲ. ನಿಯಮ, 69ರ ಕೆಳಗೆ ಮಾತನಾಡಲು ಯಾರ್‍ಯಾರ ಹೆಸರು ಕೊಟ್ಟಿದ್ದಾರೆ ಅವರ ಹೆಸರು ನಾನು ಹೇಳುತ್ತಿದ್ದೇನೆ. ಈ ಭಾಗದಿಂದ ಎಚ್ ಎಂ ವಿಶ್ವನಾಥರ ಹೆಸರು ಮಾತ್ರ ಈಗ ಕಳುಹಿಸಿದ್ದಾರೆ ಮಾತನಾಡಿ. ನಿಮ್ಮ ಕಡೆಯಿಂದಲೂ ಮಾತನಾಡುತ್ತಿದ್ದೀರಿ, ಯಾವಾಗ

ಅವಕಾಶ ಕೊಟ್ಟಿಲ್ಲ? ಈಗ ಹೆಸರುಗಳನ್ನು ಕಳುಹಿಸಿ, ಇವತ್ತು ರಾತ್ರಿಯೆಲ್ಲಾ ಮಾತನಾಡಿ. ಈಗ ಮಾನ್ಯ ವಿಶ್ವನಾಥ್‌ರವರು ಮಾತನಾಡಲಿ.

ಶ್ರೀ ಎಚ್.ಎಂ. ವಿಶ್ವನಾಥ್ (ಸಕಲೇಶಪುರ) : ಅಧ್ಯಕ್ಷರೇ, ಒಂದು ಸಂಪ್ರದಾಯ ಇತ್ತು ಅಂತ ನಾನು ಕೇಳಿದ್ದೇನೆ, ಮಾನ್ಯ ರಮೇಶ್‌ಕುಮಾರ್‌ರವರು ಆ ಚೇರ್‌ನಲ್ಲಿ ಕೂತು ಕೊಂಡಾಗ ಒಂದು ಒಳ್ಳೆಯ ಸಂಪ್ರದಾಯ ಹಾಕಿದ್ದರು ಅಂತ ಕೇಳಿದ್ದೇವೆ. ಅದೇನೆಂದರೆ, ಮುಂದಿನ ಸದಸ್ಯರಿಗೆ ಹೆಚ್ಚು ಮಾತನಾಡಲು ಬಿಡದೆ, ಅವಕಾಶಗಳನ್ನು ಹೆಚ್ಚು ಹಿಂಭಾಗಕ್ಕೆ ಕೊಡುತ್ತಿದ್ದರು ಅಂತ...

ಉಪಾಧ್ಯಕ್ಷರು : ಆ ಕಡೆ ಹೋಗುವುದು ಬೇಡ, ನಮ್ಮ ಕಡೆ ಈಗ ಮಾತನಾಡಿ.

ಶ್ರೀ ಎಚ್.ಎಂ. ವಿಶ್ವನಾಥ್ : ಆ ಸಂಪ್ರದಾಯ ತಾವೂ ಪಾಲಿಸಬೇಕು ಅಂತ ಕೇಳಿಕೊಳ್ಳುತ್ತಿದ್ದೇವೆ ಹಿಂದಿನವರಿಗೆ ಅಂದರೆ ನಮಗೂ ಅವಕಾಶ ಕೊಡಿ ಅಂತ ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಕಳೆದ ಒಂದು ವಾರದಿಂದ ಏನು ಚರ್ಚೆ ನಡೆಯುತ್ತಾ ಇದೆ ಇಬರಲ್ಲಿ ಹೊಸಪೇಟೆ, ಚಿತ್ರದುರ್ಗ, ಬಳ್ಳಾರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿರುವ ಮೈನ್ಸ್ ಬಗ್ಗೆ. ಆದರೆ ಕಬ್ಬಿಣದ ಅದಿರು ಸಮಸ್ಯೆ ಕೇವಲ ಅಲ್ಲಿಗೆ ಸೀಮಿತವಾಗಿದೆ ಅಂತ ಅಂದುಕೊಳ್ಳಬೇಡಿ. ನಾನು ಪಶ್ಚಿಮಘಟ್ಟದ ಭಾಗದಲ್ಲಿರುವವನು. ವಿಶೇಷವಾಗಿ ಸಕಲೇಶಪುರ ರಾಷ್ಟ್ರೀಯ ಹೆದ್ದಾರಿಯೊಳಗಡೆ ಈ ಎಲ್ಲಾ ದಂದೆಗಳೇನು ನಡಿಯುತ್ತಿವೆ. ಅದೆಲ್ಲಾ ಹೋಗುವುದು ನಮ್ಮ ಮಾರ್ಗದಲ್ಲಿ. ಹೊಸಪೇಟೆಯಲ್ಲಾಗಲಿ, ಚಿತ್ರದುರ್ಗದಲ್ಲಾಗಲೀ ಅಥವಾ ಬಳ್ಳಾರಿಯಲ್ಲಾಗಲೀ ಅಥವಾ ಈ ಭಾಗದಲ್ಲಿರುವ ಕನಕಪುರದಲ್ಲಾಗಲೀ ಕಲ್ಲು ಅದಿರು ಎಲ್ಲವೂ ನಮ್ಮ ಸಕಲೇಶಪುರ ಮಾರ್ಗದಲ್ಲೇ ಹೋಗುವುದು. ಆದರೆ ಇವರದಕ್ಕಿಂತ ನಮ್ಮ ಸಮಸ್ಯೆ ಭಿನ್ನವಾಗಿದೆ, ಕಾರಣ ಒಂದು ದಿನಕ್ಕೆ ಸಾವಿರದಿಂದ 1500 ಲಾರಿಗಳು ನಮ್ಮ ಭಾಗದಲ್ಲಿ ಅದನ್ನು ಕೊಂಡೊಯ್ಯುತ್ತವೆ. ಆ ಲಾರಿಗಳಲ್ಲಿ 15–20 ಟನ್‌ಗೆ ಲೈಸೆನ್ಸ್ ತೆಗೆದುಕೊಂಡು ಏನು ಬಂದಿದ್ದಾರೆ ಅವುಗಳಲ್ಲಿ 50 ಟನ್‌ವರೆಗೂ ಹಾಕಿಕೊಂಡು ಬರುತ್ತಿದ್ದಾರೆ ರಸ್ತೆ ಮೇಲೆ ಬಸ್ ಕಾರು ಮುಂತಾದ ಬೇರೆ ವಾಹನಗಳು ಓಡಾಡುತ್ತಿರುತ್ತವೆ. ಓವರ್‌ಟೇಕ್ ಮಾಡಿ ಆಚೆ ಹೋಗಬೇಕು ಅಂದರೆ ಎರಡು ಮೂರು ಕಿಮೀ ನಾವು ಹಿಂದೆ ಹೋಗಬೇಕಾಗಿದೆ. ಸಾಲುಗಟ್ಟಿಕೊಂಡು ಒಂದು ಕಡೆಯಿಂದ 100–150 ವಾಹನ ಒಟ್ಟಿಗೇ ಬರುತ್ತವೆ, ಹಾಸನದಿಂದ ನಮ್ಮ ಗಡಿಗೆ 78 ಕಿಮೀ ಆಗುತ್ತದೆ, ಈ ಭಾಗದೊಳಗೆ ಹೆಚ್ಚು ಮಳೆ ಬೀಳುವ ಜಾಗ ಇದೆ. ಇಲ್ಲಿ ಸಂಚರಿಸುವ ವಾಹನಗಳಿಂದ ದಿನಕ್ಕೆ ಒಂದು ಎರಡು ಅಪಘಾತವಾಗುತ್ತವೆ. ಇದಕ್ಕೆ ಕಾನೂನಿಲ್ಲ ಕಟ್ಟಳೆಯಿಲ್ಲ ಕೇಳೋರಿಲ್ಲ ಹೇಳೋರಿಲ್ಲ

ಲೈಸ್‌ನ್ನು ಪರ್ಮಿಟ್ಟು ಇಲ್ಲದೇ ಇರುವ ಲಾರಿಗಳ ಸಂಖ್ಯೆ ಕನಿಷ್ಟ 25 ರಿಂದ 30 ಪರ್ಸೆಂಟಿರುತ್ತದೆ. ಯಾರೂ ಕೂಡ ಪ್ರಶ್ನೆ ಮಾಡುವುದಿಲ್ಲ. ಅಲ್ಲಾಗುವ ಅನಾಹುತಗಳು ಬಗ್ಗೆ ಉದಾಹರಣೆಗೆ ಹೇಳಬೇಕಾದರೆ, 15 ದಿವಸದಿಂದ 39 ಕಿಮೀ ಇರುವ ಶಿರಾಡಿ ಘಾಟ್ ಒಳಗಡೆ ರಸ್ತೆ ಏನೂ ಉಳಿದುಕೊಂಡಿಲ್ಲ. ಮಂಗಳೂರಿಗೆ ಹೋಗುವ ತುಂಬಾ ಜನ ಇಲ್ಲಿ ನನ್ನ ಸ್ನೇಹಿತರಿದ್ದಾರೆ. ರಾತ್ರಿ ಹೊತ್ತು 200 ಬಸ್‌ಗಳು ಮಂಗಳೂರಿನಿಂದ ಬೆಂಗಳೂರಿನಿಂದ 200 ವಾಹನಗಳು ಓಡಾಡುತ್ತವೆ. ಇಷ್ಟು ವಾಹನಗಳ ಜಖಂ ಆದಾಗ, ನಮ್ಮಲ್ಲಿರುವುದು ಒಂದು ಗ್ರಾಮೀಣ ಪೋಲಿಸ್ ಠಾಣೆ. ಒಂದು ಜೀಪು, 10 ಪೇದೆಗಳು ದಿನವೆಲ್ಲಾ ಆ ಘಾಟಿನಲ್ಲಿ ಕಾಯಬೇಕಾದ ಸ್ಥಿತಿ ಇದೆ. ಅಲ್ಲಿ ಸತ್ತವರ ಗಾಯಾಳುಗಳನ್ನು ಕರೆಕೊಂಡುಬರುವುದೇ ನಮ್ಮ ಕೆಲಸವಾಗಿದೆ. ಹೊರಜಿಲ್ಲೆಗಳಿಂದ ಬರುವ ಲಾರಿಗಳ ಜತೆ ಈಗೊಂದು ಹೊಸ ಸಮಸ್ಯೆ ಸೃಷ್ಟಿಯಾಗಿದೆ. ಅದು ಕೆಂಪುಹೊಳೆ ವ್ಯಾಪ್ತಿಯಲ್ಲಿರುವ ಹೋಟೆಲ್‌ಗಳಲ್ಲಿ ವೇಶ್ಯಾವಾಟಿಕೆ ಜಾಸ್ತಿಯಾಗಿದೆ.

ಉಪಾಧ್ಯಕ್ಷರು : ನಿಮ್ಮ ಮಾತು ಡೀವಿಯೇಟಾಗುತ್ತಿದೆ, ಅದರ ಬಗ್ಗೆ ಬೇರೆ ರೀತಿ ಚರ್ಚೆ ಮಾಡೋಣ. ಈಗ ಬಂದಿರುವುದು 150 ಕೋಟಿ ರೂ. ವ್ಯಾಪಾರದ್ದು ಮಾತ್ರ. ಅದರ ಬಗ್ಗೆ ಮಾತನಾಡಿ.

ಶ್ರೀ ಎಚ್.ಎಂ. ವಿಶ್ವನಾಥ್ : ಅಲ್ಲಿಗೇ ಬರುತ್ತಿದ್ದೇನೆ, ಈ ಸಮಸ್ಯೆಗಳೆಲ್ಲಾ ಸೃಷ್ಟಿಯಾಗುತ್ತಿರುವುದು ಅದಿರು ಪ್ರಾರಂಭವಾದಾಗಿನಿಂದ. ಅದರಿಂದ ನಾನು ಕೇಳುವುದು ಇಷ್ಟೇನೇ. ಇಂತಹ ದಂಧೆ ನಡೆಸತಕ್ಕಂಥ ಜನರು ಇದ್ದಾರೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹಾಗೂ ಇತರ ಹಿರಿಯರೆಲ್ಲರೂ ಸಾಕಷ್ಟು ಬೆಳಕು ಚೆಲ್ಲಿದರು. ಈ ದಂಧೆ ನಡೆಸುವಂತಹ ಜನರಿಗೆ ಹಣಕಾಸು ಇರುವುದರಿಂದ ಈ ಜನರು ಇನ್ನೊಂದು ಸಮಸ್ಯೆಯನ್ನು ಸೃಷ್ಟಿ ಮಾಡುತ್ತಿದ್ದಾರೆ. ನಮ್ಮ ಭಾಗದಲ್ಲಿರತಕ್ಕಂಥ ಹೈಡ್ರೋ ಪ್ರಾಜೆಕ್ಟ್ ಏನು ಇದೆ, ಇದಕ್ಕೆ ತಂದು ದುಡ್ಡು ಹಾಕುತ್ತಿದ್ದಾರೆ. ನಿನ್ನೆ ಹೇಳಿದರು. ಬೆಂಗಳೂರು ಸುತ್ತ ಮುತ್ತ ಭೂಗಳ್ಳರು, ಭೂಮಿ ಕೊಳ್ಳುವಂತಹ ಜನರು ಪ್ರಾರಂಭ ಆಗಿದ್ದಾರೆ, ಈ ದಂಧೆ ನಡೆಸುವಂತಹ ಜನರು ಎಂದು ಹೇಳಿದರು. ಈದಂಧೆ ಜನ ಈಗ ಸಕಲೇಶಪುರ, ಪಶ್ಚಿಮಘಟ್ಟ, ಅದು ಇಡೀ ಕೊಡಗು ಇರಬಹುದು ಅದು ಶಿವಮೊಗ್ಗದ ತನಕ, ಕೊಡಗಿನಿಂದ ಹಿಡಿದು ಶಿವಮೊಗ್ಗದ ತನಕ ಪಶ್ಚಿಮ ಘಟ್ಟದೊಳಗೆ ಬರತಕ್ಕಂಥ, ಎಲ್ಲೆಲ್ಲಿ ಹೈಡ್ರೋ ಪ್ರಾಜೆಕ್ಟ್‌ಗಳು ಇದ್ದಾವೆ, ಮಾಡಬಹುದಾದಂತಹ

ಉಪಾಧ್ಯಕ್ಷರು : ಮಾನ್ಯ ವಿಶ್ವನಾಥ್‌ರವರೆ, ಡಿಮ್ಯಾಂಡ್ ಬಗ್ಗೆ ಚರ್ಚೆ ಮಾಡುವಾಗ ದಯವಿಟ್ಟು ಇದನ್ನು ಮಾತನಾಡಿ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ.

ವಿಷಯ ಚೆನ್ನಾಗಿದೆ. ಆದರೆ ಡಿಮ್ಯಾಂಡ್ ಬಗ್ಗೆ ಬಂದಾಗ ಇನ್ನೂ ಸುಂದರವಾಗಿರುತ್ತದೆ ಈ ವಿಚಾರದಲ್ಲಿ. ಅದಕ್ಕೆ ಬೇಗ ಮುಗಿಸಿ ಬಿಡಿ. ಬೇರೆಯವರು ಮಾತನಾಡುತ್ತಾರೆ.

ಶ್ರೀ ಹೆಚ್.ಎಂ. ವಿಶ್ವನಾಥ್ : ಇದಕ್ಕೆಲ್ಲಾ ಮೂಲ ಕಾರಣ, ಕಳೆದ 10 ವರ್ಷಗಳಿಂದ ದಂಧೆ ನಡೆಸತಕ್ಕಂಥ ಜನರು ಏನು ಇದ್ದಾರೆ ಇವರ ಹತ್ತಿರ ಸಾಕಷ್ಟು ಕಳ್ಳ ಹಣ ಸೇರಿ ಕೊಂಡಿದೆ. ಈ ದಂಧೆಯಿಂದ ಸರ್ಕಾರಕ್ಕೆ ಯಾವುದೇ ಲಾಭ ಇಲ್ಲ, ನಷ್ಟವೇ ಜಾಸ್ತಿ ಆಗಿದೆ. ಆದ್ದರಿಂದ, ಈ ಅದಿರು ತೆಗೆಯುವಂತಹ ದಂಧೆ ಮೇಲೆ ನಿಷೇಧ ಹೇರಬೇಕು. ಇದಕ್ಕೆ ಕನಿಷ್ಟ ಮೂರು ತಿಂಗಳಿಗಾದರೂ ನಿಷೇಧ ಹೇರಿ ಅಲ್ಲಿ ಯಾರು ಅಪ್ರಾಮಾಣಿಕವಾಗಿ, ಪ್ರಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆಂದು ತನಿಖೆ ನಡೆಸಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಾ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾವು ನೋಟೀಸ್ ಕೊಟ್ಟೆವು. ಅನಂತರ ಸುಮಾರು ಘಟನೆಗಳು ಆದಮೇಲೆ ಈ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಆಯಿತು. ಮಾನ್ಯ ಮಾಧುಸ್ವಾಮಿಯವರು ನಿನ್ನೆ ಬಹಳ ಚೆನ್ನಾಗಿ ಮಾತನಾಡಿದರು. ಮಾನ್ಯ ವಾಟಾಳ್ ನಾಗರಾಜ್ ಅವರು ಬಹಳ ಪ್ರಮುಖವಾದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಮಾನ್ಯ ಶ್ರೀರಾಮರೆಡ್ಡಿಯವರು ಮಾತನ್ನೂ ಇವತ್ತು ಕೇಳಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ತಮ್ಮ ಮುಖಾಂತರ ಅವರಲ್ಲಿ ನಾನು ನಿವೇದಿಸಿಕೊಳ್ಳುತ್ತೇನೆ. ತಾವು ಅತ್ಯಂತ ಅನುಭವಿ ಶಾಸಕರು. ಸಾರ್ವಜನಿಕ ಜೀವನದಲ್ಲಿ ಪ್ರಾಥಮಿಕ ಹಂತದಲ್ಲಿ, ಜನರ ಜೊತೆಗೆ ಗುರುತಿಸಿಕೊಂಡು ನಮ್ಮದೇ ಆದ ರೀತಿಯಲ್ಲಿ ಸ್ಥಳೀಯ ಜನರ ಜೊತೆಗೆ ನಾವು ಎಲ್ಲೋ ಒಂದು ರೀತಿಯಲ್ಲಿ ಅವರ ನಂಬಿಕೆಗೆ ಅರ್ಹರು ಎಂದು ಅನಿಸಿಕೊಂಡು ಅದರ ಮುಖಾಂತರ ಇಲ್ಲಿಗೆ ಬರಬೇಕಾಗುತ್ತದೆ. ಒಬ್ಬೊಬ್ಬರದೂ ಒಂದೊಂದು ಹಿನ್ನೆಲೆ, ಒಂದೊಂದು ರೀತಿ ಇರುತ್ತದೆ. ಈ ಶಾಸನಸಭೆ ಒಟ್ಟರೆ ಈ ರಾಜ್ಯದ ಹಿತ ಕಾಪಾಡತಕ್ಕದ್ದು ನಮ್ಮ ಜವಾಬ್ದಾರಿ. ಸರ್ಕಾರ ಎನ್ನತಕ್ಕಂಥ ಸಂಸ್ಥೆ, ಈ ಸಭೆಯಿಂದ ಉದ್ಭವ ಆಗುತ್ತದೆ. ಆದ್ದರಿಂದ ಈ ಸಭೆ ಸುಪ್ರೀಂ. ಸಾರ್ವಭೌಮ ಯಾರೋ ಯಾರಿಗೋ ಹಣ ಕೊಟ್ಟರು. ತೆಗೆದುಕೊಂಡರು ಅಂದರೆ ಅದು ಕೇವಲ ಲೇವಾದೇವಿ ಆಗುತ್ತದೆ. ಯಾರದೋ ಲೇವಾದೇವಿ ಇಲ್ಲಿ ಚರ್ಚೆ ಮಾಡುವುದಕ್ಕೆ ಈ ಸದನ ಜಾಗ ಅಲ್ಲ, ಫೋರಂ ಅಲ್ಲ. ಕೊಟ್ಟಿದ್ದಾರೆ ಎನ್ನತಕ್ಕವರು ಯಾರು? ತೆಗೆದುಕೊಂಡಿರಬಹುದು ಎನ್ನತಕ್ಕಂಥವರು ಯಾರು? ನಾನು ಬಹಳ ಎಚ್ಚರಿಕೆಯಿಂದ ಮಾತನಾಡುತ್ತಿದ್ದೇನೆ.

ಯಾವ ಸನ್ನಿವೇಶದಲ್ಲಿ ಹೇಳಿದ್ದಾರೆ ಎನ್ನುವ ಅಂಶಗಳನ್ನು ನಾವು ಗಣನೆಗೆ ತೆಗೆದುಕೊಂಡಾಗ ಇದು ಖಾಸಗಿ ಲೇವಾದೇವಿ ಅಲ್ಲ. ಸರ್ಕಾರದ ವ್ಯಾಪ್ತಿಗೆ ಒಳಪಡತಕ್ಕ ವಿಚಾರ. ಸರ್ಕಾರ ಎನ್ನತಕ್ಕದ್ದು ಈ ಸಭೆಯಿಂದ ಉದ್ಭವ ಆಗತಕ್ಕಂಥ ಒಂದು ಸಂಸ್ಥೆ. ಆದ್ದರಿಂದ ಇದರಲ್ಲಿ ಸತ್ಯಾಸತ್ಯತೆ ಏನು ಇದೆ ಎಂದು ತಿಳಿದುಕೊಳ್ಳ ಬೇಕು. ನಮಗೆ ವಿಚಾರ ಏನು ಗೊತ್ತಿದೆ ಎಂದು ಹೇಳಬೇಕು. ನಮಗೆ ಏನಾಗಬೇಕು ಅದನ್ನು ಕೇಳಬೇಕು ಎನ್ನತಕ್ಕದ್ದಕ್ಕೆ ನಾವು ಇಲ್ಲಿ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ಯಾರು ಸರ್ಕಾರ ಮಾಡುತ್ತಾರೆ? ಯಾರಿಗೆ ಈ ಸದನದಲ್ಲಿ ಆರಿಸಿ ಬಂದಿರತಕ್ಕ ಶಾಸಕರ ಪೈಕಿ ಹೆಚ್ಚು ಸಂಖ್ಯೆಯ ಶಾಸಕರ ಬಲ ಇರುತ್ತದೋ ಅವರಿಗೆ ಸಂವಿಧಾನ ಬದ್ಧವಾಗಿ ಸರ್ಕಾರ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತಾರೆ. ಅಂದರೆ, Numerical strength is the basis for the formation of the Government. ನಾವು ಸಂಖ್ಯಾಬಲವನ್ನು ಆಧರಿಸಿ ಸರ್ಕಾರವನ್ನು ರಚನೆ ಮಾಡಿದ್ದಾದ ಮೇಲೆ ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಅದಕ್ಕೆ ಒಂದು ಸೈದ್ಧಾಂತಿಕವಾದಂತಹ ಒಂದು ಹೊದಿಕೆಯನ್ನು ಹೊದಿಸುತ್ತೇವೆ. ಈಗ ಮಾನ್ಯ ಧರ್ಮಸಿಂಗ್ ಸಾಹೇಬರ ಸರ್ಕಾರ ಇತ್ತು. ಆವಾಗ ನಾವು ಏನು ಹೇಳುತ್ತಿದ್ದೇವು. ಜೆಡಿ(ಎಸ್) ನಾವು ಎಲ್ಲರೂ ಒಂದಾಗಿ ಜಾತ್ಯಾತೀತವಾಗಿ ನಾವೆಲ್ಲಾ ಒಂದಾಗಿ ಮತೀಯ ಶಕ್ತಿಗಳನ್ನು ನಿಯಂತ್ರಿಸುವುದಕ್ಕೆ ನಾವು ಸರ್ಕಾರ ಮಾಡಿದ್ದೇವೆಂದು ಹೇಳುತ್ತೇವೆ. ಅದು ಬಿದ್ದು ಹೋಯಿತು. ಈಗ ನೀವೇನು ಹೇಳುತ್ತಿದ್ದೀರಿ? ನಮಗೆ ಯಾವುದೇ ವಿಧವಾದಂತಹ ಪೂರ್ವಾಗ್ರಹ ಪೀಡಿತ ಭಾವನೆಗಳು ಇಲ್ಲ. ರಾಜ್ಯದ ಅಭಿವೃದ್ಧಿ ನಮ್ಮ ಏಕೈಕ ಗುರಿ. ಆದ್ದರಿಂದ ನಾವೆಲ್ಲಾ ಸಣ್ಣ ವಿಷಯಗಳನ್ನು ಬದಿಗೆ ಇಟ್ಟು ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತಿದ್ದೇವೆ ಎಂದು ನೀವು ಹೇಳುತ್ತೀರಿ, ಸಂತೋಷ. ಸಂಖ್ಯಾಬಲ, ಆಡಳಿತದ ಸೂತ್ರವನ್ನು ಹಿಡಿಯತಕ್ಕಂಥ ಅಧಿಕಾರವನ್ನು ಕೊಡುವುದರ ಜೊತೆಗೆ ಅತ್ಯಧಿಕ ಜವಾಬ್ದಾರಿಯನ್ನು ಕೊಡುತ್ತದೆ. ಆದ್ದರಿಂದ ಅವರು ಉತ್ತರ ಹೇಳತಕ್ಕ ಸ್ಥಿತಿಯಲ್ಲಿ ಅವರು ಇರುತ್ತಾರೆ. ಪ್ರಶ್ನಿಸುವ ಸ್ಥಿತಿಯಲ್ಲಿ ನಾವು ಇರುತ್ತೇವೆ. ನಾವು ಅಸಂಬದ್ಧವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಅಥವಾ ಬೇಜವಾಬ್ದಾರಿ ಆದಂತಹ ಉತ್ತರವನ್ನು ಅವರೂ ಕೊಡುವುದಕ್ಕೆ ಆಗುವುದಿಲ್ಲ. ನಾನು ಎಲ್ಲರೂ ಮಾತನಾಡಿರತಕ್ಕಂಥ ವಿಚಾರವನ್ನೇ ಪುನರಪಿ ಪ್ರಸ್ತಾಪ ಮಾಡಿ ಅದನ್ನೇ ಹೇಳಿ ನಿಮಗೂ ಬೇಜಾರು ಮಾಡಿಸುವುದಕ್ಕೆ ನನಗೆ ಇಷ್ಟ ಇಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ನಿನ್ನೆ ಒಂದು ಮಾತು ಹೇಳಿದರು. ಈ ದೇಶದಲ್ಲಿ ಚುನಾವಣಾ ಸುಧಾರಣೆ ಆಗಬೇಕು ಅಧ್ಯಕ್ಷರೆ, ಮೊದಲಿಗೆ ಪಾರ್ಟಿ ಫಂಡ್ಸ್

ಕಲೆಕ್ಟ್ ಮಾಡುತ್ತಿದ್ದರು. ಪಾರ್ಟಿ ಫಂಡ್ಸ್ ಯಾರು ಕಲೆಕ್ಟ್ ಮಾಡುತ್ತಿದ್ದರು? ಪ್ರತಿ ಪಕ್ಷದಲ್ಲೂ ಒಬ್ಬರೋ ಅತ್ಯಂತ ಪ್ರಾಮಾಣಿಕವಾಗಿ ಇರತಕ್ಕಂಥವರಿಗೆ ಪಾರ್ಟಿ ಫಂಡ್ಸ್ ಕಲೆಕ್ಟ್ ಮಾಡಕತಕ್ಕಂಥ ಜವಾಬ್ದಾರಿಯನ್ನು ಕೊಟ್ಟಿದ್ದರು. ಅವರು ಅದನ್ನು ತಮ್ಮ ಸ್ವಂತ ಹಣಕ್ಕಿಂತ ಹೆಚ್ಚಾಗಿ ಜೋಪಾನವಾಗಿ ಅದನ್ನು ಲೆಕ್ಕ ಕೊಟ್ಟು ಇಟ್ಟುಕೊಂಡು ಅದನ್ನು ಪಕ್ಷದ ಚಟುವಟಿಕೆಗಳಿಗೆ ಉಪಯೋಗ ಮಾಡುತ್ತಿದ್ದರು. ಕಾಂಗ್ರೆಸ್ ನಂತಹ ಪಕ್ಷದಲ್ಲೂ ಕೂಡ ನೀವೇನು ಬಹಳ ಹೊಲಸಾಗಿದೆ ಎಂದು ಹೇಳುತ್ತೀರಿ, ಒಂದು ಕ್ಷಣಕ್ಕೆ ಅದನ್ನು ಸತ್ಯ ಎಂದು ಒಪ್ಪಿಕೊಂಡರೂ ಕೂಡ ಅತ್ಯಂತ ಬಡವನಾಗಿರತಕ್ಕ ವ್ಯಕ್ತಿ ಪಾರ್ಟಿಯ ಟ್ರೆಜರರ್ ಆಗಿರುತ್ತಿದ್ದ. ನಿಮಗೆ ಇದು ಆಶ್ಚರ್ಯ ಆಗಬಹುದು. ಮೊನ್ನೆ ಮೊನ್ನೆಯವರೆಗೆ ನಮಗೆ ನೆನಪು ಇದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಗ ಸಂದರ್ಭದಲ್ಲಿ ನಾನು ಅವರ ಸನಿಹ ಇದ್ದೆ ಯಾರಾದರೂ ಸಹಾಯ ಮಾಡುವುದಕ್ಕೆ ಬಂದರೆ ಶ್ರೀ ವಿ.ಎಸ್. ಕೃಷ್ಣ ಅಯ್ಯರ್ ಅವರನ್ನು ಹೋಗಿ ಮೀಟ್ ಮಾಡಿ ಎಂದು ಅವರು ಹೇಳುತ್ತಿದ್ದರು. ಅವರು ಪಾರ್ಟಿ ಟ್ರೆಷರರ್ ಆಗಿದ್ದರು. ಈ ಪಾರ್ಟಿ ಫಂಡ್ ಎನ್ನುವುದಕ್ಕ ಅರ್ಥ ಪದಕ್ಕೆ ಡೆಫನಿಷನ್ ಇದೆಯಲ್ಲಾ, ಇಷ್ಟು ದೊಡ್ಡದಾಗಿ ಬಿಟ್ಟಿದೆ. ಅದರ ವ್ಯಾಪ್ತಿನೇ ಈಗ ಗೊತ್ತಾಗುತ್ತಿಲ್ಲ. ಸಮುದ್ರದ ವಿಸ್ತಾರವನ್ನಾದರೂ ಹೇಳಬಹುದೇನೋ ಹೊರತು ಈ ಪಾರ್ಟಿ ಫಂಡ್‌ನ ಡೆಫನಿಷನ್ ಏನು? ಅದರ ವ್ಯಾಪ್ತಿ ಗೊತ್ತಾಗುತ್ತಿಲ್ಲ. ಪೋಲೀಸ್‌ನವರು ಸಿಗ್ನಲ್ ಲೈಟಿನಲ್ಲಿವಯಲೇಟ್ ಮಾಡಿ ಹೋಗತಕ್ಕವನ ಹತ್ತಿರ ನಿಲ್ಲಿಸಿ ಹಿಡಿದುಕೊಂಡು ತೆಗೆದುಕೊಳ್ಳುವ ಹಣದಿಂದ ಹಿಡಿದು, ಪೆಟ್ರೋಲ್ ಬಂಕ್‌ನಲ್ಲಿ ಕಡಿಮೆ ಮೆಷರ್‌ಮೆಂಟ್ ಹಾಕತಕ್ಕವನನ್ನು ಹಿಡಿದುಕೊಂಡು ದೊಡ್ಡ ಪ್ರಮಾಣದ ವಿಚಾರದವರೆಗೂ ಯಾರನ್ನು ಕೇಳಿದರೂ ಪಾರ್ಟಿ ಫಂಡ್ ಎನ್ನುತ್ತಾರೆ. ಯಾವ ಪಾರ್ಟಿ ಫಂಡೋ? ಯಾರು ಹೇಳಿರುತ್ತಾರೋ? ಯಾರಿಗೆ ಹೋಗುತ್ತದೋ? ಯಾರು ಲೆಕ್ಕ ಇಡುತ್ತಾರೋ ಏನೋ? ಗೊತ್ತಿಲ್ಲ. ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಹೇಳಿದರು. ಶಾಸನಸಭೆಯ ಸದಸ್ಯರಿಗೆ ಒಂದು ನಿಗ್ರಹ ಇರಬೇಕು. ಹಣ ಗಣಿಕೆಯ ಮಾರ್ಗಗಳು ಹಲವು ಹತ್ತಾರು ವಿಷಯಗಳು ಬಂದು ಬಿಟ್ಟವು ಇತ್ತೀಚೆಗೆ. ಕಳೆದ 20–25 ವರ್ಷಗಳಲ್ಲಿ ಬಂದವು. ಅದು ಎಕ್ಸೈಜ್ ಆಗಿರಬಹುದು. ಎಜ್ಯುಕೇಷನ್ ಲಾಬಿ ಆಗಿರಬಹುದು, ಗ್ರಾನೈಟ್ ಲಾಬಿ ಆಗಿರಬಹುದು. ಇವತ್ತು ಅದು ಐರನ್‌ಓರ್ ಆಗಿರಬಹುದು. ಕಾಲಾನುಕಾಲಕ್ಕೆ ಅದು ಬದಲಾಗುತ್ತಾ ಬಂದಿದೆ. ಯಾವಾಗ ರಾಜಕಾರಣದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಹಣದ ಪ್ರಭಾವ ಹೆಚ್ಚಾಗುತ್ತದೋ, ವ್ಯಕ್ತಿಯ ಅಥವಾ ಪಕ್ಷಗಳ ಸಿದ್ಧಾಂತ ಅಥವಾ ಪ್ರಭಾವ ಎರಡನೇ ಸ್ಥಾನಕ್ಕೆ ಬರುತ್ತದೋ, ಏನಕೇನ ಕಾರಣೇಪಿ ಅಧಿಕಾರ

ಹಿಡಿಯಲೇಬೇಕೆನ್ನತಕ್ಕ ಸ್ಥಿತಿಗೆ ನಾವು ತಲುಪುತ್ತೇವ್ರೋ, ಇಂತಹ ಕೆಟ್ಟ ವಾತಾವರಣದಲ್ಲಿ ಇಂತಹ ಹಗರಣಗಳನ್ನು ಬಿಟ್ಟು ಮತ್ತೊಂದು ಹಗರಣ ಬರಲಿಕ್ಕೆ ಸಾಧ್ಯವಿಲ್ಲ. ಆಕಸ್ಮಿಕವಾಗಿ ಇವೊತ್ತು ನೀವು ಅಧಿಕಾರದಲ್ಲಿ ಕುಳಿತಿದ್ದೀರಿ. ನಿಮ್ಮ ಮೇಲೆ ಬಂದು ಕೂತಿದೆ ಅಥವಾ ಇನ್ನೊಬ್ಬರು ಇದ್ದರೂ ಬಹುಶಃ ಅವರ ಮೇಲೂ ಈ ಆಪಾದನೆ ಬರುತ್ತಿತ್ತೇನೋ? ಈ ಆಪಾದನೆ ಬರತಕ್ಕಂಥಾದಂತೂ ಖಾಯಂ. ಆಕಸ್ಮಿಕವಾಗಿ ನೀವು ಅಲ್ಲಿ ಕುಳಿತಿದ್ದೀರಿ, ನೀವೇನೂ ಬೇಸರಪಟ್ಟುಕೊಳ್ಳಬೇಕಾದ್ದಿಲ್ಲ. ಇದು ವ್ಯವಸ್ಥೆ ಯಾರು ಇದರ ಸೃಷ್ಟಿಕರ್ತರು? ಫಲಾನುಭವಿಗಳು ಯಾರು? ನಷ್ಟಕ್ಕೊಳಗಾಗಿರುವವರು ಯಾರು? ಬರೀ ಲೇವಾದೇವಿ ಅಂದರೆ, ಇವರು ಕೊಟ್ಟರು ಅವರು ತೆಗೆದುಕೊಂಡರು. ತೆಗೆದುಕೊಂಡಿದ್ದು ನಿಜವೇ? ಸುಳ್ಳೆ? ಸಾಕ್ಷಿಗಳಿದ್ದಾರೆಯೇ? ಇಲ್ಲವೇ? ಹಾಗಾದರೇ, ಯಡಿಯೂರಪ್ಪನವರೆ, ಅದಕ್ಕೆ ಬಡ್ಡಿ ಎಷ್ಟಾಗಬೇಕು? ಏನು? ಎಂಬುದನ್ನೆಲ್ಲಾ ಪಂಚಾಯಿತಿ ಮಾಡಿ, ತೀರ್ಮಾನ ಮಾಡಿ ಕಳುಹಿಸಿಬಿಡಬಹುದಾಗಿತ್ತು. ರಾಜ್ಯದ ಸಂಪನ್ಮೂಲಗಳಿಗೆ, ರಾಜ್ಯದ ಆಡಳಿತಕ್ಕೆ, ರಾಜಕೀಯ ನೈತಿಕತೆಗೆ ಸಂಬಂಧಿಸಿದ ವಿಚಾರವಾದುದರಿಂದ ನಾವು ಬೇರೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿ ನಂತರ ಇದಕ್ಕೆ ಅನಿವಾರ್ಯವಾಗಿ ಬರಬೇಕಾಗುತ್ತದೆ. ಈಗ ಕಬ್ಬಿಣದ ಅದಿರು. ಹತ್ತು ವರ್ಷದ ಕೆಳಗೆ ಇದನ್ನು ಮುಟ್ಟುವವರು ಯಾರು ಇರಲಿಲ್ಲ. ಎಲ್ಲರೂ ಇದನ್ನು surrender ಮಾಡಿಬಿಟ್ಟಿದ್ದರು. ಇದಕ್ಕೆ ಎಲ್ಲಿಯೋ, ವಿದೇಶದಲ್ಲಿ, ಚೀನಾದಲ್ಲಿ ಮಾರುಕಟ್ಟೆ ಪ್ರಾರಂಭವಾಯಿತು. ಲಕ್ಷಗಟ್ಟಲೆ ಹಣ ಬರುತ್ತದೆಂದು ಗೊತ್ತಾದ ತಕ್ಷಣ ಯಾರು ಜಾಗೃತರಿದ್ದರು, ಬುದ್ಧಿವಂತರಿದ್ದರು, ಅವರು ಹೋಗಿ ಕಬ್ಜಾ ಹಿಡಿದರು. ಲಾಭದ ರುಚಿ ನೋಡಿ 'ಅವರು ಹೋಗಿದ್ದಾರೆ, ನಾನೇಕ ಹೋಗಬಾರದು?' ಎಂದು ಬೇರೆಯವರೂ ಪ್ರಾರಂಭ ಮಾಡಿದರು. ಈಶ್ವರಪ್ಪನವರೇ, ಕಬ್ಬಿಣದ ಅದಿರು ಜನತಾ ದಳದ್ದೇ? ಕಾಂಗ್ರೆಸ್‌ನದ್ದೇ? ಬಿಜೆಪಿಯದ್ದೇ? ಬಿಎಸ್‌ಪಿಯದ್ದೇ? ರಿಪಬ್ಲಿಕನ್ ಪಾರ್ಟಿಯದ್ದೇ? ಯಾವ ಪಾರ್ಟಿಯದ್ದು? ಕಬ್ಬಿಣದ ಅದಿರಿಗೆ ಪಾರ್ಟಿ ಇದೆಯೇ? ಇಲ್ಲ. ಪಾರ್ಟಿಗಳಲ್ಲಿರುವ ನಾವುಗಳು ಕಬ್ಬಿಣದ ಅದಿರು ಹಿಡಿದುಕೊಂಡಿದ್ದೇವೆ. ಕಬ್ಬಿಣದ ಅದಿರು ಇರುವ ಪ್ರದೇಶದಲ್ಲಿ ಅದೊಂದು ಮಿನರಲ್ ಅಂತ ಅದುದರಿಂದ ಸರ್ಕಾರದ ನಿಯಮಾವಳಿ ಪ್ರಕಾರ ಅದನ್ನು major mineral ಎಂದು consider ಮಾಡುತ್ತೀರೋ, minoer mineral ಎಂದು consider ಮಾಡುತ್ತೀರೋ? ಅದನ್ನು ಯಾರಿಗಾದರೂ ಗುತ್ತಿಗೆ ಕೊಡಬೇಕಾಗಿದ್ದರೆ, ಇರತಕ್ಕಂಥ ನಿಯಮಗಳನುಸಾರ ಕೊಡತಕ್ಕಂಥಾದ್ದು. ಕ್ರಮಬದ್ಧವಾಗಿ ಆ ಅದಿರನ್ನು ಅವರು ತೆಗೆದು ಲಾಭ ಮಾಡಿಕೊಳ್ಳತಕ್ಕಂಥಾದ್ದು, ಸರ್ಕಾರಕ್ಕೆ royalty ಕಟ್ಟತಕ್ಕಂಥಾದ್ದು reasonable.

ಆದರೆ, ಒಂದು ನೂರು ಎಕರೆಯನ್ನು ಲೀಸ್‌ಗೆ ತೆಗೆದುಕೊಂಡು, ಲೀಸ್ ವ್ಯಾಪ್ತಿ ಮೀರಿ ಇನ್ನೂ ಎಕರೆಗೆ ಹೋಗಿ ಸರ್ಕಾರಕ್ಕೆ ಬರಬೇಕಾಗಿರತಕ್ಕ ಆದಾಯವನ್ನು ತಪ್ಪಿಸುವ ಮೂಲಕ ಆತ ore ಅನ್ನು exploit ಮಾಡುತ್ತಾನೆ. ಆಗ ಏನಾಗುತ್ತದೆಂದರೆ, ಒಂದು ನೂರು ಎಕರೆ ಪ್ರದೇಶದಲ್ಲಿ ಸರ್ಕಾರಕ್ಕೆ ಯಾವುದರ ಮುಖಾಂತರ royalty ಬರಬೇಕಾಗುತ್ತದೋ, ಅದು ಖಜಾನೆಗೆ ನಷ್ಟವಾಗುತ್ತದೆ. ಒಂದು ನೂರು ಎಕರೆಗೆ ಮೀರಿ ಆತ ಮಾಡುತ್ತಿದ್ದನೆ ಎನ್ನುವ ಸಂಗತಿ ಅಲ್ಲಿರುವ ಸರ್ವೇಯರ್‌ಗೆ ಗೊತ್ತಾಗುತ್ತದೆ, ತಹಶೀಲ್ದಾರ್‌ಗೆ ಗೊತ್ತಾಗುತ್ತದೆ. ನೂರು ಎಕರೆಯಾದರೆ ಇಷ್ಟು ಲೋಡ್ ಹಾಕಬಹುದು, ಆದರೆ, ಇಷ್ಟು ಲೋಡ್ ಹೋಗುತ್ತಿದೆ. ಇದು ಅಕ್ರಮವೆಂದು ಆರ್.ಟಿ.ಓ.ಗೆ ಗೊತ್ತಾಗುತ್ತದೆ. ಇವರೆಲ್ಲರಿಗೂ ಗೊತ್ತಾದ ನಂತರ ಬೆಂಗಳೂರಿಗೂ ಗೊತ್ತಾಗುತ್ತದೆ. ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಬಳ್ಳಾರಿಯಲ್ಲಿರುವ ಎಲ್ಲಾ ಪಾರ್ಟಿಗಳವರಿಗೂ ಗೊತ್ತಾಗುತ್ತದೆ. ಯಡಿಯೂರಪ್ಪನವರೆ, ಕಳ್ಳ ಮದುವೆ ಮಾಡಿಕೊಂಡಾಗ ಸುಮ್ಮನೆ ಗುಟ್ಟಾಗಿ ಹೊರಟು ಬಿಡಬೇಕು. ಕಳ್ಳ ಮದುವೆ ಅಂತ ಓಲಗ ಬೇಕೆಂದು ಬಗ್ಗಿಕೊಂಡು ಓಲಗ ಬಾರಿಸಿದರೆ ಶಬ್ದ ಕಡಿಮೆ ಬರುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ನೀವು ಅನುಭವದ ಆಧಾರದ ಮೇಲೆ ಹೇಳುತ್ತಿದ್ದೀರಾ? ಹೇಗೆ? ನನಗಿನ್ನೂ ಅರ್ಥವಾಗಲಿಲ್ಲ. ಈ ಸಂದರ್ಭದಲ್ಲಿ ಯಡಿಯೂರಪ್ಪನವರಿಗೆ ಈ ತರಹದ ಮಾತನ್ನು ಹೇಳಬೇಕಾದರೆ, ನಮಗೆ ಎಲ್ಲೋ ಒಂದು ಕಡೆ ನಿಮ್ಮ ಮೇಲೆ ಈಗ ಅನುಮಾನ ಬರುತ್ತಿದೆ, ಇದು ಆಗಬಾರದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಲ್ಲಾದರೂ ಒಂದು ಕಡೆಯಲ್ಲಿ ಹೆಚ್.ಎನ್. ನಂಜೇಗೌಡರು ಇವರು ಇಬ್ಬರೂ ಇದ್ದಾಗ ಮಾತ್ರ ನಾನು ಸತ್ಯ ಹೇಳುತ್ತೇನೆ. ಅವರು ಇಬ್ಬರೂ ಇಲ್ಲದೆ ಇವರೊಬ್ಬರೇ ಇದ್ದಾಗ ಎಲ್ಲಾ ವಿಷಯಗಳನ್ನೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಇವರ ವಿಷಯ ಹೇಳಬೇಕಾದರೆ, ಅವರು ಸಾಕ್ಷಿಯಾಗಿ ಇರಬೇಕಾಗುತ್ತದೆ. ನಾನು ಯಡಿಯೂರಪ್ಪನವರನ್ನು ಸಾಂದರ್ಭಿಕವಾಗಿ ಕುರಿತು ಹೇಳಿದ್ದಷ್ಟೆ. ನಾನು ಏನು ಹೇಳುತ್ತೇನೆಂದರೆ, ಮಾಡತಕ್ಕಂಥಾದ್ದು illegal mining ಇದನ್ನು illegal mining ಎಂದು ಹೇಳುತ್ತೇವೆ. ಫಾರೆಸ್ಟ್‌ನಲ್ಲಿ ಇರುತ್ತದೆ. ಫಾರೆಸ್ಟ್‌ನಲ್ಲಿ ಮೈನಿಂಗ್ ಮಾಡಬೇಕಾಗಿದ್ದರೆ, ಕೇಂದ್ರ ಸರ್ಕಾರದ ಅನುಮತಿ ಬೇಕು, Environmental Clearance ಬೇಕು. ಜಬರ್‌ದಸ್ತ್ ಮೇಲೆ ಯಾವ ಪಕ್ಷ ಅಧಿಕಾರದಲ್ಲಿದ್ದರೆ, ಆ ಪಕ್ಷದ ವರ್ಚಸ್ಸು ಉಪಯೋಗಿಸಿಕೊಂಡು, ನಾನು ಬಿಜೆಪಿ, ಜೆಡಿ(ಎಸ್) ಸರ್ಕಾರ ಎಂದು ಹೇಳುವುದಿಲ್ಲ, ಯಾವ ಸರ್ಕಾರ ಅಧಿಕಾರದಲ್ಲಿದ್ದರೆ, ಆ ಸರ್ಕಾರದ ವರ್ಚಸ್ಸು ಬಳಸಿಕೊಂಡು, ಏನಾಗುತ್ತಿದೆ? ಸರ್ಕಾರದಲ್ಲಿರುವ ನಾವು ಬರೀ

ಗುರಾಣಿ ಅಷ್ಟೆ, ಅಪರಾಧಿಗಳು ಬೇರೆ. ನಾವು-ನೀವು ಸುಮ್ಮನೆ ಮೈಮೇಲೆ ಹಾಕಿಕೊಳ್ಳುತ್ತಿದ್ದೇವೆ. ನಮಗೆ ಇದರಲ್ಲಿ ಏನೂ ಇಲ್ಲವೇ ಇಲ್ಲ. ಅವರು ಈ ತಕ್ಷಣಕ್ಕೆ ನಮ್ಮನ್ನು ಗುರಾಣಿಗಳಂತೆ ಉಪಯೋಗಿಸಿಕೊಳ್ಳುತ್ತಾರೆ. ಗುರಾಣಿಗಳಂತೆ ಮಾಡಿಕೊಂಡು ಕೆಳಗಿನವರ ಬಾಯಿ ಮುಚ್ಚಿಸುತ್ತಾರೆ. ಕೆಳಗಿನವರಿಗೇನು? ಅವರೇನೂ ಸರ್ಕಾರಗಳನ್ನು ತರುವವರಲ್ಲ, ಮಾಡಿಕೊಂಡು ಕೆಳಗಿನವರ ಬಾಯಿ ಮುಚ್ಚಿಸುತ್ತಾರೆ. ಕೆಳಗಿನವರಿಗೇನು? ಅವರೇನೂ ಸರ್ಕಾರಗಳನ್ನು ತರುವವರಲ್ಲ, ತೆಗೆದುಯುವವರೂ ಅಲ್ಲ. ಅಲ್ಲಿಗೆ ಪೋಸ್ಟಿಂಗ್ಸ್ ಮಾಡಿಸಿಕೊಂಡಿರುತ್ತಾರೆ, ನಾಲ್ಕು ಕಾಸು ಸಿಕ್ಕಿದರೆ ಸಾಕೆಂದು ಅವರು ಹೇಳುತ್ತಾರೆ. ಇದು ಹೊರಗೆ ಬರತಕ್ಕಂಥಾದ್ದು ವಿಧಾನಸಭೆವರೆಗೆ ಪ್ರವೇಶ ಮಾಡತಕ್ಕಂಥಾದ್ದು.... ಇಲ್ಲಿ ಚರ್ಚೆಗೆ ವಸ್ತು ಯಾವ ಸನ್ನಿವೇಶದಲ್ಲಿ ಬಂತು? ಈ ಕೊಟ್ಟು-ತೆಗೆದುಕೊಳ್ಳುವ ವ್ಯವಹಾರ ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿ. ಕೊಟ್ಟು-ತೆಗೆದುಕೊಳ್ಳುವ ವ್ಯವಹಾರ, ಅವರಪ್ಪನ ಆಸ್ತಿಯಲ್ಲ, ಅವರ ಅಜ್ಜನ ಆಸ್ತಿಯಲ್ಲ, ಸರ್ಕಾರದ ಆಸ್ತಿಯನ್ನು ಖಾಸಗಿಯವರೇ ಲೂಟಿ ಹೊಡೆಯುವುದಕ್ಕೆ ಸರ್ಕಾರವನ್ನು ತಡಿಕೆಯಾಗಿಟ್ಟುಕೊಂಡು ಏನು ಪ್ರಯತ್ನ ಮಾಡುತ್ತಾರೆ, ಈ ಹೊಂದಾಣಿಕೆಗಳಲ್ಲಿ ಹೆಚ್ಚು-ಕಡಿಮೆಯಾದಾಗ ಸಾರ್ವಜನಿಕ ವಸ್ತುವಾಗುತ್ತದೆ. ಆಗಲೇ ನಾವು ಕೈಗೆ ತೆಗೆದುಕೊಳ್ಳುವುದು. ಎಲ್ಲೋ ಒಂದು ಕಡೆ ಇದೆಲ್ಲವೂ ಮುಗುಂ ಆಗಿ ತೆಗೆದುಕೊಂಡು ಹೋಗುವುದಾಗಿದ್ದರೆ, ತೊಂದರೆ ಇಲ್ಲ. ಕೆಲವು ದಿವಸ exciseನಲ್ಲಿ ಸೆಕೆಂಡ್ಸ್ ಬರುತ್ತಿತ್ತು. ನಾನು ಅಲ್ಲಿ ಕುಳಿತಿದ್ದೆ, ಯಡಿಯೂರಪ್ಪನವರೆ, ನೀವು ಇಲ್ಲಿ ಕುಳಿತಿದ್ದಿರಿ. ಲೇಬಲ್ಸ್ ಎಲ್ಲಾ ತಂದುಕೊಟ್ಟು 'ಸೆಕೆಂಡ್ಸ್ ಅಲ್ಲ ಸ್ವಾಮಿ, ಥರ್ಡ್ಸ್ ನೋಡಿ' ಎಂದು ಹೇಳಿದ್ದು ತಮಗೆ ನೆನಪಿದೆಯೇ? ಇದು ಎಲ್ಲಿಗೆ ಹೋಯಿತು ಅಂದರೆ, ಒಂದು ಕಾಲಕ್ಕೆ ಇಡೀ ರಾಜ್ಯದ ಆಡಳಿತವನ್ನೇ ಅವರು ನಡೆಸುತ್ತಾರೇನೋ ಅನ್ನುವ ಮಟ್ಟಕ್ಕೆ ಹೋಗಿ ಬಿಟ್ಟಿತು ಈ ಎಕ್ಸೈಸ್ ಲಾಬಿ. ಅನಂತರ ಅನೇಕ ಕಾರಣಗಳಿಗೆ ಅವ್ಯೊತ್ತಿಗೆ ಸರ್ಕಾರ 'ಓಹೋ, ಇದು ಹದ್ದು ಮೀರಿ ಹೋದರೆ ಏನು...' ಎಂದು ಚಿಂತಿಸಿ, ಒಂದು ಪಾನೀಯ ನಿಗಮ ಸ್ಥಾಪಿಸಿ, ಅದನ್ನು ಹತೋಟಿಗೆ ತಂದರು. ಸ್ವಲ್ಪಮಟ್ಟಿಗೆ ಅದು ಸುಧಾರಿಸಿದೆ. ಈಗ ಅದರ ಖಾತೆ ಬಗ್ಗೆ ಹೆಚ್ಚು ಕೇಳಿ ಬರುತ್ತಿಲ್ಲ. ಸಾರ್ವಜನಿಕ ಗಮನಕ್ಕೆ ಬೊಕ್ಕಸಕ್ಕೆ ಆಗತಕ್ಕಂಥ ನಷ್ಟದ ವಿಚಾರ ಗಮನಕ್ಕೆ ಬಂದಾಗ, ಇದರಲ್ಲಿ ಯಾರ್‍ಯಾರು ಭಾಗಿಗಳು? ಒಂದೇ ಉಲ್ಲೇಖ ಮಾಡುತ್ತೇನೆ ನಾನು ಅದನ್ನು ಹೆಚ್ಚು ಹೇಳುವುದಿಲ್ಲ. ಶ್ರೀರಾಮರೆಡ್ಡಿಯವರು ಒಂದು ನ್ಯಾಯಸಮ್ಮತವಾದಂಥ ಮಾತನ್ನು ಹೇಳೀದರು. ಒಂದು ವೇಳೆ ಬಿಜೆಪಿಯೊಳಗೆ ಪರಸ್ಪರ ನಿಮ್ಮ ನಿಮ್ಮಲ್ಲೇ ಏನಾದರೂ ಅಭಿಪ್ರಾಯ ಬೇಧಗಳಿದ್ದು, ನಿಮ್ಮ ಸಂಸ್ಥೆಗೆ ಅಥವಾ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ

ಹೇಳಿಕೆಗಳು, ಭಿನ್ನಮತ ಇದ್ದಿದ್ದರೆ, ಅದು ನಮಗೆ ಸಂಬಂಧಿಸಿಲ್ಲದಿರುವ ವಿಚಾರ. ನಾವು ಗೌರವಸ್ಥರಾಗಿದ್ದರೆ, ಅದಕ್ಕೆ interfere ಆಗಬಾರದು. ಆದರೆ, ನೀವು ಸಮ್ಮಿಶ್ರ ಸರ್ಕಾರದ ವ್ಯವಸ್ಥೆಯಲ್ಲಿ ಪಾಲುದಾರರಾಗಿರುವ ವೇಳೆಗೆ ನಿಮ್ಮ ಸಂಸ್ಥೆಯ ಅಂಗರಚನೆಯಲ್ಲಿ ಜವಾಬ್ದಾರಿ ಹೊಂದಿರುವ ಒಬ್ಬರು ಸರ್ಕಾರದ ಮೇಲೆ ಗುರುತರವಾದಂಥ ಆಪಾದನೆ ಮಾಡಿದ್ದಾರೆ. ಆಪಾದನೆ ಮಾಡಿದ ಮೇಲೆ ಅವರು ಹಿಂದೆ ಸರಿದಿಲ್ಲ. ಅವರಿಗೆ ತಿಳವಳಿಕೆ ಕೊಡುವುದಕ್ಕೆ, ಮನವೊಲಿಸುವುದಕ್ಕೆ ನೀವು ಏನು ಪ್ರಯತ್ನಗಳನ್ನು ಪಟ್ಟಿದ್ದೀರೋ, ಅದ್ಯಾವುದೂ ಕೂಡ ಏನೂ ಫಲ ಕೊಟ್ಟಂತೆ ಕಾಣಲಿಲ್ಲ. ಯಾರ ಕುರಿತಾಗಿ ಈ ಆಪಾದನೆಗಳನ್ನು ಮಾಡಿದ್ದಾರೋ, ಅವರೂ ಕೂಡ 'ಈ ಆಪಾದನೆಗಳಲ್ಲಿ ಹುರುಳಿಲ್ಲ, ನಾನು ನಿರಾಕರಿಸುತ್ತೇನೆ' ಎಂದು ಧೈರ್ಯವಾಗಿ ಹೇಳಿಲ್ಲ. ನೋಡಿ, ಗೊಂದಲಮಯ ಸ್ಥಿತಿ. ಹೇಳಿದವರು 'ನನ್ನ ಮಾತಿಗೆ ನಾನು ಬದ್ಧ'ವೆಂದು ಹೇಳುತ್ತಾರೆ. ಆದರೆ, ಯಾರು ಆಪಾದನೆಗೆ ಒಳಗಾಗಿದ್ದಾರೋ, ಅವರು ನಿರಾಕರಣೆ ಮಾಡುವುದಿಲ್ಲ. ಅಧ್ಯಕ್ಷರೆ, ನಾವೇನು ಮಾಡಬೇಕೆಂಬುದನ್ನು ತಾವೇ ಹೇಳಿ. ಇದನ್ನು ಚರ್ಚೆ ಮಾಡಬೇಕೆಂದು ನಾವು ಕೇಳುವುದರಲ್ಲಿ ತಪ್ಪೇನಿದೆ? 'ದಾಖಲೆಗಳನ್ನು ಕೊಡಿ, ದಾಖಲೆಗಳನ್ನು ಕೊಡಿ' ಎಂದು ಹೇಳುತ್ತಾರೆ. ಆಪಾದನೆ ಯಾರೋ ಒಬ್ಬರು ಮಂತ್ರಿಗಳ ಮೇಲೆ ಬಂದಿದ್ದರೆ, ಒಬ್ಬ Managing Director ಮೇಲೆ ಬಂದಿದ್ದರೆ. ಒಬ್ಬ ಶಾಸಕರ ಮೇಲೆ ಬಂದಿದ್ದರೆ, Alright ನಿಮ್ಮ ಅಧೀನದಲ್ಲಿರುವ ಒಂದು ಸಂಸ್ಥೆಗೂ ಕೊಡಿ ಎಂದು ಹೇಳಬಹುದಿತ್ತು. ರಾಜ್ಯದ ಅತ್ಯಂತ ಜವಾಬ್ದಾರಿ ಸ್ಥಾನದಲ್ಲಿರುವವರು ಈ ರಾಜ್ಯದ ಆಡಳಿತ ವ್ಯವಸ್ಥೆಯ ವ್ಯಾಪ್ತಿಯೊಳಗೆ ಬರತಕ್ಕಂಥ ಎಲ್ಲಾ ಸಂಸ್ಥೆಗಳೂ ಅವರ ಅಧೀನದಲ್ಲೇ ಕೆಲಸ ಮಾಡತಕ್ಕಂಥ ಪರಿಸ್ಥಿತಿ ಇದ್ದಾಗ, ಅವರ ಮೇಲಿನ ಆರೋಪಣೆಗೆ ಅವರನ್ನೇ ನ್ಯಾಯಮೂರ್ತಿಗಳನ್ನಾಗಿ ಮಾಡುವುದಕ್ಕೆ ಸಾಧ್ಯವೇ? Can the Prosecutor, complainant and Judge be all one and the same? Is is possible? Is it fair? ನಾನು ಕೇಳತಕ್ಕದ್ದು in the interest of equity and justice ನೀವು ತಿಂದಿರಿ, ತೆಗೆದುಕೊಂಡಿರಿ ಎಂದು ಹೇಳುವುದಿಲ್ಲ ಅವರು ಹೇಳಿದ್ದು ಸತ್ಯವೆಂದು ಹೇಳುವುದಿಲ್ಲ, ಆದರೆ ಕಬ್ಬಿಣದ ಅದಿರಿಗೆ ಡಿಮ್ಯಾಂಡ್ ಹೆಚ್ಚಾಗಿದೆ ಎಂಬುದು ಗೊತ್ತು. ಕೋಟ್ಯಾಂತರ ರೂಪಾಯಿ ಇದರಿಂದ ಸಂಪಾದನೆಯಾಗುತ್ತದೆ ಎಂಬುದು ಇಡೀ ಲೋಕಕ್ಕೆ ಗೊತ್ತಿರುವ ಸತ್ಯ. ನಿಯಮಾನುಸಾರ ಯಾರು ಪರ್ಮಿಟ್ ಪಡೆದುಕೊಂಡಿರುತ್ತಾರೆ ಅವರು ಅಷ್ಟರಲ್ಲೇ ಕೆಲಸ ಮಾಡಿಕೊಂಡು ರಾಯಲ್ಟಿಯನ್ನು ಕಟ್ಟಿ ಆ ಅದಿರನ್ನು ಅವರು export ಮಾಡಿದರೆ ಅದರಲ್ಲೇನೂ ಸಮಸ್ಯೆ ಇಲ್ಲ. It becomes legalized business.

ಅದು ಆಗದೇ ಇರುವುದರಿಂದ ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಆದಾಯ ನಷ್ಟವಾಗಿರುವುದರಿಂದ, ಅದು ಯಾವ ಪ್ರಮಾಣದಲ್ಲಾಗಿದೆ? ಯಾರು ಕಾರಣಕರ್ತರು? ಯಾರ್‍ಯಾರು ಇದರೊಳಗೆ ಶಾಮೀಲಾಗಿದ್ದಾರೆ? ಎಷ್ಟು ದಿವಸಗಳಿಂದ ಇದು ನಡೆದಿದೆ? ಇದನ್ನು ತಡೆಹಿಡಿಯುವುದು ಹೇಗೆ? ನೀವೇ ಮುಖ್ಯಸ್ಥರೇ ಆಪಾದನೆಗೆ ಒಳಗಾಗಿರುವುದರಿಂದ ನಾನು ಹೇಳುವುದೇನೆಂದರೆ ನಾವು ಉಭಯಂತರರು, ನಾವು ಅರ್ಜಿದಾರರು, ನೀವು ಎದುರು ಅರ್ಜಿದಾರರು ನಾವಿಬ್ಬರೂ ಇದರ ಬಗ್ಗೆ ವಿಚಾರಣೆ ಮಾಡುವುದು ಬೇಡ. ಮೂರನೆ ವ್ಯಕ್ತಿಗೆ ಇದನ್ನು ಒಪ್ಪಿಸೋಣವೆಂದು. ಇದರಲ್ಲೇನು ತಪ್ಪಿದೆ? ಯಡಿಯೂರಪ್ಪನವರೇ ನೀವೇ ಹೇಳಿ? ಈಗ ಅಭಿಪ್ರಾಯ ಬೇದಗಳು ಬರುವುದು ಸಹಜ. ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕಾಂಗ್ರೆಸ್ ಪಕ್ಷದೊಳಗೆ ಭಿನ್ನಾಭಿಪ್ರಾಯ ಬಂದು ಇಲ್ಲೇ ಬಂದು ಜಗಳ ಮಾಡಿದರು. ಇದು ಇತಿಹಾಸ. ನಾವು ಇಲ್ಲ ಎಂದರೆ ಅದು ಅಳಿಸಿ ಹೋಗುತ್ತದೆಯೆ? ರಾಮಕೃಷ್ಣಹೆಗ್ಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೂ ಅದೇ ರೀತಿಯಾಯಿತು. ಕೇಂದ್ರದಲ್ಲಿ ಜನತಾ ಸರ್ಕಾರ ಬಂತು. ಸ್ವಲ್ಪ ದಿವಸದ ನಂತರ ದ್ವಿಸದಸ್ಯತ್ವದ ಪ್ರಶ್ನೆ ಬಂತು. ಸರ್ಕಾರ ಬಿದ್ದುಹೋಯಿತು. ನಾನು ಆಡಳಿತ ಪಕ್ಷದಲ್ಲಿರುವ ಅತ್ಯಂತ ಹಿರಿಯ ಮುಖಂಡರುಗಳ್ಯಾರಿದ್ದಾರೆ ಅವರಿಗೆ ಒಂದು ವಿನಂತಿ ಮಾಡುತ್ತೇನೆ, ಇತಿಹಾಸವನ್ನು ನಾವು ಮರೆಯಬಾರದು. 1971ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಗೆ, ಕಾಂಗ್ರೆಸ್ ಪಕ್ಷಕ್ಕೆ, ಊಹೆ ಮಾಡಲು ಸಾಧ್ಯವಿಲ್ಲದಿರುವಂಥ ಒಂದು ರೀತಿಯ ಜನ ಬಲ ಸಿಕ್ಕಿತು. ಈ ರಾಜ್ಯದ ಈ ದೇಶದ ಜನ ಬೇರೆ ರಾಜಕೀಯ ಪಕ್ಷಗಳನ್ನು ಧೂಳಿಪಟ್ಟ ಮಾಡಿಬಿಟ್ಟರು. ಇನ್ನು ಮುಂದೆ ಇದೊಂದೇ ಪಕ್ಷವೇನೋ ಈ ದೇಶದಲ್ಲಿ ಎನ್ನತಕ್ಕ ಸ್ಥಿತಿ ಬಂದುಬಿಟ್ಟಿತು. 1975–1977ರಲ್ಲಿ emergency.. ಬಂದು ಶ್ರೀಮತಿ ಇಂದಿರಾಗಾಂಧಿಯವರೇ ಲೋಕಸಭೆಗೆ ಆರಿಸಿ ಬರಲು ಸಾಧ್ಯವಾಗಲಿಲ್ಲ. 1977ನೇ ಇಸವಿಯಲ್ಲಿ ಯಾರು ಕನಸೇ ಕಾಣಲಿಲ್ಲವೋ, ಆಲೋಚನೆಯನ್ನೇ ಮಾಡಲಿಲ್ಲವೊ ಅವರೆಲ್ಲಾ ಲೋಕಸಭೆಗೆ ಆರಿಸಿಬಂದುಬಿಟ್ಟರು. ಮತ್ತೆ ಮೂರೇ ವರ್ಷಕ್ಕೆ 1980ನೇ ಇಸವಿಯಲ್ಲಿ ಏನಾಯಿತು? ನಾನು ಸಂಖ್ಯಾ ಬಲದಿಂದ ಪ್ರಾರಂಭ ಮಾಡಿದೆ, ಶಾಸನ ಸಭೆಯಲ್ಲಿ ಇರತಕ್ಕ ಸಂಖ್ಯಾಬಲ ಸರ್ಕಾರಕ್ಕೆ ಸ್ಥಿರತೆಯನ್ನು ಕೊಡುತ್ತದೆ ಎನ್ನತಕ್ಕ ಭ್ರಮೆಯಲ್ಲಿ ನೀವಿದ್ದರೆ ತಪ್ಪು. ಆ ಭ್ರಮೆಯಿಂದ ದಯಮಾಡಿ ಹೊರಕ್ಕೆ ಬನ್ನಿ. ಜನ ಅಸಹಾಯಕರು ಎಂದು ನಾವು ಭಾವಿಸಿದರೆ ನಾವು ತಪ್ಪಿತಸ್ಥರಾಗುತ್ತೇವೆ. ಜನ ಅಸಹಾಯಕರಲ್ಲ. ಅವರು ಜಾಗೃತರು. ಈ ದೇಶದ ಇತಿಹಾಸದಲ್ಲಿ ಸಮಯದಿಂದ ಸಮಯಕ್ಕೆ ಯಾರ್‍ಯಾರಿಗೆ ಯಾವಾಗ ಪಾಠಕಲಿಸಬೇಕು

ಎಂಬುದನ್ನು ಕಲಿಸುತ್ತಲೇ ಬಂದಿದ್ದಾರೆ. ಈ ಹಗರಣದಲ್ಲಿ ಮೇಲ್ನೋಟಕ್ಕೆ ಎದ್ದು ಕಾಣುವಂತೆ ಕನಿಷ್ಟಪಕ್ಷ ಏನೋ ನಡೆಯಬಾರದು ನಡೆದಿದೆ ಎನ್ನತಕ್ಕದ್ದು ಇದೆ. ಯಾರನ್ನೋ ಬಚ್ಚಿಡುವುದರಿಂದ ನೀವು ರಾಜ್ಯಕ್ಕೆ ಹಿತವನ್ನು ಮಾಡುವುದಿಲ್ಲ. ಅಥವಾ ನಿಮ್ಮನ್ನು ಸರ್ಕಾರದಿಂದ ಇಳಿಸಿ ನಾವು ಬಂದು ಕುಳಿತುಕೊಂಡುಬಿಡಬೇಕು ಎಂದು ಕುತಂತ್ರ ಮಾಡಿದರೆ ನಮ್ಮ ನಡವಳಿಕೆಯನ್ನೂ ಕೂಡ ಜನರು ಬಹಳ ಚೆನ್ನಾಗಿ ನೋಡುತ್ತಾರೆ. ಈ ಸದನಕ್ಕೆ ಬರುವ ವಿಚಾರದಲ್ಲಿ ಕೂಡ ನಮ್ಮನ್ನು ಹೊರಕ್ಕು ಇಟ್ಟಿದ್ದಾರೆ ಒಳಕ್ಕೂ ಇಟ್ಟಿದ್ದಾರೆ. ಹೋದ ಸಲ ನಾನು ಅಸೆಂಬ್ಲಿಗೆ ಸೋತುಹೋಗುತ್ತೇನೆಂದು ನೀವು ಭಾವಿಸಿದ್ದಿರಾ? ನಾನು ಭಾವಿಸಿದ್ದೆನೆ? ವಾಟಾಳರು ಭಾವಿಸಿದ್ದರಾ? ನಾವೆಲ್ಲರೂ ಸೋತೆವು. ಗೆಲ್ಲಿಸಿದಾಗ ಈ ಜನ ಒಳ್ಳೆಯವರು ಎಂದು ಸೋಲಿಸಿದಾಗ ಸರಿಯಿಲ್ಲವೆಂದು ಹೇಳುವುದಕ್ಕೆ ಆಗುತ್ತದೆಯೇ? ಅವರು ಅವರದ್ದೇ ಆದಂಥ ಕಾರಣಗಳಿಗೆ ನಿರ್ಣಯಗಳನ್ನು ಕೊಡುತ್ತಾ ಬಂದಿದ್ದಾರೆ. Generalize ಮಾಡಿ overall ಆಗಿ ಅವರ judgementನ್ನು ನೋಡಿದಾಗ ಈ ದೇಶದ ಜನ ಅತ್ಯಂತ ಪ್ರಭುದ್ಧರಾಗಿ ಪ್ರೌಢಿಮೆಯಿಂದ ಜವಾಬ್ದಾರಿಯಿಂದ ತಮ್ಮ ತೀರ್ಪನ್ನು ಕೊಡುತ್ತಾ ಹೋಗಿದ್ದಾರೆ. ಆದ್ದರಿಂದ ಶಾಸನ ಸಭೆಗಳಲ್ಲಿ ತಾತ್ಕಾಲಿಕ ಸಿಗತಕ್ಕ ಸಂಖ್ಯಾ ಬಲ ಸ್ಥಿರತೆ ಎನ್ನತಕ್ಕ ಭ್ರಮೆ ನಮ್ಮಲ್ಲಿ ಇರುವುದು ಬೇಡ. ಆ ಭ್ರಮೆಯನ್ನು ಮರೆತು ಸತ್ಯವನ್ನು ಸಾಬೀತು ಮಾಡುವುದಕ್ಕೆ ಸರ್ಕಾರಕ್ಕೆ ಆಗಿರತಕ್ಕ ನಷ್ಟವನ್ನು ಯಾರು ಮಾಡಿದ್ದಾರೆ, ಹೇಗೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಮಗಿಂತ ಒಂದು ಹೆಜ್ಜೆ ನೀವು ಮುಂದೆ ಇಡಬೇಕು. ನಮ್ಮ ಕಾಂಗ್ರೆಸ್‌ನವರಿಗೆ ಒಂದು disadvantage ಇದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಹೆಚ್ಚು ವರ್ಷಗಳ ಕಾಲ ಆಡಳಿತ ಮಾಡಿದ್ದೇವೆ. ಜೇನು ತೆಗೆದವನು ಎಲ್ಲೋ ಒಂದು ಕಡೆ ನೆಕ್ಕಿರಬಹುದು. ಆದ್ದರಿಂದ ನೀವೆಲ್ಲಾ ಸಾರ್ವತ್ರಿಕವಾಗಿ, ಈಗ ಜ್ಞಾನೇಂದ್ರರವರೆಲ್ಲಾ ಇಷ್ಟು ವರ್ಷ ನೀವೇ ಇದ್ದಿರಿ, ನಿಮ್ಮ ಹಣೆಯಬರಹ ಗೊತ್ತಿಲ್ಲವೇ ಎಂದು ಹೇಳುತ್ತಿರುತ್ತಾರೆ. ಆ ಮಾತು ಅಂದಾಗ ನಮಗೆ ಎಲ್ಲೋ ಒಂದು ಕಡೆ ಮನಸ್ಸು ಹಿಂಜರಿಕೆಯಾಗುತ್ತದೆ. ಏಕೆಂದರೆ ಮನಸ್ಸು ಬಿಚ್ಚಿ ಸತ್ಯವಾಗಿ ಮಾತನಾಡೋಣ. ನಾಟಕೀಯವಾಗಿ ಮಾತನಾಡತಕ್ಕದ್ದು ಬೇಡ. ಇದು ಐತಿಹಾಸಿಕ ಸತ್ಯ. ಬಹಳ ವರ್ಷಗಳ ಕಾಲ ನಾವು ಇದ್ದದ್ದು ಸತ್ಯ. ನಾವು ಆ ಅಭಿವೃದ್ಧಿ ಮಾಡಿದೆವು. ಈ ಅಭಿವೃದ್ಧಿ ಮಾಡಿದೆವು ಎಂಬುದನ್ನೆಲ್ಲಾ ಹೇಳಿದರೂ ಕೂಡ ಸ್ವಾತಂತ್ರ್ಯ ಲಭಿಸಿದ ನಂತರ ಹೆಚ್ಚು ವರ್ಷಗಳ ಕಾಲ ನಾವು ಆಡಳಿತವನ್ನು ನಡೆಸಿರುವುದರಿಂದ ನಮಗೆ ಈ ಒಂದು stigma ಎಂದು ಏನು ಹೇಳುತ್ತೇವೆ ಇದೂ ಕೂಡ ನಮಗೆ ಅಂಟಿಕೊಂಡಿದೆ. ಆದರು ಎಲ್ಲರೂ ಕೆಟ್ಟವರಲ್ಲ. ಎಲ್ಲಾ ವ್ಯವಸ್ಥೆಯಲ್ಲೂ ಕೆಟ್ಟವರಿರುವುದಿಲ್ಲ. ಮಾನ್ಯ

ಮಧುಸ್ವಾಮಿಯವರು ಬಹಳ ಮಾರ್ಮಿಕವಾಗಿ ಒಂದು ಮಾತನ್ನು ಹೇಳಿದರು. ಈ ಸದನದಲ್ಲಿ ಬಹಳ ಜನ ಅದನ್ನು ಗಮನಿಸಲೂ ಇಲ್ಲ ನಗಲೂ ಇಲ್ಲ. ಅವಕಾಶಗಳು ಸಿಗದೇ ಇರುವುದರಿಂದ ಪ್ರಾಮಾಣಿಕವಾಗಿ ಇರತಕ್ಕವರು ಬಹಳ ಜನರಿದ್ದಾರೆ, ಭ್ರಷ್ಟರಾಗಲು ಅವಕಾಶ ಬಹಳ ಜನರಿಗೆ ಸಿಗಲಿಲ್ಲ, ಹಾಗಾಗಿ ಬಹಳ ಜನ ಪ್ರಾಮಾಣಿಕವಾಗಿ ಉಳಿದುಬಿಟ್ಟರು ಈಶ್ವರಪ್ಪನವರೇ ಅವಕಾಶ ಒದಗಿ ಬಂದಾಗ, ಅಧಿಕಾರ ದುರುಪಯೋಗ ಮಾಡುವುದಕ್ಕೆ ಅವಕಾಶವಿದ್ದಾಗ ಯಾರು ತಾತ್ವಿಕವಾಗಿ, ಮನೋನಿಗ್ರಹದಿಂದ ನಡೆದುಕೊಳ್ಳುತ್ತಾನೆ ಅವನು ಪ್ರಾಮಾಣಿಕ. ಆ ಸಂಖ್ಯೆ ಈಗ ವಿರಳವಾಗಿದೆ. ನಾವು ಜನರಲ್ ಆಗಿ ಇದರಿಂದ escape ಮಾಡುವುದಕ್ಕೆ ಈ system ಸರಿಯಿಲ್ಲವೆಂದು ಹೇಳುತ್ತೇವೆ. ನಾವೆಲ್ಲರೂ ಕಾಂಪ್ರಮೈಸ್ ಆಗಿರತಕ್ಕದ್ದು ಇಲ್ಲಿ ಅತ್ಯಂತ ಸೋಜಿಗದ ವಿಷಯ. ಈ ಕ್ಷಣಕ್ಕೂ ಇಷ್ಟು ದಿವಸಗಳಾದಮೇಲೂ ನಿಮ್ಮಿಂದ ಯಾವುದೇ ವಿಧವಾದಂಥ ಪ್ರಕ್ರಿಯೆ ಇಲ್ಲ. ಸರ್ಕಾರ ಎನ್ನತಕ್ಕ ಸಂಸ್ಥೆ ನೀವೇನು ಜೀವಂತವಾಗಿರಬೇಕು, ಈ ರಾಜ್ಯದ ಜನರ ಘನತೆ, ಗೌರವ, ಪ್ರಾಣ, ರಕ್ಷಣೆ, ಮಾನ ರಕ್ಷಣೆ ಬೊಕ್ಕಸವನ್ನು ಕಾಪಾಡಬೇಕಾಂಥ ನೈತಿಕ ಹೊಣೆಯನ್ನು ಸಂವಿಧಾನಬದ್ಧವಾಗಿ ನೀವ್ಯಾರು ಹೊತ್ತುಕೊಂಡಿದ್ದೀರಿ, ನೀವು ಈ ವಿಷಯ ಬೆಳಕಿಗೆ ಬಂದಾಗಿನಿಂದೀಚೆಗೆ ಒಂದು ಸರ್ಕಾರವಾಗಿ ನಾವು ಜೀವಂತವಾಗಿದ್ದವೆ; ಇದು ನಮ್ಮ ಪ್ರತಿಕ್ರಿಯೆ ಇದು ನಾವು ತೆಗೆದುಕೊಂಡಿರುವ ಕ್ರಮ ಎನ್ನತಕ್ಕ ಮಾತನ್ನು ಹೇಳಿಲ್ಲ. ಆದ್ದರಿಂದ ನೀವು ಎಲ್ಲೋ ಒಂದು ಕಡೆ ನರಳುತ್ತಿದ್ದೀರಿ. ನೀವು ಆರೋಗ್ಯವಾಗಿಲ್ಲ. ರೆಡ್ಡಿಯವರು ನಿಮ್ಮ ನಿಮ್ಮ ಭಿನ್ನಮತ ಯಾರು ಅಧಿಕಾರದಲ್ಲಿ ಇರುತ್ತೀರಿ ಹೋಗುತ್ತೀರಿ ಎಂಬುದು ನಮಗೆ ಮುಖ್ಯವಲ್ಲವೆಂದು ಹೇಳಿದರು. ಈ ರಾಜ್ಯಕ್ಕೆ ಒಂದು ಸ್ಥಿರವಾದ ಸರ್ಕಾರ ಬೇಕು, ಅದು ನಮ್ಮ ಬೇಡಿಕೆ. ಸ್ಥಿರವಾದ, ಆರೋಗ್ಯವಾದ ದೃಢವಾದ ಸರ್ಕಾರವಿದ್ದಿದ್ದರೆ ಇಷ್ಟೊತ್ತಿಗಾಗಲೇ reaction ತೋರಿಸಬೇಕಾಗಿತ್ತು. ಅವರು ಹೇಳಿದರು ನಮ್ಮ ಹತ್ತಿರ ಏನೂ documents ಇಲ್ಲವೆಂದು documents ಇದ್ದಾವೆ. ನಾವು ಅಪರಾಧಿಗಳನ್ನು ಪತ್ತೆ ಹಚ್ಚಬೇಕಾಗಿದ್ದರೆ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಕೆಲವು ನಿಯಮಗಳನ್ನು ಇಟ್ಟುಕೊಂಡಿದ್ದೇವೆ. ಸಣ್ಣ ಪುಟ್ಟ ಹೊಡೆದಾಟವಾದರೆ ಸಬ್‌ಇನ್ಸ್‌ಪೆಕ್ಟರ್ ನೋಡುತ್ತಾರೆ, ಸಣ್ಣ ಪ್ರಮಾಣದ ಕಳ್ಳತನವಾದರೆ ಸಬ್‌ಇನ್ಸ್‌ಪೆಕ್ಟರ್ ನೋಡುತ್ತಾರೆ. ಹೈವೇಯಲ್ಲಿ ದರೋಡೆಯಾಗುತ್ತದೆ, ಅದಕ್ಕೆ ಡಿ.ವೈ.ಎಸ್.ಪಿ ಬರಬೇಕಾಗುತ್ತದೆ. Attempt to murder ಎಂಬುದಾದರೆ ಇನ್ಸ್‌ಪೆಕ್ಟರ್ ಬರಬೇಕಾಗುತ್ತದೆ. ವೀರಪ್ಪನ್ ತರದವರು ಬಂದಾಗ ಎಸ್.ಟಿ.ಎಫ್ squadನ್ನೇ ರಚನೆ ಮಾಡಬೇಕಾಗುತ್ತದೆ. ಯಾವುದೋ ಒಂದು ಫೋರ್ಜರಿ ಕೇಸ್ ಇರುತ್ತದೆ, ಅದನ್ನು

handwriting expertಗೆ ಕಳುಹಿಸುತ್ತೇವೆ. ಒಬ್ಬರು ಇನ್ಸ್‌ಪೆಕ್ಟರ್‌ರನ್ನು ಇನ್‌ಚಾರ್ಜ್ ಮಾಡುತ್ತೇವೆ, ಎಲ್ಲೋ ಒಂದು ಕಡೆ civil rights enforcement cellಗೆ ಒಂದು ಕಂಪ್ಲೇಂಟ್ untouchability ಇದ್ದರೆ ಅವರಿಗೆ ಕಳುಹಿಸುತ್ತೇವೆ. Forestನಲ್ಲಿ ಎಲ್ಲೋ ಒಂದು ಕಡೆ ಸ್ಮಗ್‌ಲಿಂಗ್ ಆಗಿದ್ದರೆ Forest cellಗೆ ಕಳುಹಿಸುತ್ತೇವೆ. ಮಾಮೂಲಿ ಪೋಲೀಸರಿಗೆ ಪತ್ತೆ ಹಚ್ಚಲು ಆಗುವುದಿಲ್ಲವೆಂದರೆ C.O.Dಗೆ ಕಳುಹಿಸುತ್ತೇವೆ. ನಾನು ಕೇಳುತಕ್ಕದ್ದು ಒಬ್ಬ ರಾಜ್ಯದ ಮುಖ್ಯಮಂತ್ರಿಗಳನ್ನು ಒಳಪಡಿಸಿ ಎದ್ದಿರತಕ್ಕಂಥ ಒಂದು ಪುಕಾರು, ಒಂದು ಹಗರಣವೆಂದೂ ಹೇಳುವುದಿಲ್ಲ, ಅವರನ್ನು ಗೌರವಿಸಿಯೇ ಮಾತನಾಡುತ್ತೇನೆ.

ಈ ವಿಷಯದಲ್ಲಿ ನಾವು ವಿಚಾರಣೆಗೆ ಯಾರಿಗೆ ಒಪ್ಪಿಸಲಿಕ್ಕಾಗುತ್ತದೆ ಎಂಬುದನ್ನು ತಾವೇ ಹೇಳಬೇಕು. ನಾವು ಈ ಬಗ್ಗೆ ವಿಧಾನಸೌಧ ಪೋಲೀಸ್ ಸ್ಟೇಷನ್‌ಗೆ ಹೇಳೋಣವೇ? ಅಥವಾ ಬಳ್ಳಾರಿ ಎಸ್ಪಿಗೆ ಹೇಳೋಣವೇ? ಈಗ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬಳ್ಳಾರಿಗೆ ಹೋದರೆ, ಎಸ್ಪಿ ಬೆಳಿಗ್ಗೆ ಎದ್ದು 8 ಗಂಟೆಗೆ Guard of Honour ಕೊಟ್ಟು, ಅಲ್ಲಿ ನಿಂತುಕೊಂಡು Salute ಹೊಡೆಯಬೇಕು. ಮಾನ್ಯ ಮಾಧುಸ್ವಾಮಿಯವರೆ, ಅವನು Guard of Honour ಕೊಟ್ಟು, Salute ಹೊಡೆದು, enquiry ಮಾಡಲಿಕ್ಕಾಗುತ್ತದೆಯೇ? ಹೇಗೆ ಸಾಧ್ಯ? ಯಾರು ಇವರ ಹಂಗಿನಲ್ಲಿ ಇರುವುದಿಲ್ಲವೋ, ಯಾರು ಇವರ ದಾಕ್ಷಿಣ್ಯದಲ್ಲಿ ಇರುವುದಿಲ್ಲವೋ, ಯಾರು ಇವರ ಮುಲಾಜಿನಲ್ಲಿ ಇರುವುದಿಲ್ಲವೋ, ಸ್ವಾತಂತ್ರವಾಗಿ ನ್ಯಾಯವನ್ನು ನ್ಯಾಯವಾಗಿ ಯಾರು ನಿರ್ಣಯಿಸಬಲ್ಲರೋ, ಅಂತಹವರಿಗೆ ಕೊಡಿ ಎಂದು ನಾವು ಹೇಳುತ್ತಿದ್ದೇವೆ. ಒಂದು ಮಾತು ಕೇಳುತ್ತೇನೆ. ನಮ್ಮ ಅರಣ್ಯ ಇಲಾಖೆಯ ಮಂತ್ರಿಗಳಿದ್ದಾರೆ. ಈಗ ನೀವು ಅಧಿಕಾರಕ್ಕೆ ಒಂದು ಆಗಲೇ 4–5 ತಿಂಗಳಾಗುತ್ತಾ ಬಂದಿತು. ಇದುವರೆಗೆ ಅರಣ್ಯ ಇಲಾಖೆಯವರು ಪೋಲೀಸ್‌ನವರ ಸಹಯೋಗದೊಂದಿಗೆ ಎಷ್ಟು ಕೇಸ್‌ಗಳಲ್ಲಿ ಎಷ್ಟು ಎಕರೆ ಜಮೀನಿನಲ್ಲಿ illegal mining ನಡಯುತ್ತಿದೆ ಎಂದು ಪತ್ತೆ ಹಚ್ಚಿದ್ದಾರೆ? ಎಷ್ಟು ಜನರ ಮೇಲೆ ಕೇಸ್ ಹಾಕಿದ್ದಾರೆ? ಎಷ್ಟು ಜನರನ್ನು prosecute ಮಾಡಿದ್ದಾರೆ? ಎಷ್ಟು ಟನ್ ಮೆಟೀರಿಯಲ್ಸ್ ಅನ್ನು seize ಮಾಡಿದ್ದಾರೆ ಎಂಬ ಬಗ್ಗೆ ಏನಾದರೂ ಮಾಹಿತಿ ಇದೆಯೇ? ಬರುತ್ತೇನೆ, ರೈಡ್ ಮಾಡುತ್ತೇನೆ, ಬಲಿ ಹಾಕಿ ಬಿಡುತ್ತೇನೆ, ಸುತ್ತುತ್ತಿದ್ದೇನೆ, ಕನಕಪುರದಲ್ಲಿ ಇದ್ದೇನೆ, ಹೊರಟಿದ್ದೇನೆ, ಬರುತ್ತಿದ್ದೇನೆ, ಎಂದು ಹೇಳಿದರೆ, ಮಾನ್ಯ ಅಧ್ಯಕ್ಷರೆ, ಇದರರ್ಥ ಏನು? ಹೀಗೆ ಆಗಬಾರದು. ಮಾನ್ಯ ಯಡಿಯೂರಪ್ಪನವರೆ, ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ನೀವು

ಅಷ್ಟೊಂದು ವರ್ಷಗಳ ಕಾಲ ಇಲ್ಲಿ ಕೆಲಸ ಮಾಡಿದವರು, ನಾನು ಇಷ್ಟು ಹೇಳಿದರೆ ಸಾಕು, ಉಳಿದಿದ್ದೆಲ್ಲಾ ನಿಮಗೆ ಅರ್ಥವಾಗುತ್ತದೆ. ಬೇರೆಯವರಿಗಾದರೆ ನಾನು ಬಹಳ ಹೇಳಬೇಕಾಗಿತ್ತು. ಆದರೆ ನಾನು ನಿಮಗೆ ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲ. ಏಕೆ ಮಾಡಲಿಲ್ಲ? ಏಕೆ ಹೇಳಲಿಲ್ಲ? See, ನಮ್ಮ ಮಾನ್ಯ ಅರಣ್ಯ ಸಚಿವರಾದ ಚೆನ್ನಿಗಪ್ಪನವರು ಶ್ರೀಮತಿ ಚನ್ನಮ್ಮ ದೇವೇಗೌಡ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟ್‌ವೊಂದನ್ನು ನಡೆಸುತ್ತಿದ್ದಾರೆ. ನಾನು ಮಾನ್ಯ ದೇವೇಗೌಡರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಚನ್ನಮ್ಮ ಮತ್ತು ದೇವೇಗೌಡರು ನಮ್ಮ ತಂದೆ ತಾಯಿಗಳಿಗೆ ಸಮಾನರು. ಅವರ ವಿಷಯದಲ್ಲಿ ಯಾವ ವ್ಯಾಖ್ಯಾನವನ್ನೂ ಸಹ ನಾನು ಈ ಸದನದಲ್ಲಿ ಮಾಡುವುದಿಲ್ಲ. ಅವರು ಪೂಜ್ಯರು. ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಮತ್ತು ಈ ದೇಶದ ಪ್ರಧಾನ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಾವು ಅವರ ಸಹಯೋಗದಲ್ಲಿ ಅವರ ನೆರಳಿನಲ್ಲಿ, ಅವರ ಒಡನಾಟದಲ್ಲಿ ಕೆಲಸ ಮಾಡಿದ್ದೇವೆ. ಈ ಟ್ರಸ್ಟ್ ಯಾವಾಗ ಪ್ರಾರಂಭವಾಯಿತು? ಇದಕ್ಕೆ ಸೆಕ್ಷನ್ 80 (g) ಯಲ್ಲಿ ಯಾವಾಗ exemption ಸಿಕ್ಕಿತು? ಇದರ ಮುಖಾಂತರ ಏನೇನು ಚಟುವಟಿಕೆ ನಡೆಯುತ್ತಿದೆ? ಎಷ್ಟು ಹಣ ಇವರಿಗೆ ಸಂದಾಯವಾಗಿದೆ? ಆ ಹಣ ಕೊಟ್ಟವರು ಯಾರ್‍ಯಾರು? ಆ ಹಣ ಕೊಟ್ಟವರೆಲ್ಲರೂ ಕೂಡ ಅವರ IT returns file ಮಾಡಿದ್ದಾರೆಯೇ? ಅವರದ್ದು PAN card ಇದೆಯೇ ಅಥವಾ ಬೇನಾಮಿ ಕಲೆಕ್ಷನ್ನಾ? ಇದರ ಕಾರ್ಯಸೂಚಿ ಏನು? ಸ್ವಲ್ಪ ದಯಮಾಡಿ, ಮಾನ್ಯ ಯಡಿಯೂರಪ್ಪನವರೆ, ತಾವು Finance Minister ಆಗಿದ್ದೀರಿ, ಬೇಕಾದಷ್ಟು ಹಣ ನಿಮಗೆ ಸಿಗುತ್ತದೆ, ನಾವು ಕೇಳಿದ್ದ ಕೆಲಸಕ್ಕೆಲ್ಲಾ ನೀವು ನಮಗೆ ದುಡ್ಡು ಕೊಡಬಹುದು, ಸ್ವಲ್ಪ ಯೋಚನೆ ಮಾಡಿ. ಇಷ್ಟು ವರ್ಷ ಹೋರಾಟ ಮಾಡಿದ್ದೀರಿ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಊರಿನ ಕಡೆಗೆ ಒಂದು ಗಾದೆ ಇದೆ. ವಾಮನಾಚಾರ್ ಎಂಬ ಒಬ್ಬ ತತ್ವಬದ್ಧ ಮಾಧ್ವ ಬ್ರಾಹ್ಮಣರಿರುತ್ತಾರೆ. ಅವರಿಗೆ ಸಾಯುವ ವಯಸ್ಸಿನಲ್ಲಿ ಮೀನು ತಿನ್ನಬೇಕೆಂದು ಆಸೆಯಾಗುತ್ತದೆ. ಅಲ್ಲಿ ಮೀನು ಜಾಸ್ತಿಯಲ್ಲವೇ?...

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ರಮೇಶ್ ಕುಮಾರ್‌ರವರೆ, ದಯಮಾಡಿ ಒಂದು ನಿಮಿಷ. ತಾವು ಹೇಳಿದ್ದಕ್ಕೆ ನಾನು ಹೇಳುತ್ತೇನೆ. ಸನ್ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಚೆನ್ನಾಗಿ ಸದನಕ್ಕೆ ವಿವರಿಸುತ್ತಿದ್ದಾರೆ. ಅದರಲ್ಲಿ ಚನ್ನಮ್ಮ ದೇವೇಗೌಡರ ಟ್ರಸ್ಟ್ ಬಗ್ಗೆ ಕೂಡ ಅವರು ಮಾತನಾಡಿದರು. ನಾನು ಕೇಳುವುದಿಷ್ಟೇ. ರಾಜೀವ್ ಗಾಂಧಿ, ಇಂದಿರಾ ಗಾಂಧಿಯವರ ಹೆಸರುಗಳಲ್ಲಿ ಎಷ್ಟೋ ಟ್ರಸ್ಟ್‌ಗಳಿವೆ. ಅದರ ಸದಸ್ಯರ್‍ಯಾರು? ಅಲ್ಲಿ ಕೆಲಸ ಮಾಡತಕ್ಕಂಥವರು ಯಾರ್‍ಯಾರು?

ಅದರಲ್ಲಿ ಯಾರ್‍ಯಾರು ಇದ್ದಾರೆ ಎಂಬುದನ್ನು ಸ್ವಲ್ಪ ಅವರು ಹೇಳಬೇಕು. ಟ್ರಸ್ಟ್ ಹೆಸರಿನಲ್ಲಿ ಅದು ಇರಬಹುದು. ಆದರೆ ಅಲ್ಲಿ ಕೆಲಸ ಮಾಡತಕ್ಕಂಥವರು ಯಾರು? ಆ ಟ್ರಸ್ಟ್‌ನಲ್ಲಿ ಯಾರ್‍ಯಾರು ಇದ್ದಾರೆ ಎಂಬುದನ್ನು ಹೇಳಿ. ಇಲ್ಲದಿದ್ದರೆ ತಪ್ಪು ಅರ್ಥ ಬರುತ್ತದೆ. ಅವರೇ ಮಾಡಿಸಿರತಕ್ಕಂಥ ಟ್ರಸ್ಟ್ ಇರಬಹುದು, ಅವರೇ ಅದರಲ್ಲಿ ಇರಬಹುದು ಎನ್ನುವಂತಹ ತಪ್ಪು ಅರ್ಥ ಬರುತ್ತದೆ. ಅದು ಆಗಬಾರದು ಎಂದು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಆಲಂಗೂರು ಆರ್. ಶ್ರೀನಿವಾಸ್ : ...... ಆ ಟ್ರಸ್ಟ್ ಅನ್ನು ಈಗಾಗಲೇ ಸರ್ಕಾರಕ್ಕೆ ವಹಿಸಿದ್ದಾರೆ. ಅದು ಅವರ ಹೆಸರಿನಲ್ಲಿ ಇಲ್ಲ. ಜಿಲ್ಲಾಧಿಕಾರಿಗಳ ಮುಖೇನ ಈಗಾಗಲೇ ಆ ಟ್ರಸ್ಟ್ ಅನ್ನು ಸರ್ಕಾರಕ್ಕೆ ಬರೆದು ಕೊಟ್ಟು ಬಿಟ್ಟಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಶ್ರೀನಿವಾಸ್‌ರವರೆ, ತಾವು ಹೇಳಿದ್ದೂ ಆಗಲಿ. ನಾನು ಎರಡೂ ವಿಷಯವನ್ನು ತೆಗೆದುಕೊಳ್ಳುತ್ತೇನೆ. ಈ ವಾಮನಾಚಾರ್‌ರವರಿಗೆ ಮೀನು ತಿನ್ನುವ ಆಸೆ ಉಂಟಾಗುತ್ತದೆ. ಪಾಪ ! ಬ್ರಾಹ್ಮಣರು, ಅವರು ಎಂದೂ ತಿಂದವರಲ್ಲ. ಎಲ್ಲೋ ಆಸೆ ಹುಟ್ಟಿಬಿಟ್ಟಿದೆ. ಮೀನಿನ ತುಂಡು ಗಂಟಲಲ್ಲಿ ಸಿಕ್ಕಿ ಹಾಕಿಕೊಂಡು ಅವನು ಸತ್ತು ಹೋಗಿ ಬಿಡುತ್ತಾರೆ. ಆಗ ಊರಲ್ಲೆಲ್ಲಾ ವಾಮನಾಚಾರ್‌ರವರು ಮೀನು ತಿಂದು ಸತ್ತರು ಎಂದೇ ಪ್ರಚಾರವಾಗುತ್ತದೆ. ಪಾಪ ! ಇಡೀ ಜೀವನವೆಲ್ಲಾ ಮಡಿಯನ್ನು ಆಚರಣೆ ಮಾಡಿಕೊಂಡಿದ್ದಂತಹ ನಿಷ್ಠಾವಂತ ಬ್ರಾಹ್ಮಣ, ಕಡೇ ಗಳಿಗೆಯಲ್ಲಿ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಇದನ್ನು ಮಾನ್ಯ ಯಡಿಯೂರಪ್ಪನವರಿಗೆ ಅನ್ವಯಿಸಿ ಹೇಳುತ್ತಿದ್ದೀರೋ ಹೇಗೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಮಗಿಬ್ಬರಿಗೂ ಜಗಳ ಮಾಡಿಸಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜಗಳದ ಪ್ರಶ್ನೆ ಅಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇವತ್ತು ನೀವು ಯಾರು ಏನು ಹೇಳಿದರೂ ನಾನು ಕೇಳುವುದಕ್ಕೆ ಹೋಗುವುದಿಲ್ಲ. ನನಗೆ ಮತ್ತು ಅವರಿಗೆ ಸ್ನೇಹ ಚೆನ್ನಾಗಿದೆ. ಮಾನ್ಯ ಯಡಿಯೂರಪ್ಪನವರೆ, ಅತ್ಯಂತ ಪ್ರಭಾವಶಾಲಿ ಹೋರಾಟಗಾರರಾಗಿ ಇಲ್ಲಿ ಕುಳಿತು. ಕ್ಷಣ ಮಾತ್ರದ ಅಧಿಕಾರಕ್ಕೆ ಎಲ್ಲಿಯಾದರೂ ನೀವು ಮೈಮರೆತರೆ,......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಮನಾಚಾರ್ ಸ್ಥಿತಿ ಅವರಿಗೆ ಬರುತ್ತದೆ ಎನ್ನುತ್ತೀರಾ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸಾರ್, ನನಗೆಲ್ಲರೂ ಶತ್ರುಗಳಾಗಿ ಬಿಟ್ಟಿದ್ದಾರೆ. ನಾನು ಒಂದನ್ನು ಹೇಳಿದರೆ ಅವರೊಂದನ್ನು ಹೇಳುತ್ತಾರೆ. ಎಲ್ಲಾ ಕೇಳಿಸಿಕೊಂಡು ದಯವಿಟ್ಟು ತಾವುಗಳೆಲ್ಲಾ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಈಗ ವಾಮನಾಚಾರ್‌ರವರು ಮೀನು ತಿಂದರು ಎಂದು ಹೇಳಿದರು ನಮ್ಮ ಯಮುನಾಚಾರ್ಯರಿದ್ದಾರಲ್ಲಾ, ಯಾರು? ಶ್ರೀಮಾನ್ ರಮೇಶ್ ಕುಮಾರ್‌ರವರು, ಅವರು ಮಾಂಸ ತಿನ್ನದ ದಿನವೇ ಇಲ್ಲ. ಆದ್ದರಿಂದ ಇದರಲ್ಲೇನು, ಬ್ರಾಹ್ಮಣರು, ಅವರು, ಇವರು ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದ ಇದನ್ನು ಬ್ರಾಹ್ಮಣರಿಗೆ ಹೋಲಿಸಿ, ನೀವು ವಾಮನಾಚಾರ್‌ರವರು ತಿಂದರು ಎಂದರೆ, ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ ಬಿಡಿ. ಮೀನು ತಿನ್ನುವುದು, ಮಾಂಸ ತಿನ್ನುವುದು ಈಗ ಎಲ್ಲರೂ ಮಾಡುತ್ತಾರೆ. ಅವರು ಹಿಂದಿನ ಕಾಲದ ಬ್ರಾಹ್ಮಣರು. ಈಗ ಎಲ್ಲರೂ ಒಂದೇ. ಮೀನಿನ ರುಚಿ ಅವರಿಗೆ ಗೊತ್ತು. ಕೋಳಿ ರುಚಿ ಅವರಿಗೆ ಗೊತ್ತು. ಕುರಿ ರುಚಿ ಸೇರಿ ಎಲ್ಲಾ ರುಚಿ ಮಾನ್ಯ ರಮೇಶ್ ಕುಮಾರ್‌ರವರಿಗೆ ಗೊತ್ತಿದೆ ಅವರಿಗೆ ಇದೆಲ್ಲಾ ಗೊತ್ತಿಲ್ಲವೆಂದು ನೀವು ಹೇಳುತ್ತೀರೇನು? ಪ್ರಾಮಾಣಿಕವಾಗಿ ಅವರಿಗೆ ಗೊತ್ತಿದೆ. ಅವರಿಗೆ ಗೊತ್ತಿಲ್ಲದಿರುವುದೇ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಂಗಳೂರಿನಲ್ಲಿ ಐಟಂ ಏನೇನಿದೆ ಎನ್ನುವುದು ಅವರನ್ನು ಬಿಟ್ಟರೆ ಇನ್ಯಾರಿಗೂ ಗೊತ್ತಿಲ್ಲ. ನಿಜ ಅಧ್ಯಕ್ಷರೆ, ಯಾ್ಯಾವ ಹೋಟೆಲ್‌ನಲ್ಲಿ ಏನೇನು ಐಟಂ ಇದೆ? ಯಾವ ಯಾವ ಐಟಂ ಚೆನ್ನಾಗಿರುತ್ತದೆ? ಎಲ್ಲಾ ಅವರಿಗೆ ಗೊತ್ತು. ಅಕಸ್ಮಾತ್ ಟೇಸ್ಟ್ ಮಾಡುವುದಕ್ಕೆ ಯಾರನ್ನಾದರೂ experts ನೇಮಕ ಮಾಡಬೇಕೆಂದರೆ, that can only be Mr. Ramesh Kumar.

ಶ್ರೀ ವಾಟಾಳ್ ನಾಗರಾಜ್ : ಕರೆಕ್ಟ್, ಅದರಲ್ಲೇನೂ ಬೇರೆ ಮಾತಿಲ್ಲ. ಅವರು ಬ್ರಾಹ್ಮಣರು, ತಿನ್ನುವುದಿಲ್ಲ ಎಂದು ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ. ಅಂಥಾದ್ದೇನಿಲ್ಲ. ಈ ವಿಚಾರದಲ್ಲಿ ಬ್ರಾಹ್ಮಣಿಕೆ ಪ್ರಶ್ನೆ ತರಬೇಡಿ. ಬಹುಶಃ ಈ ಮಾಂಸಾಹಾರ ತಿನ್ನುವವರು ಯಾರೆಲ್ಲಾ ಇದ್ದಾರೋ, ಅವರೆಲ್ಲರಿಗೂ ಇವರು ಮಹಾ ಪಂಡಿತರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಅಪ್ಪಿ ತಪ್ಪಿ ಯಾವತ್ತೂ ಕೂಡ ನಾನು ಬ್ರಾಹ್ಮಣ ಎಂದು ಹೇಳಿಕೊಂಡಿಲ್ಲ. ಇವರು ಸುಮ್ಮನೆ ಪಟ್ಟ ಕಟ್ಟುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿದ್ದಾಗ, ಆಗ್ಗಿಂದಾಗ್ಗೆ ನಮಗೆ ಸ್ವಲ್ಪ ಆತಿಥ್ಯ ಸಿಕ್ಕುತ್ತಿತ್ತು. ಅವರು ಇಳಿದಿದ್ದೇ ಇಳಿದಿದ್ದು, ನಾವು ಒಂಥರ ಅನಾಥರಾಗಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಈಗಲೂ ಏನಾದರೂ ಮಾಡೋಣ.

ಶ್ರೀ ಸಿ.ಸಿ. ಪಾಟೀಲ್ : ಎಲ್ಲೆಲ್ಲಿ ಏನೇನು ಚೆನ್ನಾಗಿದೆ ಎಂದು ಮಾನ್ಯ ರಮೇಶ್ ಕುಮಾರ್‌ರವರಿಗೆ ಹೊರತಾಗಿ ಬೇರೆ ಯಾರಿಗೂ ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಯಾವ್ಯಾವ ಹೋಟೆಲ್‌ನಲ್ಲಿ ಏನೇನು ಚೆನ್ನಾಗಿದೆಯೋ ಅದನ್ನೆಲ್ಲಾ ತರಿಸಿ ಒಮ್ಮೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಊಟ ಹಾಕಿಸಿದರೆ ಒಳ್ಳೆಯದು.

ಶ್ರೀ ಹೆಚ್. ಆಂಜನೇಯ : ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ರಮೇಶ್ ಕುಮಾರ್‌ರವರು ಸೇವಿಸುವ ಆಹಾರ ಪದಾರ್ಥಗಳ ಬಗ್ಗೆ ಹೇಳಿದರು. ಇವರು ಮಾಂಸಾಹಾರದ ಎಲ್ಲಾ ರುಚಿ ನೋಡಿದ್ದಾರೆಂದು ಅವರು ಹೇಳುತ್ತಿದ್ದಾರೆ. ಆದರೆ ಇವರೇಕೆ ಇನ್ನೂ ರುಚಿ ನೋಡಿಲ್ಲ? ಅವರು ಮೀನು ರುಚಿ ನೋಡುವುದನ್ನು ಇವರು ಯಾವಾಗ ನೋಡಿದರು?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಲ್ಲರೂ ಎಲ್ಲವನ್ನೂ ತಿಂದು ಬಿಡಲಿಕ್ಕೆ ಆಗುತ್ತದೆಯೇ? ಅದಕ್ಕೂ ಕೇಳಿಕೊಂಡು ಬಂದಿರಬೇಕು. ಅವರ ಕರ್ಮ ಹಾಗಿದೆ, ನಾವೇನೂ ಮಾಡಲಿಕ್ಕಾಗುವುದಿಲ್ಲ. ಸಾರ್, ಕ್ಷಮಿಸಿ......

ಶ್ರೀ ವಾಟಾಳ್ ನಾಗರಾಜ್ : ಇವರು ಬಿಸಿಲು ಮಾರಮ್ಮನಿಂದ ಉಪದೇಶ ಪಡೆದಿರತಕ್ಕಂಥವರು. ಆದ್ದರಿಂದ ಇವರು ಮಾಂಸ ತಿನ್ನುವುದರಲ್ಲಿ ಬಹಳ ಗಟ್ಟಿಗರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಮಾನ್ಯ ಯಡಿಯೂರಪ್ಪನವರಿಗೆ ಇಷ್ಟೇ ಹೇಳಲಿಕ್ಕೆ ಪ್ರಯತ್ನ ಪಡುತ್ತಿದ್ದೆ. ತಾವು ತಮ್ಮ ಜೀವನವೆಲ್ಲಾ ವ್ರತ ಆಚರಣೆ ಮಾಡಿದ್ದೀರಿ. ನೀವು ಈಗ ವ್ರತ ಭಂಗ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಿಮ್ಮ composition, ನಿಮ್ಮ ಮತ್ತು ಮಾನ್ಯ ಕುಮಾರಸ್ವಾಮಿಯವರ, ಜೆ.ಡಿ(ಎಸ್) & BJP combination, ಚೆನ್ನಾಗಿಲ್ಲ. ಸಾರ್, Chemistry ಯೊಳಗೆ Liquids ನಲ್ಲಿ visible Liquids and Invisible Liquids ಎಂದು ಬರುತ್ತದೆ. ಎರಡು liquids ಒಂದರಲ್ಲಿ ಒಂದು ಬೆರೆತಾಗ, ಅವು ಎರಡೂ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಬಿಡುತ್ತವೆ, mix ಆಗಿ ಬಿಡುತ್ತವೆ. ಅವುಗಳನ್ನು ಬೇರ್ಪಡಿಸಲಿಕ್ಕಾಗುವುದಿಲ್ಲ. ಹಾಲು ಮತ್ತು ನೀರು ಸೇರಿಸಿದಾಗ, ನೀವು ಮೀಟರ್ ಗೀಟರ್ ಇಟ್ಟುಕೊಂಡು ಅದನ್ನೆಲ್ಲಾ circus ಮಾಡಿ ಹೊರತೆಗೆಯುವ ಪ್ರಶ್ನೆ ಬೇರೆ, ಆದರೆ ಸ್ವಾಭಾವಿಕವಾಗಿ ಹಾಲು ಮತ್ತು ನೀರು ಬೇರ್ಪಡಿಸುವುದು ಬಹಳ ಕಷ್ಟ. ಎಣ್ಣೆಯೊಳಗೆ ನೀರು ಹಾಕಿದರೆ ಅದು ಮಿಕ್ಸ್ ಆಗುವುದೇ ಇಲ್ಲ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಬೀಳುವುದಕ್ಕೂ ಕೂಡ immiscible liquids

ಮಿಕ್ಸ್ ಆಗಿದ್ದೇ ಕಾರಣ. ನೀವು ಬಿದ್ದು ಹೋಗುವುದಕ್ಕೂ immiscible liquids mix ಆಗುವುದೇ ಕಾರಣ. ನೀವು ಮಿಶ್ರಣ ಆಗುವುದಕ್ಕಾಗುವುದಿಲ್ಲ. ಹೋದ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜನ ಯಾರಿಗೆ ಆದೇಶ ಕೊಟ್ಟರು? ನಿಮಗೂ ಕೊಡಲಿಲ್ಲ, ನಮಗೂ ಕೊಡಲಿಲ್ಲ, ಅವರಿಗೂ ಕೊಡಲಿಲ್ಲ. ನಿಮಗೇ ಅತ್ಯಂತ (ಬಿಜೆಪಿ) ಹೆಚ್ಚು ಸೀಟುಗಳು ಬಂದವು, ನೀವೇ ಮುಖ್ಯಮಂತ್ರಿಗಳಾಗಿ ಈ ಸರ್ಕಾರವನ್ನು ಮಾಡಬೇಕಾಗಿತ್ತು, ನಾವೇನೋ ಒಂದು ಪ್ಲಾನ್ ಮಾಡಿ ನಿಮಗೆ ತಪ್ಪಿಸಿದ್ದೆವು, ಆಮೇಲೆ ಒಟ್ಟಿಗೆ ಬಂದಿದ್ದಿರಿ, ನ್ಯಾಯವಾಗಿ ಅನ್ಯಾಯವಾಗಿರುವುದು ನಿಮಗೆ, ನಿಮಗೆ ಸೀಟ್‌ಗೆ, ನಿಮ್ಮ ಪ್ರಪೋರ್ಷನ್‌ಗೆ ಹೆಚ್ಚು ಅಧಿಕಾರಿ ನಿಮಗೆ ಬರಬೇಕಾಗಿತ್ತು ಅಷ್ಟು ಬಂದಿಲ್ಲ, ಫುಲ್ ಬರಬೇಕಾಗಿದ್ದವರಿಗೆ ಮುಕ್ಕಾಲು ಬಂದಿದೆ ಕಾಲು ಬರ ಬೇಕಾದವರಿಗೆ ಫುಲ್ ಬಂದುಬಿಟ್ಟಿದೆ. ಇದು ಒಳಗಡೆ ವರ್ಕ್ ಆಗುತ್ತಲೇ ಇದೆ, ಈ ಸತ್ಯ ಒಳಗಡೆ ವರ್ಕ್ ಆಗುತ್ತಲೇ ಇದೆ, ನೀವು ಎಷ್ಟು ಬುದ್ಧಿವಂತಿಕೆ ಮಾಡಿ ಪ್ಯಾಚ್ ಅಪ್ ಮಾಡಲು ಟ್ರೈ ಮಾಡಿದರೂ ಕೂಡ ಅದು ಒಳಗಡೆಯಿಂದ ಶಬ್ಧ ಮಾಡೇ ಮಾಡುತ್ತದೆ. ಈ ಎಲ್ಲಾ ಕಾರಣಗಳಿಂದ, ನಾನು ವಯಸ್ಸಿನಲ್ಲಿ ಮುಖ್ಯಮಂತ್ರಿಗಳಿಗಿಂತ ಸ್ವಲ್ಪ ದೊಡ್ಡವನಾದ್ದರಿಂದ, ಒಂದು ಮಾತನ್ನು ಅಡ್ವೈಸ್ ಎಂದು ಹೇಳುತ್ತೇನೆ. ಈ ರಾಜ್ಯದಲ್ಲಿ ಬಹಳ ಜನ ಮುಖ್ಯಮಂತ್ರಿಗಳಾಗಬೇಕೆಂದು ಆಸೆ ಪಟ್ಟರು, ಪ್ರಯತ್ನ ಪಟ್ಟರು: ಆಗಲೇ ಇಲ್ಲ. ಕೆಲವರಿಗೆ ಅನಿರೀಕ್ಷಿತವಾಗಿ ಅವಕಾಶಗಳು ಬಂದವು ನೀವು ಪ್ರಯತ್ನಪಟ್ಟರೋ ಇಲ್ಲವೊ ನನಗೆ ಗೊತ್ತಿಲ್ಲ. ನೀವು ಇವತ್ತು ಈ ಸ್ಥಾನದಲ್ಲಿ ಕುಳಿತ್ತಿದ್ದೀರಿ; 20 ವರ್ಷವಿರುವುದಕ್ಕಾಗುತ್ತಾ? 50 ವರ್ಷ ಇರುವುದಕಾಗುತ್ತಾ? ಆಗುವುದಿಲ್ಲ, ಎಷ್ಟು ವರ್ಷ ಇರುತ್ತೀರೆಂಬುದು ಮುಖ್ಯವಲ್ಲ; ಇದ್ದವೇಳೆಗೆ ಹೇಗೆ ನಡೆದುಕೊಂಡರು ಎನ್ನುವುದು ಮುಖ್ಯ. ನೀವು ಈ ಸನ್ನಿವೇಶದಲ್ಲಿ, ಏನಪ್ಪ ಹೀಗೆಲ್ಲಾ ಅನ್ನಿಸಿಕೊಂಡು, ನಿಮ್ಮನ್ನು ಮಂತ್ರಿ ಮಂಡಲದಲ್ಲಿಟ್ಟುಕೊಂಡು, ನಿಮ್ಮ ಸರ್ಕಾರವನ್ನು ನಾನು ಹೊತ್ತಿಕೊಂಡು, ನೀವು ಬಾಯಿಗೆ ಬಂದಂತೆ ಬೀದಿನಲ್ಲಿ ಮಾತನಾಡುತ್ತಿದ್ದರೆ ನಾನು ಮುಖ್ಯಮಂತ್ರಿಗಿರಿಯನ್ನು ಹೊತ್ತಿಕೊಂಡು ಇರಲಾ? ಏನೋ ಪುಣ್ಯಾತ್ಮರ ಹೊಟ್ಟೆಯಲ್ಲಿ ಹುಟ್ಟಿದ್ದೇನಪ್ಪ, ನಮ್ಮ ತಂದೆಗೆ ಒಂದು ಅವಕಾಶ ಸಿಕ್ಕಿತು ಈ ರಾಜ್ಯವಾಳಿದರು, ಈ ದೇಶವಾಳಿದರು, ನಾನು ಮರ್ಯಾದಸ್ಥರ ಕುಟುಂಬದಲ್ಲಿದ್ದೇನೆ, ನನಗೆ ಏಕೆ ಬೇಕು ನಿಮ್ಮ ಹಂಗು ಎಂದು ಹೇಳುವುದಕ್ಕಾಗುವುದಿಲ್ಲವಾ? ಯೋಚನೆ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸದಸ್ಯರು ಹೇಳುವುದನ್ನು ಪೂರ್ತಿ ಕೇಳಿದರೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸರ್, ನನ್ನ ಕೆಲಸವನ್ನು ನಾನು ಮಾಡುತ್ತಿದ್ದೇನೆ, ನಾನು ಇನ್ನೇನು ಮಾಡಲಿ? ನಾನು ಅಲ್ಲಿ ಹೋಗಿ ಅವರಿಗೆಲ್ಲಾ ಹೇಳಿಕೊಡಲೇ; ಏನ್ ಸರ್, ಮಾಧುಸ್ವಾಮಿ ಯವರೇ ಹೀಗೆ ಹೇಳಿದರೆ ಹೇಗೆ? ನನಗೆ ಸ್ವಲ್ಪ ಕಷ್ಟವಿದೆ ನಾನು ಅಲೆಯನ್ಸ್‌ನಲ್ಲಿರುವವನು, ನಾನು ಹೇಳುವುದಕ್ಕಾಗುವುದಿಲ್ಲ, ನೀವು ಹೇಳಿ ಎಂದು ರಾತ್ರಿಯೆಲ್ಲಾ ನನಗೆ ಟ್ಯೂಷನ್ ಕೊಟ್ಟು ಈಗ ನಾನು ಹೇಳುವುದಕ್ಕೆ ಹೋದರೆ ಈ ರೀತಿ ಹೇಳಿದರೆ ಏನ್ ಸರ್ ಮಾಡುವುದು?

ಶ್ರೀ ಜೆ.ಸಿ. ಮಾಧುಸ್ವಾಮಿ : ಇವರು ಇನ್ನೊಂದು ಹೇಳಿಲ್ಲ, ಜನಾರ್ಧನರೆಡ್ಡಿ, ರಾಜಶೇಖರ ರೆಡ್ಡಿಯವರು ಸೇರಿಕೊಂಡು ಏಕೆ ಕನ್ಸೋರ್ಟಿಯಂ ಮಾಡಿದ್ದಾರೆಂಬುದನ್ನು ಸ್ವಲ್ಪ ಹೇಳುಬಿಟ್ಟು ಮುಂದಕ್ಕೆ ಬಂದುಬಿಟ್ಟಿದ್ದರೆ, ನಾನು ಹೇಳಿದ್ದು ಸತ್ಯವೆಂದು ನಾನು ಒಪ್ಪಿಕೊಂಡುಬಿಡುತ್ತೇನೆ. ಅಲ್ಲಿ ಮೈನ್ಸ್ ಮಾಡುವಾಗ ಅವರಿಬ್ಬರೂ ಏಕೆ ಜಂಟಿಯಾಗಿದ್ದಾರೆಂಬುದನ್ನು ಒಂದು ಚೂರು ಆಚೆಗೆ ತೆಗೆಯಬೇಕಲ್ಲಾ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸರ್, ನನಗೆ ಈ ವಿಷಯದಲ್ಲಿ ಏನೂ ಮುಚ್ಚುಮರೆಯಿಲ್ಲ. ಆಂಧ್ರದಲ್ಲೂ ರೂಪಾಯಿಗೆ ನೂರೇ ಪೈಸಾ, ಈ ಊರಿನಲ್ಲೂ ರೂಪಾಯಿಗೆ ನೂರೇ ಪೈಸಾ; ಆಗಲೇ ಅವರೇ ಹೇಳಿದ ಸಿದ್ಧಾಂತದ ಪ್ರಕಾರ ಯಾರ್‍ಯಾರಿಗೆ ಎಲ್ಲೆಲ್ಲಿ ಅವಕಾಶವಿದ್ದರೆ ನಮ್ಮನ್ನು ಕೇಳುತ್ತಿದ್ದರು, ಈಗ ನನ್ನ ಮುಂದೆ ಕೈಚಾಚಿದರೆ ಏನಾಗುತ್ತದೇ ಏಟು ಬೀಳುತ್ತದೆ, ನನ್ನ ಹತ್ತಿರ ಏನಿದೆ? ಅವಕಾಶವಿದ್ದಾಗ ಕೈಚಾಚಿದರೆ ಏನಾದರೂ ಪ್ರಯೋಜನವಾಗುತ್ತಿತ್ತು, ಅವರು ಅವರ ಅನುಕೂಲಕ್ಕೆ ಮಾಡಿಕೊಂಡಿರಬಹುದು ಅಲ್ಲಿನ ವಿರೋಧಪಕ್ಷದವರು ಅದನ್ನು ಪ್ರಸ್ತಾಪ ಮಾಡಲಿ. ನಾನು ಟ್ರಸ್ಟ್ ವಿಚಾರ ಮಾತನಾಡಿದಾಗ ಗೆಳೆಯರಾದ ಬಾಲಕೃಷ್ಣರವರು ರಾಜೀವ್‌ಗಾಂಧಿ ಟ್ರಸ್ಟ್‌ನಲ್ಲಿ ಯಾರಿದ್ದಾರೆಂದು ಹೇಳಿ ಎಂದು ಹೇಳಿದರು, ನಿಜ ಆ ಎಲ್ಲಾ ಟ್ರಸ್ಟ್‌ಗಳಿದ್ದಾವೆ, ಅದರಲ್ಲಿ ಯಾರ್‍ಯಾರು ಇದ್ದಾರೋ ಗೊತ್ತಿಲ್ಲ; ನನ್ನ ಹತ್ತಿರ ಮಾಹಿತಿ ಇಲ್ಲ, ಒಂದು ವೇಳೆ ಆ ಮಾಹಿತಿ ಇದ್ದರೆ, ಅಲ್ಲಿ ಏನಾದರೂ ಈ ತರಹದ ಸಂಶಯಗಳಿದ್ದರೆ ಬರೆದು ತಿಳಿದು ಕೊಳ್ಳತಕ್ಕಂಥ ಸ್ವಾತಂತ್ರ್ಯ ನಿಮಗಿದೆ. ಮಹಾರಾಷ್ಟ್ರದಲ್ಲಿ ನಮ್ಮ ಅಂತುಳೆಯವರು ಇಂದಿರಾ ಪ್ರತಿಷ್ಠಾನ ಎಂದು ಒಂದು ಟ್ರಸ್ಟ್ ಅನ್ನು ಸ್ಥಾಪನೆ ಮಾಡಿದರು. ಆ ಟ್ರಸ್ಟ್ ಮುಖಾಂತರ ಅವರು ಕೆಲವು ಡೊನೇಷನ್ಸ್ ರಿಸೀವ್ ಮಾಡಿದರು. ಆಮೇಲೆ ಕೆಲವು ಅಬ್ಜಕ್ಷನ್ಸ್ ಬಂದವು, ಅಲ್ಲಿಯ ಅಡಿಟರ್‌ಜನರಲ್ ಒಂದು ರಿಪೋರ್ಟ್ ಕೊಟ್ಟರು ಅಲ್ಲಿರತಕ್ಕಂಥ ಹಣ ಯಾವ ಸಂಸ್ಥೆಗಳಿಂದ ಬಂದಿದೆ ಎಂದು ಹೇಳುತ್ತಾರೆ, ಆ ಸಂಸ್ಥೆಗಳು ಆಸ್ತಿತ್ವದಲ್ಲಿಲ್ಲವೆಂದು ಹೇಳುತ್ತಾರೆ. ಆಮೇಲೆ ಕೋರ್ಟ್‌ಗೆ ಹೋಗಿ ಎನ್‌ಕ್ವೈರಿಯೆಲ್ಲಾ ಆಯಿತು, ಕೊನೆಗೆ ಅಂತುಳೆಯವರು

ಅಧಿಕಾರವನ್ನೇ ಬಿಡಬೇಕಾಗಿ ಬಂತು. ಈ ಟ್ರಸ್ಟ್‌ಗಳಿವೆಯಲ್ಲಾ ಅವುಗಳದ್ದೆಲ್ಲಾ ಡಬಲ್ ಎಡ್ಜ್‌ಡ್ ವ್ಯಾಪಾರ ಹಾಗೂ ಆಗಬಹುದು ಹೀಗೂ ಆಗಬಹುದು, ನಾನು ಇನ್ನು ಹೆಚ್ಚು ವಿಷಯಗಳನ್ನು ಹೇಳುವಂತಹದ್ದಿಲ್ಲ, ನಮ್ಮ ಪ್ರೆಸ್ ಸ್ನೇಹಿತರು ನಿನ್ನೆ ಬರೆಯುವಾಗ ಕಾಂಗ್ರೆಸ್‌ನವರ ಹತ್ತಿರ ಏನು ಸರಕಿರಲಿಲ್ಲ, ಸುಮ್ಮನೆ ಆವಾಂತರ ಮಾಡಿದರು ಎಂದು ಹೇಳಿದ್ದಾರೆ. ಅವರಿಗೆ ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ ಬಾಣಬಿಟ್ಟಿರುವವರು ಬಿಜೆಪಿಯವರು, ಬತ್ತಳಿಕೆ ಇರುವುದು ಅವರಹತ್ತಿರ, ಗುರಿ ಇಟ್ಟಿರುವುದು ಕುಮಾರಸ್ವಾಮಿಗಳತ್ತ, ನಾವು ಮುಖ ಪ್ರೇಕ್ಷಕರು, ನಮ್ಮ ಹತ್ತಿರ ಸರಕು ಗಳೇನಾದರೂ ತಂದುಕೊಟ್ಟರೆ ಹೇಳುತ್ತೇವಪ್ಪ, ನೀವು ತಂದುಕೊಂಡುವುದಿಲ್ಲ, ಅವರು (ಬಿಜೆಪಿ) ಹೇಳುವುದಿಲ್ಲ, ಆದರೂ ಈ ಸದನದಲ್ಲಿ ನಾವಿರುವುದರಿಂದ, ಈ ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಹಲವು ಹತ್ತು ವರ್ಷಗಳ ಕಾಲ ನಿರ್ವಹಿಸಿದ ಒಂದು ಪಕ್ಷವಾಗಿ, ಯಾವುದೋ ಜನರ ಸಿಟ್ಟಿಗೆ ಒಳಗಾಗಿ ಅಧಿಕಾರವನ್ನು ಕಳೆದುಕೊಂಡು ಅಧಿಕೃತ ವಿರೋಧಪಕ್ಷವಾಗಿ ಇಲ್ಲಿ ಕುಳಿತಿರುವುದರಿಂದ, ಇಂತಹ ವಿಚಾರ ಸಾರ್ವಜನಿಕ ಚರ್ಚೆಯ ವಸ್ತು ವಾದಾಗ, ನಮ್ಮ ಕರ್ತವ್ಯವನ್ನು ನಾವು ನಿರ್ವಹಣೆ ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನು ಚರ್ಚೆಗೆ ತಂದಿದ್ದೇವೆ, ಇದರ ವಿವಿಧ ಆಯಾಮಗಳನ್ನು ಗಮನಕ್ಕೆ ತಂದಿದ್ದೇವೆ. ಕಡೆಯದಾಗಿ ನಾನು ಮುಖ್ಯಮಂತ್ರಿಗಳಲ್ಲಿ ಒಂದನ್ನು ಕೇಳಿಕೊಳ್ಳುತ್ತೇನೆ, ಮೈನಿಂಗ್, ಫಾರೆಸ್ಟ್ ಇದೆಲ್ಲಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ, ಏಕಪಕ್ಷೀಯವಾಗಿ ನೀವೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಡೆಯ ಪಕ್ಷ ಈ ಸದನದಿಂದ ನಿಮ್ಮ ನೇತೃತ್ವದಲ್ಲಿ ಎಲ್ಲಾ ಪಕ್ಷಗಳ ನಿಯೋಗ ಭಾರತ ಸರ್ಕಾರಕ್ಕೆ ತೆಗೆದುಕೊಂಡು ಹೋಗಿ, ಅವರ ಒಂದು ಅಧಿಕಾರಿಗಳ ತಂಡ ಕೊಡಲೇ ಇಲ್ಲಿಗೆ ಬಂದು, ಯಾರ್‍ಯಾರು ಅಕ್ರಮವಾಗಿ ಮೈನಿಂಗ್ ಮಾಡುತ್ತಿದ್ದಾರೆ ಎಂಬ ಬಗ್ಗೆ ಕ್ಷಿಪ್ರವಾದ ಒಂದು ಅಪರೇಷನ್ ಇಮ್ಮೀಡಿಯೇಟ್ ಆಗಿ ಅವರು ಇವರು ಕಂಬೈಂಡ್ ಆಗಿ, ಎಷ್ಟು ಎಕರೆ ಇದೆ, ಯಾರ್‍ಯಾರಿದ್ದಾರೆ, ಎಷ್ಟು ಲಾಸ್ ಆಗಿದೆ, ಎಷ್ಟು ಲಾಸ್ ಆಗಬಹುದು, ಏನು ಮಾಡಬೇಕೆಂದು ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಕೆಲಸ ಮಾಡಬೇಕು. ನಮ್ಮ ಡಿಮಾಂಡ್, ಸಿಬಿಐ ಎಂಕ್ವೈರಿ ಆಗಬೇಕೆಂಬುದನ್ನು ನಾನು ಸಡಿಲಗೊಳಿಸುತ್ತಿಲ್ಲ, ನಮ್ಮ ಪಕ್ಷದಲ್ಲಿ ಎದ್ದು ಅವರು ಅದನ್ನು ಹೇಳಿದರು, ಇದನ್ನು ಹೇಳಿದರೆನ್ನುವ ಪ್ರಶ್ನೆ ಬೇಡ, ಸಿಬಿಐ ಎನ್‌ಕ್ವೈರಿಗೆ ನಿಮ್ಮದೇ ಆಲೋಚನೆ ಮಾಡುತ್ತಿರುವುದರಿಂದ, ನಮ್ಮ ಡಿಮಾಂಡ್ ಸಿಬಿಐ ಬಗ್ಗೆ ಸ್ಥಿರಾ, ಆದರೆ ಸರ್ವ ಪಕ್ಷಗಳ ನಿಯೋಗ ಹೋಗುವುದರ ಬಗ್ಗೆ ಯೋಚನೆ ಮಾಡಿದರೆ, ಅವರು ಕೇಂದ್ರ ಸರ್ಕಾರದವರು ಏಕೋ ನಿದ್ರೆ ಮಾಡುತ್ತಿದ್ದಾರೆ, ಅವರು ಓಡಿ ಬರಲಿ, ಅಗಲಾದರೂ

ಗೊತ್ತಾಗುತ್ತದೆ. ಇಷ್ಟನ್ನು ತಮ್ಮ ಗಮನಕ್ಕೆ ತಂದು, ರಾಜ್ಯದ ಹಿತ ಮುಖ್ಯ ಅಧಿಕಾರವೇನೂ ಶಾಶ್ವತವಾಗುವುದಿಲ್ಲ, ನೀವು ಧೈರ್ಯ ತೆಗೆದುಕೊಳ್ಳುತ್ತಿರೆನ್ನುವ ವಿಶ್ವಾಸ ನನಗಿದೆ, ತಾವು (ಮುಖ್ಯಮಂತ್ರಿಗಳು) ಇರಲಿಲ್ಲ, ನನ್ನ ಇಡೀ ಭಾಷಣವನ್ನು ತೆಗೆಸಿ ನೋಡಿ, ಅತ್ಯಂತ ಜಾಗ್ರತೆಯಿಂದ ಒಂದೊಂದು ಪದವನ್ನು ಬಳಸಿದ್ದೇನೆ, ವಿನಾಕಾರಣ ಇನ್ನೊಬ್ಬರ ತೇಜೋವಧೆ ಮಾಡುವುದು ಬಹಳ ಸುಲಭದ ಕೆಲಸ, ನೋವು ಬೇರೊಬ್ಬರಿಗೆ ಮಾಡುವ ಮೊದಲು ನಾವು ನೋವನ್ನು ಅರಿತುಕೊಳ್ಳಬೇಕು, ನೀವು ಇವತ್ತು ಅನಿವಾರ್ಯವಾಗಿ ಈ ಸ್ಥಾನದಲ್ಲಿರುವುದರಿಂದ ನಾವು ಹೇಳತಕ್ಕಂಥ ಮಾತುಗಳನ್ನು ನಿಮಗೆ ಅನ್ವಯಿಸಿ ನಾವು ಹೇಳಬೇಕಾಗುತ್ತದೆ, ವ್ಯಕ್ತಿಗತ ನಮಗಾಗಲಿ, ನಮ್ಮ ಪಕ್ಷಕ್ಕಾಗಲಿ ಏನೂ ಇಲ್ಲ, ಒಂದು ವೇಳೆ ನಮ್ಮ ದೊಂದು ಏನಾದರೂ ಇದ್ದರೆ, ಒಂದು ನಾಲ್ಕೈದು ಜನ ಕಾಂಗ್ರೆಸ್‌ನವರು ಇರುತ್ತಾರೆಂದು ತಿಳಿದುಕೊಳ್ಳೋಣ, ಅವರ ಮೇಲೆ ಏನು ಕ್ರಮ ಜರುಗಿಸಬೇಕೋ ಅದನ್ನು ನಮ್ಮ ಪಕ್ಷದಿಂದ ಜರುಗಿಸುತ್ತೇವೆ, ಏನು ನಾಲ್ಕೈದು ಜನ ಇಲ್ಲೀಗಲ್ ಮೈನಿಂಗ್ ಮಾಡುವವರಿದ್ದರೆ ಕಾಂಗ್ರೆಸ್ ಪಕ್ಷವಿರುತ್ತದೆಯೋ ಈ ಪಕ್ಷಕ್ಕೆ ನೂರು ವರ್ಷದ ಇತಿಹಾಸವಿದೆ, ಪಕ್ಷ ಕ್ಲೀನ್ ಮಾಡಿಕೊಳ್ಳುತ್ತೇವೆ, ಯಾರೋ ಕೆಲವರು ಮೇಲೆ ಈ ಸಂಸ್ಥೆ ಆಧರಿಸಿರುವುದಿಲ್ಲ, ಅಥವಾ ಇಡೀ ಕಾಂಗ್ರೆಸ್ ಪಕ್ಷ ಇಲ್ಲಿಗಲ್ ಮೈನಿಂಗ್‌ಗೆ ಹೋಗಿರುವುದಿಲ್ಲ, ಇದು ನಿಮಗೂ ಅನ್ವಯಿಸುತ್ತದೆ, ನಮಗೂ ಅನ್ವಯಿಸುತ್ತದೆ. ನಮ್ಮ ಎಲ್ಲರ ಪ್ರಯತ್ನ ಒಟ್ಟಾಗಿ, ಯಾರು ರಾಜಕಾರಣವನ್ನು ಕಲುಷಿತಗೊಳಿಸಿದ್ದಾರೆ, ಶ್ರೀಮಂತರ ಪರವಾದ ಕ್ಷೇತ್ರವೆಂದು ದಿನೇ ದಿನೇ ಕಳೆದಂತೆ ಏನು ಒಂದು ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆ, ಕಾರ್ಪೊರೇಷನ್ ಚುನಾವಣೆಗೆ ನಿಲ್ಲಬೇಕಾದರೆ ಕೋಟಿ ರೂಪಾಯಿ ಇರಬೇಕು, ಜಿಲ್ಲಾ ಪಂಚಾಯಿತಿ ಚುನಾವಣೆಗೆ ನಿಲ್ಲಬೇಕಾದರೆ 50 ಲಕ್ಷ ರೂಪಾಯಿ ಇರಬೇಕು, ಅಸೆಂಬ್ಲಿಗೆ ನಿಲ್ಲಬೇಕಾದರೆ ಎರಡು ಕೋಡಿ ರೂಪಾಯಿಗಳಿರಬೇಕೆನ್ನುವ ವಾತಾವರಣವನ್ನು ತಂದಿದ್ದಾರೆ, ಯಾರು ಈ ಘನವಾದ

(ಈ ಸಂದರ್ಭದಲ್ಲಿ ಮಾನ್ಯ ಆರಗಜ್ಞಾನೇಂದ್ರರವರು ಅಧ್ಯಕ್ಷರ ಪೀಠದಲ್ಲಿದ್ದರು)

ವಿಧಾನಸಭೆಗೆ ಬರಿಗಾಲಿನಲ್ಲಿ ಬಂದಂತಹವರು, ಅತ್ಯಂತ ಕಡುಬಡವರು, ಪ್ರಾಮಾಣಿಕರು ಬಂದು, ಈ ಸಭೆಯಲ್ಲಿ ಪಾಲ್ಗೊಂಡು ತಮ್ಮದೇ ಆದ ದಾಖಲೆಗಳನ್ನು ಸೃಷ್ಟಿ ಮಾಡಿ ಹೋಗಿದ್ದಾರೆ, ಅಂತಹ ದಿನಗಳ ಮರಳಿ ಬರುವುದಕ್ಕೆ ಯಾರು ಬೇರೆ ಬೇರೆ ರೂಪಗಳಲಿ, ಸ್ವರೂಪಗಳಲ್ಲಿ, ರಾಕ್ಷಸರು ಬೇರೆ ಬೇರೆ ಪಕ್ಷಗಳನ್ನು ಉಪಯೋಗಿಸಿಕೊಂಡು ಬರುತ್ತಾರೆ, ಅವರನ್ನು ನಿಗ್ರಹಿಸುವುದಕ್ಕೆ ಇದು ನಾಂದಿಯಾಗಲಿ, ನೀವು (ಮುಖ್ಯಮಂತ್ರಿಗಳು) ಧೈರ್ಯ

ಮಾಡಬೇಕು, ಅಧಿಕಾರ ಶಾಶ್ವತವೆಂದು ನೋಡಬಾರದೆಂದು ಹೇಳಿ ನನಗೆ ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಛೇರ್ಮನರೇ, ಹಲವಾರು ಗೌರವಾನ್ವಿತ ಸದಸ್ಯರು ಗೌರವಾನ್ವಿತ ಮುಖ್ಯ ಮಂತ್ರಿಗಳು, ಗೌರವಾನ್ವಿತ ಅರಣ್ಯ ಸಚಿವರ ಮೇಲೆ ಶ್ರೀ ಜನಾರ್ಧನ ರೆಡ್ಡಿಯವರು ಮಾಡಿದ ಗಂಭೀರ ಆಪಾದನೆ ಬಗ್ಗೆ ತಮ್ಮದೇ ಆದ ಧಾಟಿಯಲ್ಲಿ ಹಲವಾರು ವಿಚಾರಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ ವಿರೋಧ ಪಕ್ಷದಿಂದ ಹಲವಾರು ಆಪಾದನೆಗಳು ಮಾನ್ಯ ಮುಖ್ಯ ಮಂತ್ರಿಗಳ ಮೇಲೆ, ಸರ್ಕಾರದ ಮೇಲೆ ಮತ್ತು ಮಂತ್ರಿಗಳ ಮೇಲೆ ಆಗಿದ್ದಾವೆ. ಆದರೆ ಆಡಳಿತ ಪಕ್ಷದ ಕೋಯಲಿಷನ್ ಸರ್ಕಾರದ ಒಬ್ಬ ಗೌರವಾನ್ವಿತ ಸದಸ್ಯ ಇಂತಹ ಗಂಭೀರವಾದ ಆಪಾದನೆ ತನ್ನದೇ ಮುಖ್ಯ ಮಂತ್ರಿ ಮೇಲೆ ತನ್ನದೇ ಸಚಿವರ ಮೇಲೆ ಮಾಡಿರುವಂಥದ್ದು ನಾನು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕೇಳಿಲ್ಲ. ಇವತ್ತು ಕಾಂಗ್ರೆಸ್ ಪಕ್ಷದವರು ನಾವು ಎದ್ದು ನಿಂತು ಮಾನ್ಯ ಮುಖ್ಯ ಮಂತ್ರಿಗಳು, ಅರಣ್ಯ ಸಚಿವರು ಈ ಪ್ರಕಾರ ಹಣ ಪಡೆದಿದ್ದಾರೆಂದು ನಾವೇನೂ ಹೇಳುವುದಕ್ಕೆ ಹೋಗಲಿಲ್ಲ. ಆದರೆ ಇಂತಹ ಒಂದು ಗಂಭೀರವಾದ ವಿಚಾರ ಒಬ್ಬ ಜವಾಬ್ದಾರಿ ವ್ಯಕ್ತಿಯಿಂದ ಪ್ರಸ್ತಾಪವಾದಾಗ ಮತ್ತು ಇಡೀ ದೇಶದಲ್ಲಿ ಟೆಲಿವಿಷನ್ ಛಾನಲ್‌ಗಳ ಮುಖಾಂತರ ಪತ್ರಿಕೆಗಳ ಮುಖಾಂತರ ಅದರ ಬಗ್ಗೆ ಚರ್ಚೆ ನಡೆದಾಗ ಒಂದು ಜವಾಬ್ದಾರಿ ರಾಜಕೀಯ ಪಕ್ಷದ ಕರ್ತವ್ಯ ಅದರ ಬಗ್ಗೆ ಬೆಳಕು ಚೆಲ್ಲಲಿಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಇದರ ಬಗ್ಗೆ ನ್ಯಾಯಬದ್ಧವಾದ ತನಿಖೆ ಆಗಬೇಕೆಂದು ಹೇಳಬೇಕಾಗುತ್ತದೆ. ಸತ್ಯ ಹೊರಗೆ ಬರಬೇಕೆಂದು ಒತ್ತಾಯ ಮಾಡಬೇಕಾಗುತ್ತದೆ. ಮುಖ್ಯವಾಗಿ ಇವತ್ತು ಮೈನಿಂಗ್ ಇಂಡಸ್ಟ್ರೀ ಬಗ್ಗೆ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಒಂದು ದೃಷ್ಟಿಯಿಂದ ಮೈನಿಂಗ್, ಟ್ರಾನ್ಸ್‌ಪೋರ್ಟ್, ಹೋಮ್ ಡಿಪಾರ್ಟ್‌ಮೆಂಟ್ ಮೇಲೆ ಚರ್ಚೆ ಆಗಿದೆ. ನಾನು ಸಂಕ್ಷಿಪ್ತದಲ್ಲಿ ಹೇಳಬೇಕಾದರೆ, ಮೈನಿಂಗ್ ಸಹ ಬಹಳ ದೊಡ್ಡ ಇಂಡಸ್ಟ್ರೀ. ಈ ಇಂಡಸ್ಟ್ರೀ ಕೇವಲ ಕರ್ನಾಟಕದಲ್ಲಿ ಅಲ್ಲ, ಇಡೀ ವಿಶ್ವದಲ್ಲಿ ಈ ಇಂಡಸ್ಟ್ರೀ ಇದೆ. ನಮ್ಮ ಸರ್ಕಾರದ ಹಟ್ಟಿ ಗೋಲ್ಡ್ ಮೈನ್ಸ್ ಸಹ ಮೈನಿಂಗ್ ಮಾಡುತ್ತದೆ. ಬಂಗಾರ ತಯಾರು ಮಾಡುತ್ತೇವೆ. ಸೌತ್ ಆಫ್ರಿಕಾದಲ್ಲಿ ಡೈಮೆಂಟ್ ಮೈನ್ಸ್ ಇವೆ, ಆಸ್ಟ್ರೇಲಿಯಾದಲ್ಲಿ ಗೋಲ್ಡ್ ಮೈನ್ಸ್ ಇವೆ; ಐರನ್ ಓರ್ ಮೈನ್ಸ್ ಇವೆ. ಡೈಮಂಡ್ ಮೈನ್ಸ್ ಇವೆ. ಹಾಗಾಗಿ ಮೈನಿಮಗ್ ಮಾಡುವುದೇನೂ ಪಾಪ ಅಲ್ಲ. ಈ ಇಂಡಸ್ಟ್ರೀಯಲ್ಲಿ ಏನು ಎಂಪ್ಲಾಯಮೆಂಟ್ ಜನರೇಟ್ ಆಗಿದೆ, ಅಷ್ಟು

+ಸನ್ಮಾನ್ಯ ಸದಸ್ಯರಿಂದ ಪರಿಷ್ಕೃತಗೊಂಡಿದೆ

ಇಂಪ್ಲಾಯ್‌ಮೆಂಟ್ ಬಹುತೇಕ ಬೇರೆ ಇಂಡಸ್ಟ್ರೀಗಳಲ್ಲಿ ಇಲ್ಲ. ಅಷ್ಟು ಉದ್ಯೋಗವಕಾಶಗಳನ್ನು ಈ ಕೈಗಾರಿಕೆ ಕೊಟ್ಟಿದೆ. ಹಾಗಾಗಿ ನಾನು ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳೋ ಯಾರೋ ಸ್ಟೇಟ್‌ಮೆಂಟ್ ಕೊಟ್ಟಾಗ ನೋಡಿದೆ. ಮೈನಿಂಗ್ ಇಂಡಸ್ಟ್ರೀಯನ್ನು ನಿಲ್ಲಿಸುತ್ತೇವೆಂದು ಹೇಳಿದರು. ಹಾಗೆ ಮಾಡುವುದಕ್ಕಾಗುವುದಿಲ್ಲ. ಮೈನಿಂಗ್ ಇಂಡಸ್ಟ್ರೀ ನಿಲ್ಲಿಸಿದರೆ ಕೈಗಾರಿಕೆ ಹೇಗೆ ನಡೆಯುತ್ತದೆ? ಸ್ಟೀಲ್ ಇಂಡಸ್ಟ್ರೀ ಹೇಗೆ ನಡೆಯುತ್ತವೆ? ಆ ಜನಗಳಿಗೆ ಮನೆಗೆ ಕಳುಹಿಸುತ್ತೀರಾ? ನಿವೃತ್ತಿಗೆ ಒಳಪಡಿಸುತ್ತೀರಾ? ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ. ರೆಗ್ಯುಲೇಟ್ ಮಾಡಬೇಕಾಗುತ್ತದೆ. ಮೈನಿಂಗ್ ಇಂಡಸ್ಟ್ರೀಯಲ್ಲಿ ಏನು ಇಲ್ಲೀಗಲ್ ಆ್ಯಕ್ಟಿವಿಟೀಸ್ ನಿಮ್ಮ ಕಾಲದಲ್ಲಿ ಪ್ರಾರಂಭವಾಗಿದೆ ಎಂಬ ಬೇಜವಾಬ್ದಾರಿ ಮಾತು ನಾವು ಹೇಳುವುದಕ್ಕೆ ತಯಾರಿಲ್ಲ. ಮೈನಿಂಗ್ ಇಂಡಸ್ಟ್ರೀಯಲ್ಲಿ, ಇಲ್ಲೀಗಲ್ ಮೈನಿಂಗ್ ಎನ್‌ಕ್ರೋಚ್‌ಮೆಂಟ್ಸ್ ಬಹಳ ವರ್ಷಗಳಿಂದ ನಡೆಯುತ್ತಿವೆ. ಒಂದು ದೃಷ್ಟಿಯಿಂದ ಸಕ್ಸಸೀವ್ ಗವರ್ನಮೆಂಟ್ಸ್ ಇದು ಕಂಟ್ರೋಲ್ ಮಾಡಲಿಕ್ಕೆ ವಿಫಲವಾಗಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಅರ್ಥ ನೀವೇ ಮಾಡಿದಿರಿ ಎಂದು ಹೇಳುವುದು ಅಲ್ಲ. ಇವತ್ತು ಈ ವಿಷಯ ನಿಮ್ಮ ಮುಂದೆ ಬಂದಾಗ ನಿಮ್ಮ ಜವಾಬ್ದಾರಿ ಏನೆಂದರೆ ಈ ಇಂಡಸ್ಟ್ರೀಗಳಲ್ಲಿ ಮಾನಿಟರಿಂಗ್ ಸ್ಟ್ರೀಕ್ಟ್ ಮಾಡಬೇಕು. ಎಲ್ಲೆಲ್ಲಿ ಇಲ್ಲೀಗಲ್ ಕ್ವಾರೀಯಿಂಗ್ ನಡೆಯುತ್ತಿದೆ, ತಕ್ಷಣ ಸ್ಟಾಪ್ ಆಗಬೇಕು. ಅದು ಗವರ್ನಮೆಂಟ್ ಫಾರೆಸ್ಟ್ ಲ್ಯಾಂಡ್ ಇರಬಹುದು, ಪ್ರೈವೇಟ್ ಲ್ಯಾಂಡ್ಸ್ ಇರಬಹುದು, ಪ್ರೈವೇಟ್ ಲ್ಯಾಂಡ್ಸ್ ಇರಬಹುದು, ಪರ್ಮಿಟ್ ಕೊಡುವುದೂ ರೆಗ್ಯೂಲೇಟ್ ಆಗಬೇಕು. ಅದು ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್ ಇರಬಹುದು. ಅದು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇರಬಹುದು, ಬೆಂಗಳೂರಿನಿಂದ ಆದೇಶ ಹೋದ ನಂತರ ಪರ್ಮಿಟ್ ಕೊಡುವ ವ್ಯವಸ್ಥೆ ಆಗಬಾರದು. ಅದು ಪಾರದರ್ಶಕವಾಗಿ, ನ್ಯಾಯಬದ್ಧವಾಗಿ ಒಂದು ಪ್ರೋಸೀಜರ್‌ನಿಂದ ಆಗ ಬೇಕಾಗಿದೆ. ಇವತ್ತು ಚೈನಾದಿಂದ ಒಲಂಪಿಕ್ಸ್ ಆಗುತ್ತಿದೆ ಹಾಗಾಗಿ ಬಹಳಷ್ಟು ಪೈಪ್ಸ್ ಎಕ್ಸ್ ಪೋರ್ಟ್ ಆಗುತ್ತಿದೆ. ಕೇಂದ್ರ ಸರ್ಕಾರದವರು ವಿಚಾರ ಮಾಡುತ್ತಿದ್ದಾರೆ. ಯಾವ ರೀತಿಯಿಂದ ನಾವು ಎಕ್ಸ್‌ಪೋರ್ಟ್ ಮೇಲೆ ಕಂಟ್ರೋಲ್ ಇಡಬೇಕು, ಎಷ್ಟು ಎಕ್ಸ್‌ಪೋರ್ಟ್ ಹೋಗಬೇಕೆಂದು ವಿಚಾರ ಮಾಡುತ್ತಿದ್ದಾರೆ. ಏಕೆಂದರೆ ನಾಳೆ ಅಲ್ಟಿಮೇಟ್‌ಲಿ ಲೋ ಕ್ವಾಲಿಟಿ ಐರನ್ ಓರ್ ಹೋದ ನಂತರ ಅದು ಅವರಿಗೆ ಉಪಯೋಗ ಆಗಬಹುದು. ಆದರೆ ನಮ್ಮ ಕೈಗಾರಿಕೆಗೆ ನಾಳೆ ಬೇಕಾಗುವ ಐರನ್ ಓರ್ ಸಹ ನಾವು ಸ್ಟೋರ್ ಮಾಡಬೇಕಾಗುತ್ತದೆ. ರಿಸೋರ್ಸಸ್ ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಈ ಇಂಡಸ್ಟ್ರೀಯಿಂದ ಕೇಂದ್ರ ಸರ್ಕಾರಕ್ಕೆ ಎಕ್ಸ್‌ಪೋರ್ಟ್ ರೆವಿನ್ಯೂ ಬರುತ್ತಿದೆ.

ರಾಜ್ಯ ಸರ್ಕಾರಕ್ಕೆ ರಾಯಲ್ಟಿ ಟ್ಯಾಕ್ಸ್ ಬರುತ್ತಿದೆ. ಎಂಪ್ಲಾಯ್‌ಮೆಂಟ್ ಜನರೇಟ್ ಆಗುತ್ತಿದೆ. ಹಲವಾರು ಕೈಗಾರಿಕೆಗಳು ಇವತ್ತು ಇದರ ಮೇಲೆ ನಿಂತಿವೆ. ಇದು ಒಂದು ಕಡೆ ಇದ್ದಾಗ, ನಾನು ಈಗಾಗಲೇ ಹೇಳಿದ ಹಾಗೆ, ಎಲ್ಲೆಲ್ಲಿ ತಪ್ಪು ಕೆಲಸ ನಡೆಯುತ್ತಿದೆ, ಎಲ್ಲೆಲ್ಲಿ ಇಲ್ಲೀಗಲ್ ಕೆಲಸ ನಡೆಯುತ್ತಿದೆ, ಅದನ್ನು ನಿಲ್ಲಿಸಲಿಕ್ಕೆ ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡಬೇಕಾಗುತ್ತದೆ. ಅದು ಹಗುರವಾಗಿ ನಿಮ್ಮ ಕಾಲದಲ್ಲಿ ಹೀಗಾಯಿತು, ಅವರ ಕಾಲದಲ್ಲಿ ಹಾಗಾಯಿತು ಎಂದು ಹೇಳಿದರೆ ಅದು ಉತ್ತರವಾಗುವುದಿಲ್ಲ. ಅದು ಜಾರಿಕೊಂಡ ಹಾಗಾಗುತ್ತದೆ. ಒಂದು ವಿಷಯ ಹೇಳಿ ನಾನು ಮುಖ್ಯವಾದ ವಿಷಯಕ್ಕೆ ಬರುತ್ತೇನೆ. ರೋಡ್ ಕಂಡೀಷನ್ಸ್ ಹೇಗಿದೆ ಎಂದು ಹೇಳುತ್ತೇನೆ. ಹುಬ್ಬಳ್ಳಿ, ಅಂಕೋಲ ಎಡಿಬಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ತಮ್ಮ ಪೂಜ್ಯ ತಂದೆಯವರು ಲೋಕೋಪಯೋಗಿ ಸಚಿವರಿದ್ದಾಗ, ಆಗಿದ್ದಂತಹ ರಸ್ತೆ. one of the best roads in the Country. ಇವತ್ತು ಪರಿಸ್ಥಿತಿ ಏನಾಗಿದೆ? ಉದಾಸಿಯವರೇ ತಾವು ಕಾರಿನಲ್ಲಿ ಹೋಗುತ್ತಿರುವಾಗ ನೋಡಿರಬಹುದು. ಇದೆಲ್ಲಾ ನಮ್ಮ ಮೈನಿಂಗ್ ಇಂಡಸ್ಟೀ ಉಪಕಾರ. ಟ್ರಕ್ ತಂದು ಅಲ್ಲಿ ಲೋಡ್ ಮಾಡುತ್ತಾರೆ. ಅವರಿಗೆ ಕೇಳುವವರು ಯಾರು ಇಲ್ಲ. ರೋಡ್ ಕಂಡಿಷನ್ಸ್ ಹೀಗಾಗಿದೆ. ಹಾಗಾಗಿ ನಾನು ಹಲವಾರು ಬಾರಿ ಮಾನ್ಯ ಧರ್ಮ್‌ಸಿಂಗ್‌ರವರ ಸರ್ಕಾರ ಇದ್ದಾಗಲೂ ಕೂಡ ಸಲಹೆ ಕೊಟ್ಟಿದ್ದೇನೆ. ಓವರ್ ಲೋಡಿಂಗ್ ಬಂದ್ ಮಾಡಿ. ಇವರ ಕಡೆಯಿಂದ ರೋಡ್ ಸೆಸ್ ಕಲೆಕ್ಟ್ ಮಾಡಿ. ಸರ್ಕಾರ ಪ್ರತಿ ವರ್ಷ ಬಜೆಟ್‌ನಲ್ಲಿ ಹಣ ಕೊಟ್ಟು ರಸ್ತೆ ರಿಪೇರಿ ಮಾಡಲಿಕ್ಕೆ ಅಷ್ಟೊಂದು ಹಣ ಸರ್ಕಾರದ ಬಳಿ ಇಲ್ಲ. ಇವರ ಮೇಲೆ ರೋಡ್ ಸೆಸ್ ಹಾಕಿ ಹಣ ಕಲೆಕ್ಟ್ ಮಾಡಿ. ನೀವು ಕೊಪ್ಪಳ ಬಳ್ಳಾರಿಯಿಂದ ಕಾರವಾರದ ತನಕ ಬಂದು ನೋಡಿ, ಅಳ್ನಾವರ ರಾಮನಗರ ರಸ್ತೆಯಲ್ಲಿ ಗಾಡಿಗಳು ಓಡಾಡುವ ಹಾಗಿಲ್ಲ. ನಡೆದುಕೊಂಡು ಹೋಗುವುದಕ್ಕೆ ಕೂಡ ಆಗುವುದಿಲ್ಲ. ಕಾರವಾರ, ಆಳ್ನಾವರ್ ಮತ್ತು ರಾಮನಗರ, ಈ ರಸ್ತೆಗಳ ಪರಿಸ್ಥಿತಿ ಏನು? ತಾವು K.R.D.C.L. ಮುಖಾಂತರ ಟೋಲ್ ರೋಡ್ ಮಾಡಬೇಕೆಂದು ಟೆಂಡರ್ ಮಾಡುತ್ತಿದ್ದೀರಿ; ಟೋಲ್ ರೋಡ್ ತಾವು ಮಾಡಬಹುದು, ಒಳ್ಳೆಯ ರಸ್ತೆ ತಾವು ಮಾಡಬಹುದು, ಪುನಃ ಅದೇ ಕತೆ. ಹಾಗಾಗಿ ಇದರ ಬಗ್ಗೆ ಸ್ಟ್ರಿಕ್ಟ್ ಮಾನಿಟರಿಂಗ್ ಆಗಬೇಕಾಗುತ್ತದೆ, ಸರ್ಕಾರಕ್ಕೆ ಇದರಿಂದ ರೆವಿನ್ಯೂ ಜನರೇಟ್ ಆಗಬೇಕಾಗುತ್ತದೆ, ಜಿಲ್ಲಾ ವ್ಯಾಪ್ತಿಯಲ್ಲಿ, ಯಾವ ವ್ಯಾಪ್ತಿಯಲ್ಲಿ ರಸ್ತೆ ಇದೆ, ಅಲ್ಲಿಯೇ ತಾವು ಒಂದು ಅಕೌಂಟ್ ಓಪನ್ ಮಾಡಿ, ತಾವು ರೋಡ್ ಟ್ಯಾಕ್ಸ್ ವಸೂಲು ಮಾಡಿ, ಈ ರೋಡ್‌ಗಳ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಿ, ಈ ವಿಷಯಕ್ಕೆ ನಾನು ಬರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ದೇವಿ ಆಶೀರ್ವಾದ

ಇತ್ತು ತಾವು ಮುಖ್ಯ ಮಂತ್ರಿಗಳಾಧಿರಿ, ಸಂತೋಷ. ಯುವಕರಿದ್ದೀರಿ, ಇನ್ನೂ 25, 30–40 ವರ್ಷ ತಾವು ರಾಜಕೀಯ ಮಾಡಬೇಕು, ಒಂದು ಮಾತು ಕೇಳುತ್ತೇನೆ ನಿಮಗೆ, ಪ್ರತಿಯೊಬ್ಬರಿಗೂ ಸ್ವಾಭಿಮಾನವಿರುತ್ತದೆ. ನಿಮಗೂ ಸ್ವಾಭಿಮಾನ ಇದೆ, ನಮಗೂ ಸ್ವಾಭಿಮಾನ ಇದೆ. ಸ್ವಾಭಿಮಾನಕ್ಕೆ ಚ್ಯುತಿ ಬಂದಾಗ ನನ್ನ ದೃಷ್ಟಿಯಲ್ಲಿ ಅಧಿಕಾರ ದೊಡ್ಡದಲ್ಲ ವಿಚಾರ ಮಾಡಿ. ಮಾನ್ಯ ಧರ್ಮ್‌ಸಿಂಗ್‌ರವರು, ಖರ್ಗೆಯವರು ಅಥವಾ ನಾವು, ಅಥವಾ ರೆಡ್ಡಿಯವರು ಇಲ್ಲಿ ಕೂತು ನಿಮ್ಮ ಮೇಲೆ ಆಪಾದನೆ ಮಾಡಿದರೆ ವಿರೋಧ ಪಕ್ಷದವರು ಏನೋ ಹೇಳುತ್ತಿದ್ದಾರೆಂದು ಹೇಳಬಹುದು. ಸತ್ಯ ಇದ್ದರೆ ತಾವು ಅಗ್ರೀ ಮಾಡಬಹುದು, ನಿಮ್ಮ ಪಾರ್ಟಿಯ ಒಬ್ಬ ಜವಾಬ್ದಾರಿಯುತ ವ್ಯಕ್ತಿ ನಿಮ್ಮ ಮೇಲೆ ಆಪಾದನೆ ಮಾಡಿದಾಗ, ತಾವು ಡಿಫರ್ಮೇಷನ್ ಕೇಸ್ ಹಾಕುತ್ತೇವೆಂದು ಹೇಳಿದಿರಿ, ಮತ್ತೊಂದು ಕಡೆ ನನಗೆಲ್ಲಾ ಬ್ಲಾಕ್ ಮೇಲೆ ಮಾಡುತ್ತಿದ್ದಾರೆಂದು ಹೇಳಿದಿರಿ; ಹಾಗಾದರೆ ನಿಮ್ಮ ಕಡೆಯಿಂದ ಕ್ರಮ ಇಲ್ಲವಲ್ಲಾ ಏನು ಭಯ ಅವರಿಗೆ? ನೀವು ನಿಜವಾಗಿಯೂ ಈ ಪಾತ್ರದಲ್ಲಿ ಇಲ್ಲವೆಂದರೆ ಆ ಆರೋಪ ಸುಳ್ಳಿದ್ದರೆ, ನಿಮ್ಮ ಜಾಗದಲ್ಲಿ ಯಾರೇ ಇದ್ದರೂ ಸಹ ಇಷ್ಟರೊಳಗಾಗಿ ಯಾವುದಾದರೂ ಕ್ರಮ ತೆಗೆದುಕೊಳ್ಳುತ್ತಿದ್ದರು. ವಿಚಾರ ಮಾಡಿ. ನಾನು ಮೊನ್ನೆ ಕೂಡ ಹೇಳಿದೆ. ತಮ್ಮ ರೆಕಮೆಂಡೇಷನ್ ಮೇಲೆ, ಟೂರಿಸಮ್ ಮಿನಿಸ್ಟರ್ ಟೂರಿಸಮ್ ಮಿನಿಸ್ಟರ್ ಆಗಿದ್ದಾರೆ. ಅವರು ಬಿಜೆಪಿ ಪಕ್ಷದವರಿರಬಹುದು. ಅವರನ್ನು ಯಡಿಯೂರಪ್ಪನವರ ರೆಕಮೆಂಡೇಷನ್ ಮೇಲೆ ಗವರ್ನರ್ ಮಂತ್ರಿಯನ್ನಾಗಿ ಮಾಡಿಲ್ಲ.

ಈಗ ಅವರು ಪ್ರೆಸ್ ಕಾನ್‌ಫರೆನ್ಸ್ ನಡೆದಾಗ ಅವರು ಅಲ್ಲಿ ಇರುತ್ತಾರೆ, ಹಗಲು ದರೋಡೆ ಎಂದು ಅಪವಾದ ಆಗುತ್ತದೆ. ನಿಮ್ಮ ಮೇಲೆ ಮತ್ತು ಅರಣ್ಯ ಸಚಿವರ ಮೇಲೆ, ಅಲ್ಲಿ ಒಬ್ಬ ಎಂಪಿ ನಿಮ್ಮ ಕೊಯಿಲೀಶನ್‌ನ ಪಕ್ಷದ ಎಂ.ಪಿ. ಇರುತ್ತಾರೆ. ಇವೊತ್ತು ಆ ಶಾಸಕಾಂಗ ಪಕ್ಷದ ನಾಯಕರು ನೀವು. ಬರೀ ಜೆ.ಡಿ.ಎಸ್. ಶಾಸಕಾಂಗ ಅಲ್ಲ, ಇಡೀ ನಿಮ್ಮ ರೂಲಿಂಗ್ ಪಾರ್ಟಿ ನಾಯಕರು ನೀವು; ಇವೊತ್ತು ನಮಗೂ ಸಹ ಈ ಸದನದಲ್ಲಿ ತಾವು ನಾಯಕರು. ಅಲಿಗೇಶನ್ ಆದಾಗ ಅವರೂ ಸಹ ಸುಮ್ಮನೆ ಕುಳಿತುಕೊಂಡಿರುತ್ತಾರೆ. ಮೌನವಾಗಿದ್ದಾಗ ನಾವೇನು ತಿಳಿದುಕೊಳ್ಳಬೇಕು? ನಾವು ಸಮ್ಮತಿ ಎಂದು ತಿಳಿದುಕೊಳ್ಳಬೇಕೋ ಅಥವಾ ಜನಾರ್ಧನ ರೆಡ್ಡಿಯವರ ಭಯ ಅವರಿಗೆ ಇದೆ ಎಂದು ತಿಳಿದುಕೊಳ್ಳಬೇಕೋ? ಒಟ್ಟಿನಲ್ಲಿ ನಾವೇನು ತಿಳಿದುಕೊಳ್ಳಬೇಕು ಹೇಳಿ. ತಾವೇ ಹೇಳಿ. ಇವೊತ್ತು ತಾವು ಇಲ್ಲಿ ಇದ್ದೀರಿ. ತಾವು ಇವೊತ್ತು ಇಲ್ಲಿ ಇದ್ದಿದ್ದರೆ ಏನು ಹೇಳುತ್ತಿದ್ದಿರಿ. ನಾನು ಹೇಳಿದ ವಿಚಾರವನ್ನು ಹೇಳುತ್ತಿದ್ದಿರೋ ಏನ್ ಮಂತ್ರಿ ಹೇಳಿದ್ರೆ ನಡೀತದ್ರಿ, ರೂಲಿಂಗ್ ಪಾರ್ಟಿ ಹೇಳಿದ್ದು ನಡೀತದ್ರಿ ಹೀಗೆಲ್ಲಾ ಹೇಳ್ತಾರಿ,

ಸಿಟ್ಟಿನಲ್ಲಿ ಮಾತನಾಡುತ್ತಾರೆ ಎಂದು ಹೇಳುವುದಕ್ಕಾಗುತ್ತದೆಯೇ? ತಾವು ಕುಮಾರಸ್ವಾಮಿ ಎಂದು ಮಾತನಾಡುತ್ತಿಲ್ಲ, ತಾವು ರಾಜ್ಯದ ಮುಖ್ಯಮಂತ್ರಿಯಾಗಿ ಮಾತನಾಡುತ್ತಿದ್ದೀರಿ. It is an insult to the office of Chief Minister of Karnataka State. Accidentally you are sitting in the Chair Mr. Kumaraswamy. ಇವೊತ್ತು ಏನು ಮಸೇಜ್ ಹೋಗಿದೆ, ಈ ದೇಶದ ತುಂಬಾ; ಈ ರಾಜ್ಯಕ್ಕೆ ದೇಶದ ಹಾಗೂ ವಿದೇಶದ ಜನಗಳು ಬರುತ್ತಾರೆ. ಕರ್ನಾಟಕ ಪ್ರೊಗ್ರೆಸೀವ್ ಸ್ಟೇಟ್ ಆಗಿದೆ. ತಾವೂ ಕೂಡ ಸಿಂಗಾಪುರ, ದುಬೈಗೆ ಹೋಗಿಬಂದಿದ್ದೀರಿ. ಏನೋ ಒಂದು ಪ್ರಯತ್ನ ಮಾಡಿ ಇನ್‌ವೆಸ್ಟ್‌ಮೆಂಟ್‌ನ್ನು ತರಬೇಕು ಎಂದು ನೀವು ಪ್ರಯತ್ನ ಮಾಡುತ್ತಿರುವಾಗ ಈ ತರಹದ ಮಸೇಜ್ ಹೋದರೆ, ಈ ಮೇಸೇಜ್‌ಗೆ ತಮ್ಮ ಕಡೆಯಿಂದ ಇದುವರೆಗೂ ಏನೊ ಉತ್ತರವೇ ಹೋಗಲಿಲ್ಲವೆಂದರೆ, ತಾವು ಈ ರೀತಿ ಸೈಲೆನ್ಸ್ ಆಗಿಯೇ ಇದ್ದರೆ that will also result in accepting the charge. ಇದರ ಬಗ್ಗೆ ತಾವು ಗಂಭೀರವಾಗಿಯೇ ವಿಚಾರ ಮಾಡಬೇಕಾಗುತ್ತದೆ. ಈ ಇನ್‌ಸಿಡೆಂಟ್ ನಡೆದು ಈಗಾಗಲೇ ಹದಿನ್ನೈದು ದಿವಸಗಳಾಗುತ್ತಾ ಬಂದಿದೆ. ಬಿಜೆಪಿಯವರು ರೆಡ್ಡಿಯವರು ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದು ಅವರ ಇನ್‌ಟರ್ನಲ್ ಮ್ಯಾಟರ್. ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಒಂದು ಪೊಲಿಟಿಕಲ್ ಪಾರ್ಟಿ ಕೊಯಿಲೇಶನ್ ಸರ್ಕಾರದಲ್ಲಿ ಇದ್ದಾಗ ಆ ಪಕ್ಷದ ಸದಸ್ಯರೊಬ್ಬರು ಮುಖ್ಯಮಂತ್ರಿ ಆದ ತಮ್ಮ ಮೇಲೆ ಆಪಾದನೆ ಮಾಡಿದಾಗ ಏನು ಮಾಡಬೇಕು ಎಂಬುದು ಬಿಜೆಪಿಯ ಇಂಟರ್ನಲ್ ಮ್ಯಾಟರ್ ಆಗುತ್ತದೆ. ಅದನ್ನು ನಾನು ಮಾತನಾಡುವುದಿಲ್ಲ. ಅದನ್ನು ನಾನು ಬಿಟ್ಟುಬಿಡುತ್ತೇನೆ. ಆದರೆ ಇಷ್ಟರೊಳಗೆ ಮಾನ್ಯ ಯಡಿಯೂರಪ್ಪನವರು ಕ್ರಮ ಏನಾದರೂ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಸದಾನಂದಗೌಡರು ಒಂದು ಕಡೆ ಅವರು ಹೇಳುತ್ತಾರೆ "Prakash and Mr. Sadananda Gowda admitted that the episode was a blot on the image of the Government" ನಿಮ್ಮ ಕೊಯಿಲೇಶನ್ ಸರ್ಕಾರದ ರಾಜ್ಯ ಘಟಕದ ಅಧ್ಯಕ್ಷರು ಎಂ.ಪಿ. ಪ್ರಕಾಶ್‌ರವರು ಮತ್ತು ಸದಾನಂದಗೌಡರು ಬಹಳ ವಿನಯದಿಂದ ಅಷ್ಟೇ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ, this is a black on the Government. Blot on the Government ಎಂದು ಹೇಳಿ can you run away? ಸದಾನಂದ ಗೌಡರು ಹೇಳುತ್ತಾರೆ ಇಲ್ಲಾ, ಇಲ್ಲಾ... ಆ ಟ್ರಾನ್ಸ್‌ಫರ್ ವಿಚಾರದಲ್ಲಿ ನಾನು ಬರುವುದಿಲ್ಲ, ನೀವು ಯಾರಿಗೆ ಬೇಕು, ಏನು ಇದೆಯೋ ಅದನ್ನು ನೀವು ಮಾಡಿ. ಆದರೆ ಸದಾನಂದಗೌಡರು ಹೇಳುತ್ತಾರೆ. ನೋ,

ನೋ, ನೋ ಟ್ರಾನ್ಸ್‌ಫರ್ ಮಾಡಬೇಕಾದರೆ ಮುಖ್ಯಮಂತ್ರಿಗಳು ಡಿಸ್ಟ್ರಿಕ್ಟ್ ಮಿನಿಸ್ಟ್ರ್‌ರವರನ್ನು ಕೇಳಬೇಕಾಗಿತ್ತು. Indirectly again defending him. ಬಹಳ ಸ್ಪಷ್ಟವಾಗಿ, ಬಹಳ ಸ್ಪಷ್ಟವಾಗಿ ಉಪ ಮುಖ್ಯಮಂತ್ರಿಗಳವರು ಹಾಗೂ ಸದಾನಂದಗೌಡರು ಹೇಳಬೇಕಾಗಿತ್ತು, we condemn this statement. This is false. ಮತ್ತೆ ಇಲ್ಲಿ ಈ ಸದನಕ್ಕೆ ಬರಬೇಕಾಗಿತ್ತು. ಇದೇನನ್ನೂ ಹೇಳದೇ ಆಪಾದನೆ ಹಾಗೆಯೇ ಇದೆ, ಇವರು ಜನಾರ್ಧನ ರೆಡ್ಡಿ ಬಳ್ಳಾರಿಯಿಂದ ಬರುತ್ತಿದ್ದಾರೆ, ಬಳ್ಳಾರಿಯಿಂದ ಬರುತ್ತಿದ್ದಾರೆ ಎಂದು ಕಾಯುತ್ತಾ ಇದ್ದಾರೆ. ಈಗ ಸುದ್ಧಿ ಇದೆ, ಜನಾರ್ಧನ ರೆಡ್ಡಿ ದೆಹಲಿಗೆ ಹೋದರು. ಕ್ಯಾಸೆಟ್ ತೆಗೆದುಕೊಂಡು ದೆಹಲಿಗೆ ಹೋಗಿದ್ದಾರೆ ಎಂಬ ಸುದ್ದಿ ಬಂದಿದೆ. ಅಲ್ಲ ಇಲ್ಲಿ ಏನು ನಡೆಯುತ್ತಿದೆ. if you do not have faith in the leader, you should have said ವಿಶ್ವಾಸವಿಲ್ಲ. ನಾವು ಸಂಸಾರವನ್ನು ಮಾಡಿದ್ದೇವಲ್ಲಾ, ಧರ್ಮಸಿಂಗ್‌ರವರ ನಾಯಕತ್ವದಲ್ಲಿ ಅವರಿಗೂ ಮತ್ತು ನಮಗೂ ಸಂಸಾರ ನಡೆಯಿತು. ನೀವು ನಮಗೆ ಹೊಂದುವುದಿಲ್ಲ ಆಯಿತು ಬಾಯ್ ಬಾಯ್ ಎಂದು ಹೇಳಿ ಅವರು ಹೋದರು. ನಿಮ್ಮ ಜೊತೆ ಈಗ ಅವರು ಉಳಿಕೆ ಮದುವೆಯನ್ನು ಮಾಡಿಕೊಂಡು ಬಾಳ್ವೆಯನ್ನು ಮಾಡುತ್ತಿದ್ದಾರೆ. ನಿಮಗೂ ಬಿಜೆಪಿಗಾಗಲಿ, ಜೆಡಿಎಸ್‌ಗಾಗಲಿ you can't take the State for a ride. You can't take the people of the State for a ride. ನಿಮ್ಮ ಮನಸ್ಸಿಗೆ ಬಂದಹಾಗೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಹಾಗಾಗಿ ಯಾವ ಆಪಾದನೆ ನಿಮ್ಮ ಸದಸ್ಯರು ಮಾಡಿದ್ದಾನೆ ಅದು ಖರೆ ಇದ್ದರೆ ಅವನಿಗೆ ಬೆಂಬಲವನ್ನು ಕೊಟ್ಟು ಮುಖ್ಯಮಂತ್ರಿಯವರಿಗೆ ಹೇಳಬೇಕು. ಅದರ ಬಗ್ಗೆ ದಯಮಾಡಿ ಸಹಕಾರವನ್ನು ಮಾಡಬೇಕು. ಈ ಜಾಗವನ್ನು ಖಾಲಿ ಮಾಡಿ ಎಂದು ಹೇಳಬೇಕು. ಇಲ್ಲವಾದರೆ ಅವನ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ನೀವು ಏನೂ ಮಾಡುತ್ತಿಲ್ಲ. ಇದರಿಂದಾಗಿ ಏನೋ ಸಂಚು ಇದೆ ಎಂದು ಹೇಳಬೇಕಾಗುತ್ತದೆ. ಮಾನ್ಯ ಉದಾಸಿಯವರೇ ಇದರ ಬಗ್ಗೆ ನಾವು ಹೇಳಬೇಕಾಗುತ್ತದೆಯಲ್ಲವೇ? ಏನಪ್ಪಾ ಸರಿ ಮಾಡಿದ್ದೀರಾ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ನಾವು ಹೇಳುತ್ತಿಲ್ಲ. ನಾವು ಜನಾರ್ಧನರೆಡ್ಡಿಯವರಿಗೆ ಇಂತಿಂತಹ ಆಲಿಗೇಷನ್ ಮಾಡಿ ಎಂದು ಹೇಳಿಲ್ಲ. ಏಕೆ ಮಾಡಿದ್ದೀರಿ ಎಂದು ನಾವು ಕೇಳಬೇಕಾಗಿದೆ. ಆದರೆ ಅವನ ಕಡೆ ಪುರಾವೆ ಇದೆ I admire his guts, I admire his courage. ಹಾಗಾಗಿ ಇವತ್ತು ಮುಖ್ಯಮಂತ್ರಿಗಳೇ ತಾವು ಇದರಿಂದ ಕ್ಲಿಯರ್ ಆಗಿ ಹೊರಗೆ ಬರಬೇಕಾಗಿದೆ. ಇದರಲ್ಲಿ

ತಮ್ಮ ವ್ಯಕ್ತಿಗತ ವಿಚಾರವಿದೆ. ಅದು ಕುಮಾರಸ್ವಾಮಿ ತಮ್ಮದು ಕೆರೀರ್ ಇದೆ. ಇಂತಹ ಆಪಾದನೆಗಳು ಆದಾಗ naturally you have to come clean. ಅದಕ್ಕೊಂದು ಪ್ರಶ್ನೆ ಇದೆ. ಅದಕ್ಕಿಂತ ಇಂಪಾರ್ಟೆಂಟ್ ಯಾವ ಸ್ಥಾನ ಪವಿತ್ರವಾದ ಸ್ಥಾನವನ್ನು ತಾವು ಅಕ್ಯುಪೈ ಮಾಡಿದ್ದೀರಿ ಆ ಸ್ಥಾನದ ಗೌರವವೂ ಸಹ ತಾವು ಕ್ಲೀನಾಗಿ ಬರಬೇಕಾಗುತ್ತದೆ. ಹೇಗೆ ಬರುವುದಕ್ಕೆ ಸಾಧ್ಯ? ಇವತ್ತು ನೀವು ಸ್ಟೇಟ್‌ಮೆಂಟನ್ನು ಕೊಡುತ್ತೀರಿ. ಇವರೆಲ್ಲರೂ ಹೇಳಿರುವುದು ಶುದ್ಧ ಸುಳ್ಳು, ಇವರ ಕಡೆ ಯಾವ ಕಾಗದಪತ್ರಗಳು ಇದೆ, ಲಂಚ ಕೊಡುವಾಗ ಮುಖ್ಯಮಂತ್ರಿಗಳೆ, ಕಾಗದಪತ್ರಗಳನ್ನು ಇಡುತ್ತಾರಾ? ಯಾರೋ ಪಾಪ ನಿಮ್ಮ ಬಿಜೆಪಿ ಅಧ್ಯಕ್ಷರಿಗೆ ರೊಕ್ಕವನ್ನು ತೆಗೆದುಕೊಳ್ಳುವಾಗಯಾರೋ ಫಿಲ್ಮಂ ಮಾಡಿದರು. ಇಲ್ಲವಾದರೆ ಇವತ್ತಿನ ತನಕ ಲಂಚ ತೆಗೆದುಕೊಳ್ಳುವಾಗ ಏನಪ್ಪಾ ಬಂದು ಫೋಟೋ ತೆಗಿ ಎಂದು ಬ್ಯಾಗ್‌ನ್ನು ತೆಗೆದುಕೊಂಡಾಗ ತೆಗೆದುಕೊಳ್ಳುತ್ತಾರಾ? ಇದು ಹೇಳಿ, ಹಾಗಾಗಿ moral is important than proving. ತಾವು ಹೇಳಬಹುದು, ಏನ್ರಿ ದೇಶಪಾಂಡೆಯವರು ಹೇಳಿರುವುದು ನಿಜ. what is the document you have? ಡಾಕ್ಯುಮೆಂಟ್‌ಗಿಂತ ಏನು ಚಾರ್ಜ್ ನಿಮ್ಮ ಮೇಲೆ ಆಗಿದೆ, ಆ ಜಾರ್ಜ್‌ನಿಂದ ನೀವು ಕ್ಲಿಯರ್ ಆಗಬೇಕಾದರೆ you should resign and make a way for somebody else in your party to become Chief Minister. ಸರ್ಕಾರ ಇನ್ನೂ 3 ವರ್ಷ ಮಾಡಿ, ಆದರೆ ತಾವು ಮಾಡಿಲ್ಲವೆಂದರೆ ಕೇವಲ ನಿಮ್ಮ ಕಡೆ ಪುರಾವೆ ಇದ್ದಿಲ್ಲ, ಡಾಕ್ಯುಮೆಂಟ್ಸ್‌ನ್ನು ಪ್ರೂವ್ ಮಾಡಿಲ್ಲ, ಅಂತ ಹೇಳಿದರೆ ಇದು ಸಾಧ್ಯವಿಲ್ಲ. ಇವತ್ತು ಜನಾರ್ಧನರೆಡ್ಡಿ ಸಹ ಹೇಳುತ್ತಾರೆ ನನಗೆ ಸಿಗಲಿಲ್ಲ ಆಪಾದನೆಯನ್ನು ಮಾಡಿದೆ ಅದನ್ನು ಕೂಡ ನಂಬುವುದಕ್ಕಾಗುವುದಿಲ್ಲ. Against him also you should take action ಕುಮಾರಸ್ವಾಮಿ ಮೇಲೆ ಅಲಿಗೇಷನ್ ಮಾಡಿದರೆ ಅಂತ ಯಡಿಯೂರಪ್ಪನವರ ಮೇಲೆ ಮಾಡಿದರೆ ಅದು ಪರಸನಲ್ ವ್ಯವಹಾರವಾಯಿತು. When he has charged a Chief Minister of the State, it is the respect, decorum, honour of the State which is at stake. ಹಾಗಾಗಿ ಸಿಆರ್‌ಪಿಸಿ 199ರ ಪ್ರಕಾರ ಕೇಸ್ ಹಾಕಬೇಕಾಗುತ್ತದೆ. Even if he denies, prosecution has to be done. Because, he has insulted the highest office of the State. ಆಗ ಅವರು ಏನು ಹೇಳುತ್ತಾರೆ. ಅವರು ಹೇಳುತ್ತಾರೆ ಇಲ್ಲ. I stand by my charge. If under world Dons are allowed to continue to threaten mine

owners, then Bellary will soon become another Mumbai. This is why I am insisting that an efficient Police Officer should not have been transferred out of Bellary. This was B.J.P. M.L.C. Janardana Reddy's response when his attention was drawn to party leaders reaction to the alleged bribery case. Mr. Reddy who was in Bellary spoke to Deccan Herald over the phone and said I reiterate that huge sums of money have been collected from the mine owners the Chief Minister H.D. Kumaraswamy and Forest Minister Chennigappa ಎಂದು ಅವರು ಹೇಳುತ್ತಾರೆ. He reiterates. ಯಡಿಯೂರಪ್ಪನವರು with good intentions ಪ್ರಯತ್ನ ಮಾಡಿರುವುದನ್ನು ನೋಡಿದ್ದೇನೆ ಅದರ ಬಗ್ಗೆ ನೀವು ಹೇಳಿದಿರಿ, ಏನು ಇಲ್ಲಾ ಇಲ್ಲಾ, ಜನಾರ್ಧನರೆಡ್ಡಿ ಹಾಗೆ ಹೇಳಿಲ್ಲ. ಅವರು ಹೇಳಿರುವುದು ಯಾರೋ ಒಬ್ಬರು ಸಿಎಂ ಹೆಸರಿನಲ್ಲಿ ಹಣವನ್ನು ಕಲೆಕ್ಟ್ ಮಾಡುತ್ತಿದ್ದಾರೆ; ಪೋಲಿಗಳು ಎಂದು ಸದಾನಂದಗೌಡರು ಹೇಳಿದರು ಆದರೆ ಮುಖ್ಯಮಂತ್ರಿಯವರ ಹೆಸರಿನಲ್ಲಿ ಯಾರೋ ಕಲೆಕ್ಟ್ ಮಾಡಿರುವುದು ತಪ್ಪಲ್ವಾ? ಸುಮ್ಮನೆ you are admitting that somebody is collecting money illegally, in the name of Chief Minister, in the name of Forest Minister. ಅವರ ಮೇಲೆ ಕ್ರಮ ಬೇಡವೇ? ಅಟ್‌ಲಿಸ್ಟ್ ಆ ಕ್ರಮವನ್ನು ಇನ್‌ಷಿಯೇಟ್ ಮಾಡಬೇಕಾಗಿತ್ತು. ನಿಮ್ಮ ಎಸ್‌ಪಿಗೆ ಡಿಜಿಪಿಗೆ ಹೇಳಬೇಕಾಗಿತ್ತು. ಯಾರು ಅವರನ್ನು ಫೈಂಡ್ ಔಟ್ ಮಾಡಿ ಎಂದು ಏನೋ ಫೈಂಡ್ ಔಟ್ ಮಾಡಿದ್ದೀರಾ? ಅದರ ಬಗ್ಗೆ ನಿಮ್ಮ ಕಡೆ ರಿಪೋರ್ಟ್ ಇದೆಯಾ? Home Minister should say. ಯಡಿಯೂರಪ್ಪನವರು ಈ ವಿಚಾರವನ್ನು ಹೇಳಿದಾಗ ನಾವು ಇಮ್ಮಿಡಿಯೆಟ್ಲಿ ಕಾಂಟ್ಯಾಕ್ಟ್ ಮಾಡಿ ಬಳ್ಳಾರಿಯಲ್ಲಿ ಇಂತಿಂತಹ ಜನ ಇವತ್ತು ಮುಖ್ಯಮಂತ್ರಿಯವರ ಹೆಸರಿನಲ್ಲಿ ಹಣ ಕಲೆಕ್ಟ್ ಮಾಡುತ್ತಿದ್ದಾರೆಂದು ಹೇಳಬೇಕಾಗಿತ್ತು. ಆದರೆ ಅದು ಏನೂ ಇಲ್ಲ.

ಶ್ರೀ ಜನಾರ್ಧನ ರೆಡ್ಡಿಯವರು ಏನು ಹೇಳಿದ್ದಾರೆ. ಅದು ಈ ಪ್ರಕಾರ ಹೇಳಿಲ್ಲ, ಈ ಪ್ರಕಾರ ಹೇಳಿದ್ದಾರೆಂದು ನೀವು ಹೇಳಿದರೂ ಸಹ, ಅದರ ಬಗ್ಗೆ ಒಂದು ನ್ಯಾಯಬದ್ಧವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ತಾವು ಅದನ್ನೂ ಮಾಡಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಯವರೇ, ತಾವು ಹೋದ ಕಡೆ ಈ ಪ್ರಕರಣದಲ್ಲಿ ತಾವು

ನೀಡಿರುವ ಸ್ಟೇಟ್‌ಮೆಂಟ್‌ನಲ್ಲಿ ನನಗೂ ಬಹಳ ಕನ್‌ಫ್ಯೂಜನ್ ಆಗಿದೆ. ನಾನು ತಮ್ಮ ಬಗ್ಗೆ ಏನು ವಿಚಾರ ಮಾಡಿದ್ದೆ ಎಂದರೆ, ತಾವು ಸ್ವಲ್ಪ ಅರ್ಗನೈಜರ್, ಸ್ವಲ್ಪ ಫೈಟರ್, ನೀವು ಕ್ರಮ ತೆಗೆದುಕೊಳ್ಳುತ್ತೀರಿ, ಎಂದು ತಿಳಿದುಕೊಂಡಿದ್ದೆ. ತಾವು ಫಸ್ಟ್ defamation ಕೇಸ್ ಹಾಕುತ್ತೇನೆಂದು ಹೇಳಿದೀರಿ. ಅದನ್ನು ನೀವು ಮಾಡಿಲ್ಲ, ಮತ್ತೊಂದು ಕಡೆಗೆ ನೀವು ಹೋದಾಗ, ನನ್ನನ್ನು ಬ್ಲಾಕ್‌ಮೆಲ್ ಮಾಡುತ್ತಿದ್ದಾರೆಂದು ಹೇಳಿದ್ದೀರಿ. Mr. Kumaraswamy said, 'I am also a victim of blackmail. What can I do? We will face the problem." ನೀವು ಮುಖ್ಯಮಂತ್ರಿಗಳಾಗಿ ಇಷ್ಟು ಹತಾಶರಾಗಿ ಏಕೆ ಆಗಬೇಕು? ನೀವು ಹತಾಶರಾಗಿ ಹೇಳಿದ ಮಾತು ಇದು. ಇವತ್ತು ಚಾರ್ಜ್ ಮಾಡಿ 15 ದಿನಸಗಳು ಆಗುತ್ತಾ ಬಂತು. ಇದನ್ನು ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವಂತಹ ಕೌನ್ಸಿಲ್ ಮೆಂಬರ್ ಚಾರ್ಜ್ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇದರ ಬಗ್ಗೆ ಒಂದು ಪಾರದರ್ಶಕವಾದಂಥ ತನಿಖೆಯಾಗಬೇಕಾದರೆ, ಅದನ್ನು ಕರ್ನಾಟಕ ಪೋಲೀಸ್‌ನವರಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ತಮ್ಮ ಆಡಳಿತದಲ್ಲಿದೆ. ತಾವು ಇದನ್ನು ಸಿ.ಬಿ.ಐ.ಗೆ ಕೊಡಬೇಕು, ಮತ್ತೆ ಇಲ್ಲಿ national, international ramifications ಇವೆ. Mining, ultimately, Government of India ಕೆಳಗೆ ಬರುತ್ತದೆ. You are only recommendatory authorities. Export ಬಗ್ಗೆ ಕ್ರಮ ತೆಗೆದುಕೊಳ್ಳುವುದು. ಈ ಎಕ್ಸ್‌ಪೋರ್ಟ್ Provision, Government of India ಕೆಳಗೆ ಬರುತ್ತವೆ. ಫಾರೆಸ್ಟ್ ಆ್ಯಕ್ಟ್ ಅದೂ ಸಹ, ಕೇಂದ್ರ ಸರ್ಕಾರದ ಹತೋಟಿಯಲ್ಲಿ ಇದೆ. ಎಲ್ಲಾ ವಿಚಾರಗಳಿಂದ ಸತ್ಯ ಸಂಗತಿ ಹೊರಗೆ ಬರಬೇಕಾದರೆ, ಗೌವವಾನ್ವಿತ ಮುಖ್ಯಮಂತ್ರಿಯವರು ಅರಣ್ಯ ಸಚಿವರು ರಾಜೀನಾಮೆಯನ್ನು ಕೊಟ್ಟು, ನಿಮ್ಮ ಪಕ್ಷದಲ್ಲೇ ಯಾರನ್ನಾದರೂ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ; ನಿಮಗೆ ಸಿ.ಬಿ.ಐ. ವಿಚಾರಣೆ ಆಗಿ, ತಾವು ಪ್ರಾಮಾಣಿಕರಾಗಿ ಇದ್ದೀರೆಂದು ವರದಿ ಬಂದ ನಂತರ ಪುನಃ ನೀವೇ ಮುಖ್ಯಮಂತ್ರಿ ಆಗಿರಿ. ಯಾರು ಬೇಡವೆಂದು ಹೇಳುತ್ತಾರೆ. ಅದು ಆಗಬೇಕಾಗುತ್ತದೆ, ಇದು ಆಗಿಲ್ಲವೆಂದರೆ history will not pardon you. Black spot ಇದೆಯಲ್ಲಾ, ಇದನ್ನು ತೊಳೆಯುವುದಕ್ಕೆ ಆಗುವುದಿಲ್ಲ. It will permanently remain. ಹಾಗಾಗಿ ಇದು necessary you rise to the occasion. ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ, ಆಪಾದನೆ ಇತ್ತು. ಅವರು ಟೆಲಿಫೋನ್ ಟ್ಯಾಪಿಂಗ್ ಆದಾಗ ರಾಜೀನಾಮೆಯನ್ನು ಕೊಟ್ಟರು. ಮಾನ್ಯ ಹೆಚ್.ಡಿ.

ದೇವೇಗೌಡರು COD enquiry ಮಾಡಿದಾಗ ರಾಜಿನಾಮೆ ಕೊಟ್ಟರು. Minister Kittur ಮೇಲೆ ಆಪಾದನೆ ಬಂತು, ಅವರು ರಾಜೀನಾಮೆಯನ್ನು ಕೊಟ್ಟು ಹೋದರು. Public Accounts Committee Report against Manik Rao Patil ಆದಾಗ ಅವರು ರಾಜೀನಾಮೆಯನ್ನು ಕೊಟ್ಟರು. ಹಾಗಾಗಿ, you come clean. ಮಾನ್ಯ ಚೇರ್ಮನ್‌ರವರೆ, it is necessary that the Hon'ble Chief Minister resigns. ನಾನು ವೇಗ್ ಆಗಿ ಯಾವುದೊ ಆಪಾದನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ I have to be honest. ನಾನು ಇವತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪೇಪರ್‌ನಲ್ಲಿ ನೋಡಿದೆ. ಅದರಲ್ಲಿ ಜನಾರ್ಧನ ರೆಡ್ಡಿಯವರು ಯಾವುದೋ ಒಂದು ಕ್ಯಾಸೆಟ್ ಇದೆ. ಈ ಕ್ಯಾಸೆಟ್ ಅನ್ನು ಜನಾರ್ಧನ ರೆಡ್ಡಿಯವರು ತೆಗೆದುಕೊಂಡು ದೆಹಲಿಗೆ ಹೋಗಿದ್ದಾರೆ. ಆ ಕ್ಯಾಸೆಟ್‌ನಲ್ಲಿ ಫಾರೆಸ್ಟ್ ಮಿನಿಸ್ಟರ್, mine owners ಇದ್ದಾರೆ. ಅಲ್ಲಿ ಹಲವಾರು ವ್ಯವಹಾರ ಎಂದು, ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಫಾರೆಸ್ಟ್ ಮಿನಿಸ್ಟರ್‌ರವರು ಹೇಳಿಕೆಯನ್ನು ಕೊಡಬೇಕಾಗುತ್ತದೆ. ತಾವು ಹೊಸದಾಗಿ ಮಂತ್ರಿಯಾಗಿದ್ದೀರಿ, ಒಂದೆರಡು ವರ್ಷಗಳಾಯಿತು, ಒಳ್ಳೆಯ ಕೆಲಸವನ್ನು ಮಾಡಿ. ಅದಕ್ಕೆ ನಮ್ಮದು ಏನೂ ತಕರಾರು ಇಲ್ಲ, ಆದರೆ ಇಂತಹ ಆಪಾದನೆಯಾದಾಗ ತಾವು ತಕ್ಷಣ ರಿಯಾಕ್ಟ್ ಮಾಡಬೇಕಾಗಿತ್ತು. ನಾವು ಹೇಳುವ ಅವಶ್ಯಕತೆ ಇಲ್ಲ. You should immediately react. ಪಬ್ಲಿಕ್ ಲೈಫ್‌ನಲ್ಲಿ ಆಪಾದನೆಗಳು ಸುಳ್ಳಾಗುತ್ತವೆ. ಕೆಲವು ಸಾರಿ ಬೇಜವಾಬ್ದಾರಿಯಾಗಿಯೂ ಆಪಾದನೆಯನ್ನು ಮಾಡುತ್ತಾರೆ. ಆ ಆಪಾದನೆಗೆ ತಮ್ಮ ಕಡೆಯಿಂದ ಯಾವುದೇ ಉತ್ತರ ಬಂದಿಲ್ಲವೆಂದರೆ, ನಾವು ಏನೆಂದು ತಿಳಿದುಕೊಳ್ಳಬೇಕು? ಇದಕ್ಕೆ ಫಾರೆಸ್ಟ್ ಮಿನಿಸ್ಟರ್ ಉತ್ತರವನ್ನು ಕೊಡುವುದಿಲ್ಲ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವುದಿಲ್ಲ. ಮಾನ್ಯ ಬಿ.ಎಸ್. ಯಡಿಯೂರಪ್ಪನವರೂ ಕೂಡ ಏನೂ ಆ್ಯಕ್ಷನ್ ಅನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಸದಾನಂದ ಗೌಡರೂ ಏನೂ ಆ್ಯಕ್ಷನ್ ತೆಗೆದುಕೊಳ್ಳುವುದಿಲ್ಲವೆಂದರೆ ನಾವು ಏನು ತಿಳಿದುಕೊಳ್ಳಬೇಕು? ಇದೆಲ್ಲಾ ಸತ್ಯವೆಂದು ತಿಳಿದುಕೊಳ್ಳಬೇಕೇನು? ಅದುದರಿಂದ ಈ ಒಂದು ಗಂಭೀರವಾದ ವಿಚಾರದ ಬಗ್ಗೆ ಸಿ.ಬಿ.ಐ. ತನಿಖೆಯಿಂದ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಸಿ.ಎಂ. ಡೆಪ್ಯೂಟಿ ಸಿ.ಎಂ.ಗೆ bribery charge settle ಮಾಡುವುದಕ್ಕೆ authorise ಮಾಡಿದ್ದಾರೆಂದು; ಇದು ನಿಮ್ಮ ಪರ್ಸನಲ್ ಪ್ರಾಪರ್ಟಿ ಅಲ್ಲ. It is not your personal property.

Nobody can be authorised here. Law has to be authorised. ವ್ಯಕ್ತಿಗತವಾಗಿ ಆಥಾರೈಜ್ ಮಾಡುವುದಕ್ಕೆ ಬರುತ್ತದೆಯೇ? ಇಲ್ಲಿ ನೀವು ನಾವು ಕೂಡ ಯಾವ ಪ್ರಕಾರ ಮುಗಿಸಬಹುದೆಂದು ನೋಡುವುದಕ್ಕೆ ಆಗುತ್ತದೆಯೇ? ಸರ್ಕಾರದ ಪರವಾಗಿ you may go to any extent. But, that is not correct. ಸರ್ಕಾರ ಗೌರವದಿಂದ ಉಳಿಯಬೇಕಲ್ಲಾ, ಸರ್ಕಾರದ image high-flying. ಇರಬೇಕಲ್ಲಾ. ಇವತ್ತು ಬಹಳ ಡ್ಯಾಮೇಜ್ ಆಗಿದೆ, ಗೌವರ್ನಮೆಂಟ್ ಇಮೆಜ್; ಅದುದರಿಂದ ಒಂದು ಕಡೆ ಸಿ.ಬಿ.ಐ. ಎನ್‌ಕ್ವಾಯರಿ ಆಗಬೇಕು. ಒಂದು ಕಡೆ ಮಾನ್ಯ ಮುಖ್ಯಮಂತ್ರಿಯವರು ರಾಜೀನಾಮೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ. ನಾವು ನೈಸ್ ಕಂಪನಿಯ ವಿಚಾರವಾಗಿಯೂ ಸಹ ಸಿ.ಬಿ.ಐ. ಎನ್‌ಕ್ವಾಯರಿಯಾಗಬೇಕೆಂದು ಕೇಳಿದ್ದೆವು. ಈ ವಿಷಯವೂ 6–7 ದಿವಸಗಳ ಕಾಲ ಚರ್ಚೆ ಆಯಿತು. ಏನೋ ಸರ್ಕಾರದ ಕಡೆ ಇದೆ, Something is in bag. ಏನೋ ತೆಗೆಯುತ್ತಾರೆಂದು, ನಾವು ತಿಳಿದುಕೊಂಡು, ಏನು ತೆಗೆಯುತ್ತಾರೆಂದು ನಾವು ನೋಡುತ್ತಾ ಇದ್ದೆವು. ಆ ಬ್ಯಾಗ್ ಓಪನ್ ಮಾಡಿದರೆ ಏನೂ ಇಲ್ಲ, ಖಾಲಿ ಬ್ಯಾಗು. ನೀವು ಏನು ಮಾಡಿದಿರಿ, ನಾವು ಸಿ.ಬಿ.ಐ ಏನ್‌ಕ್ವಾಯರಿಯಾಗಬೇಕೆಂದು ಕೇಳಿದೆವು. ಅದಕ್ಕೆ ತಾವು ಒಪ್ಪಿಕೊಳ್ಳಲಿಲ್ಲ. ತಾವು ಇದನ್ನು ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಹೇಳಿದ್ದೀರಿ. ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಆದರೆ ಜ್ಯುಡಿಶಿಯಲ್ ಎನ್‌ಕ್ವಾಯರಿ ಬಗ್ಗೆ, ಮಾನ್ಯ ಸಿ. ಉದಾಸಿಯವರೇ, ತಾವು ಸಹ ಕ್ಯಾಬಿನೆಟ್‌ನಲ್ಲಿ ಇದ್ದೀರಿ. ತಾವು ಆ ದಿವಸ ಮಾತನಾಡಬೇಕಾಗಿತ್ತಲ್ಲಾ? ಆ ಜ್ಯುಡಿಶಿಯಲ್ ಎನ್‌ಕ್ವಾಯರಿ ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಿಂದ ಏಕೆ? 1997ರಿಂದ,ಆರ್.ವಿ. ದೇಶಪಾಂಡೆಯವರು, ಎಂ.ಪಿ. ಪ್ರಕಾಶ್‌ರವರು, ಪಿ.ಜಿ.ಆರ್. ಸಿಂಧ್ಯರವರು, 1995ನೇ ಇಸವಿಯಲ್ಲಿ ಮಂತ್ರಿಗಳಾಗಿ ಇದ್ದರು. ನಾನು ನನ್ನ ಮಾತಿನಲ್ಲಿ ಹೇಳಿದ್ದೆ. ಇದನ್ನು ಎನ್‌ಕ್ವಾಯರಿ ಮಾಡಬೇಕೆಂದರೆ 1995ನೇ ಇಸವಿಯಿಂದ ಮಾಡಿ ಎಂದು ಹೇಳಿದ್ದೆ. ಏಕೆ? ಸಿ.ಬಿ.ಐ ಎನ್‌ಕ್ವಾಯರಿ 1995ನೇ ಇಸವಿಯಿಂದ ಆಗಬೇಕೆಂದು ಹೇಳಿದ್ದು, ಏಕೆ? 1995ನೇ ಇಸವಿಯಲ್ಲಿ ಏನು ಎಂ.ಒ.ಯು. ಆಯಿತು. ಅದು ಆದನಂತರ ಹೈ ಪವರ್ ಕಮಿಟಿಯ ಡಿಸಿಷನ್ಸ್ ಆಯಿತು. empowered committee decisions ಏನು ಆದವು, core committee decisions ಏನು ಅದವು, Cabinet Sub-Committee decisions ಏನು ಆದವು, ಕ್ಯಾಬಿನೆಟ್ ಡಿಸಿಷನ್ ಏನು ಆದವು, ಆ ಎರಡು, ಮೂರು ವರ್ಷಗಳಲ್ಲಿ, ಆದರ ರಿಸಲ್ಟ್ ಫ್ರೇಮ್ ವರ್ಕ್

ಅಗ್ರಿಮೆಂಟ್, ಈ ಫ್ರೇಮ್ ವರ್ಕ್ ಅಗ್ರಿಮೆಂಟ್ ವ್ಯಾಲಿಡ್, ಲೀಗಲ್ ಎಂದು ಹೇಳಿದ್ದಾರೆ. So, you are starting But, the enquiry from 1997. ಆ ಫ್ರೇಮ್ ವರ್ಕ್ ಆಗುವುದಕ್ಕೆ ಕಾರಣರು ಯಾರು? ಅದರ ಜವಾಬ್ದಾರರು ಯಾರು? ಯಾವ ಅಧಿಕಾರಿಗಳು, ಯಾವ ಮಂತ್ರಿಗಳು, ಅವರಿಗೆ ಏನು ರೆಸ್ಪಾನ್ಸಿಬಿಲಿಟಿ ಇಲ್ಲವೇ? ಇದು, it just looks politically-motivated, mala fide ಎಂದು ಹೇಳಬೇಕಾಗುತ್ತದೆ. It is the mala fide intention of the government, political motive of the government, ನ್ಯಾಯಯುತವಾಗಿ ಚಾರ್ಜ್ ಮಾಡಿದ್ದೇನೆ. ಆಗಿನ ಮುಖ್ಯಮಂತ್ರಿಗಳು ಏನು ತಪ್ಪು ಮಾಡಿದ್ದಾರೆಂದು ನಾನು ಹೇಳಿಲ್ಲ. ಅದನ್ನು ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ, ಎನ್‌ಕ್ವಾಯರಿ ಮಾಡಬೇಕೆಂದರೆ, 1995ನೇ ಇಸವಿಯಿಂದ ಸಿ.ಬಿ.ಐ. ಎನ್‌ಕ್ವಾಯರಿಯಿಂದ ಆಗಲಿ. ಇಲ್ಲಿ ಏನಾಗುತ್ತದೆ, something is there between 1995 and 1997 and somebody wants to hide and shelter somebody ಎಂದು ಆಗುತ್ತದೆ. ನಾನು ಆಪಾದನೆ ಮಾಡುತ್ತಿಲ್ಲ, ಆ ತರಹದ ಭಾವನೆ ನಾಡಿನ ಜನರ ಮನಸ್ಸಿನಲ್ಲಿ ಬರಬಹುದು. ಅದನ್ನು ಮುಖ್ಯಮಂತ್ರಿಗಳು ಕುಮಾರಸ್ವಾಮಿಯವರು ಇದ್ದಾಗ, ಆಗಿನ ಮುಖ್ಯಮಂತ್ರಿಯವರು ಅವರ ಪೂಜ್ಯ ತಂದೆಯವರು ಇದ್ದಾಗ, he has to be more cautious, more responsible ಎಂಬುದು ನನ್ನ ಸಲಹೆಯಾಗಿದೆ. ಈ ರೀತಿಯಿಂದ ನೀವು ಯಾವುದೇ ಸಾಧನೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ನೋಡಿದೆ. ಯಾರ ಟರ್ಮ್ಸ್ ಆಫ್ ರೆಫರೆನ್ಸ್, ಹೈಕೋರ್ಟ್‌ನಲ್ಲಿ ಡಿಸ್ಪೈಡ್ ಆಗಿದೆ. ಹೈಕೋರ್ಟ್ ಯಾರಿಗೆ ನ್ಯಾಯಬದ್ಧವಾಗಿ ಕ್ಲಿನ್ ಚೀಟ್ ಕೊಟ್ಟಿದ್ದಾರೆ, ಪುನಃ ರೆಫರೆನ್ಸ್ ಇಷ್ಯೂ ಮಾಡಿದ್ದೀರಿ, ಏಕೆ Somehow, ನಿಮ್ಮ ಮನಸ್ಸಿನಲ್ಲಿ ಏನೋ ಇದೆ. ಕೆಲವು ಜನರು, ನಾವು ಏನಾದರೂ ಮಾಡಿ ಪೊಲಿಟಿಕಲ್ ಎನಿಮೀಸ್‌ಗೆ ಕಷ್ಟದಲ್ಲಿ ತರಬೇಕೆಂದು; ಆದರೆ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. Democracy ಇದೆ. Court ಇವೆ, ಆ ರೀತಿಯ ಕೆಟ್ಟ intention ಇದ್ದರೆ ಅದು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರ್ಕಾರ ಒಂದು ಕಡೆ ದಾರಿ ತಪ್ಪಿ ಹೋಗುತ್ತಾ ಇದೆ ಎಂದು ಇವತ್ತು ನಾಡಿನ ಜನರ ಮನಸ್ಸಿನಲ್ಲಿ, ಒಂದು ಸಂದೇಹ ಬಂದಿದೆ. ಅದರಲ್ಲಿ ಮತ್ತೊಂದು ಸಂದೇಹ, ಸರ್ಕಾರ ಇರುತ್ತದೋ, ಹೋಗುತ್ತದೋ ಎಂದು. ನೀವು ಇನ್ನು ಮೂರು ವರ್ಷಗಳು ಆಡಳಿತವನ್ನು ಮಾಡಿ, ಯಾರು

ಬೇಡವೆಂದು ಹೇಳುವುದಿಲ್ಲ. ಆದರೆ ಒಂದು ತರಹದ ವಾತಾವರಣ ನಿರ್ಮಾಣವಾಗಿದೆ. ಅದು ಭುಗಿಲೆದ್ದು, ಜನರಲ್ಲಿ ಆ ರೀತಿಯ ಭಾವನೆ ಬಂದಿದೆ. ಆದುದರಿಂದ ಆಡಳಿತವನ್ನು ಮಾಡಬೇಕಾದರೆ, with iron hand ಮಾಡಿ with firm hand ಮಾಡಿ ಏನು ಮಾಡುತ್ತೀರೋ, ಅದರಲ್ಲಿ ವಿಶ್ವಾಸ ಇಡಿ. ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇವೆಂದು ಹೇಳಿ, ತಪ್ಪು ಮಾಡಿದರೆ ತಪ್ಪು ಮಾಡಿದ್ದೇವೆಂದು ಹೇಳಿ ಪುನಃ ನೀವು ಎಲ್ಲಾ ತಪ್ಪು ಮಾಡಿ ಸಹ, ತಾವು ಅದರ ಮೇಲೆ ಪೇಯಿಂಟ್ ವಾರ್ನಿಷ್ ಬಳಿದು, ಹೊಸದಾಗಿ ತೋರಿಸುವುದಕ್ಕೆ ಹೋದರೆ, ಅದನ್ನು ಜನರು ನಂಬುವುದಿಲ್ಲ. ನಾನು ಇಷ್ಟು ಹೇಳಿ, ಮಾನ್ಯ ಚೇರ್ಮನ್‌ರವರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದಕ್ಕೆ, ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಇದು ಒಂದು ಗಂಭೀರವಾದ ಸಮಸ್ಯೆ ಇದೆ, ಗಂಭೀರವಾದ ಅಪವಾದ ಇದೆ. ಇದರ ಬಗ್ಗೆ ಸಿಬಿಐ ಯಿಂದ ತನಿಖೆ ಮಾಡಿಸಿದರೆ ನಿಜವಾದ ಸತ್ಯ ಹೊರಬರಬಹುದು. ತಾವೂ ಆಪಾದನೆ ಮಾಡಿದಿರಿ, ಕಾಂಗ್ರೆಸ್ ಜನರಿದ್ದಾರೆ, ಮತ್ತೊಬ್ಬರಿದ್ದಾರೆ ಎಂದು. ತನಿಖೆ ಮಾಡಿದರೆ, ಯಾರ್‍ಯಾರಿದ್ದಾರೆ, ಎಲ್ಲರೂ ಹೊರಗೆ ಬರುತ್ತಾರೆ. ಇದರಲ್ಲಿ ತಪ್ಪೇನಿದೆ? ತಪ್ಪೇನಿಲ್ಲ. ಯಾರಿದ್ದಾರೆ, ಎಲ್ಲರೂ ಹೊರಗೆ ಬರುತ್ತಾರೆ. ದಂಧೆ ಮಾಡಿದರು ಎಂದು ನಾನು ಹೇಳುವುದಿಲ್ಲ. I am the last man to say. ನಾವು ಬಿಸಿನೆಸ್ ಮಾಡುತ್ತೇವೆ ನಾವು ಇಂಡಸ್ಟ್ರೀ ಮಾಡುತ್ತೇವೆ ಎನ್ನುವುದರಲ್ಲಿ ಏನು ತಪ್ಪಿದೆ? We have got every right as a citizen ನ್ಯಾಯಬದ್ಧವಾಗಿ, ಕಾಯಿದೆಯಂತೆ ಪ್ರತಿಯೊಂದು ವ್ಯಾಪಾರ, ವ್ಯವಹಾರ ಮಾಡಲಿಕ್ಕೆ ಪ್ರತಿಯೊಬ್ಬ ಈ ರಾಷ್ಟದ ನಾಗರೀಕನಿಗೂ ಅಧಿಕಾರವಿದೆ. ನನ್ನ ಕೈಯ್ಯಲ್ಲಿ ನಾಲ್ಕು ದುಡ್ಡಿದೆ ಎಂದರೆ ನಿಮಗೆ ದೇಶಪಾಂಡೆ ಮೇಲೆ ಹೊಟ್ಟೆಕಿಚ್ಚು ಇರಬೇಕು, ನಿಮ್ಮ ಕೈ ಖಾಲಿ ಇದೆ ಎಂದು ಸುಮ್ಮನೆ ನನ್ನನ್ನು ಬಯ್ಯುತ್ತಿರಬೇಕು. ಆ ರೀತಿ ನಾವು ಇರಬಾರದು. ನೀವು ಖಾಲಿ ಇದ್ದರೆ, ದೇವರ ಆಶೀರ್ವಾದವಿಲ್ಲ, ಅದಕ್ಕೆ ಖಾಲಿ ಇದ್ದೇವೆ ಎಂದು ತಿಳಿದುಕೊಂಡು ಸುಮ್ಮನೆ ಕುಳಿತುಕೊಳ್ಳಿ. ಕಷ್ಟಪಟ್ಟು ನಾನು ದುಡ್ಡು ಮಾಡಿಕೊಂಡರೆ ಕಷ್ಟಪಟ್ಟಿದ್ದಾನೆ ಎನ್ನುವ ಸಮಾಧಾನವಿರಬೇಕೇ ವಿನಃ ಹೊಟ್ಟೆಕಿಚ್ಚು ಯಾವಾಗಲೂ ಇರಬಾರದು. ಹಾಗಾಗಿ, ಒಂದಷ್ಟು ಜನ ಆರ್ಥಿಕವಾಗಿ ಸದೃಢರಾಗಿದ್ದರೂ ಸಹ ಅದು ಪಾಪವಲ್ಲ. ಈ ತರಹದ ಪರಿಸ್ಥಿತಿ ಈ ಮನೆಯಲ್ಲಿ ನಿರ್ಮಾಣವಾಗುತ್ತಿದೆ. ಇದು ಆಗಬಾರದು, ಸರಿಯಲ್ಲ ಇದು. ನ್ಯಾಯಬದ್ಧವಾಗಿ, ಗೌರವದಿಂದ ಯಾರು ಬಾಳುತ್ತಾನೆ, ಅವನಿಗೆ ಅಧಿಕಾರ ಇದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಸಿಬಿಐ ತನಿಖೆ ಮಾಡಿಸಬೇಕು ಎಂದು ಮತ್ತೊಮ್ಮೆ ಒತ್ತಾಯ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ (ಆರಗ ಜ್ಞಾನೇಂದ್ರ) : ಈಗ ಮಾನ್ಯ ಪುಟ್ಟೇಗೌಡರು.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರಾವಣಬೆಳಗೊಳ) : ಮಾನ್ಯ ಅಧ್ಯಕ್ಷರೇ, ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ನನ್ನ ನಮಸ್ಕಾರಗಳನ್ನು ತಿಳಿಸುತ್ತೇನೆ. ಸನ್ಮಾನ್ಯ ಕುಮಾರಸ್ವಾಮಿಯವರು ಮತ್ತು ಯಡಿಯೂರಪ್ಪನವರು ಸೇರಿಕೊಂಡು ಎರಡೂ ಪಕ್ಷದ ಸಮ್ಮಿಶ್ರ ಸರ್ಕಾರವನ್ನು ಕಳೆದ ನಾಲ್ಕೂವರೆ ತಿಂಗಳಿಂದ ನಡೆಸುತ್ತಿದ್ದಾರೆ. ಇದರಲ್ಲಿ ಸನ್ಮಾನ್ಯ ಚನ್ನಿಗಪ್ಪನವರು ಫಾರೆಸ್ಟ್ ಮಿನಿಸ್ಟರ್ ಆಗಿದ್ದು ಇವರ ಮೂಲಕ 150 ಕೋಟಿ ರೂಪಾಯಿಗಳನ್ನು ಭ್ರಷ್ಟಾಚಾರ ಎಸಗಿ ತೆಗೆದುಕೊಂಡಿದ್ದಾರೆ, ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ ಅಥವಾ ಇನ್ಯಾರಿಗೋ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತಿದೆ. ಇದು ಪತ್ರಿಕಾ ಮಿತ್ರರ ಕಡೆಯಿಂದ ಬಂದ ಸುದ್ಧಿಯ ಆಧಾರದ ಮೇಲೆ ಚರ್ಚೆ ನಡೆಯುತ್ತಿದೆ. ನಿಜ, ಪತ್ರಿಕೆಯಲ್ಲಿ ಬಂದುದ್ದನ್ನು ನಾವು ಅಲ್ಲಗಳೆಯುವ ಹಾಗಿಲ್ಲ. ಈ ದೇಶದ ಎಲ್ಲಾ ರಂಗಗಳಲ್ಲಿ ಸ್ವಾತಂತ್ರ್ಯ ಹೇಗೆ ಮುಖ್ಯವೋ ಹಾಗೆಯೇ ಈ ದೇಶದ ವ್ಯವಸ್ಥೆ ಒಂದು ಚೂರಾದರೂ ಸರಿಯಾಗಿರಲಿಕ್ಕೆ ಪತ್ರಿಕಾ ಸ್ವಾತಂತ್ರ್ಯ ಪತ್ರಿಕಾ ರಂಗ ಕೂಡ ಬಹಳ ಮುಖ್ಯವಾದುದು. ಏಕೆಂದರೆ 1977ನೇ ಇಸವಿಯಲ್ಲಿ ನಡೆದಂಥ ಒಂದು ಎಮರ್ಜೆನ್ಸಿ ಹೋರಾಟ, ಜೆ.ಪಿ. ಚಳುವಳಿಯಂಥ ಎಲ್ಲಾ ಚಳುವಳಿಗಳಿಗೆ ಈ ದೇಶದ ಪತ್ರಿಕೆಗಳವರು ಸತ್ಯವನ್ನು ಸಮರ್ಪಣೆ ಮಾಡುವುದರಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇವತ್ತು ಈ ದೇಶದಲ್ಲಿ ಅವರಿಗೂ ಎಲ್ಲಾ ಸತ್ಯಗಳನ್ನು ಬಚ್ಚಿಡಲು ಆಗದೇ ಇರಬಹುದು. ಏಕೆಂದರೆ ಅವರು ಸರಿಯಾಗಿದ್ದರೂ ಕೂಡ, ಅವರ ಒಡೆಯರು ಎಲ್ಲೆಲ್ಲಿ ಅವರ ಕೈಯ್ಯನ್ನು ತಡೆಹಿಡಿಯುತ್ತಾರೆನ್ನುವುದು ಗೊತ್ತಿಲ್ಲ. ಈ ದೇಶದ ದೊಡ್ಡ ದೊಡ್ಡ ರಾಜಕಾರಣಿಗಳು, ಉದ್ಯಮಪತಿಗಳು ಎಲ್ಲೆಲ್ಲಿ ತಡೆಹಿಡಿಯುತ್ತಾರೆನ್ನುವುದು ಗೊತ್ತಿಲ್ಲ. ಏಕೆಂದರೆ ಪತ್ರಿಕೆಗೆ ಬರೆಯುವವರೇ ಬೇರೆ, ಪತ್ರಿಕೆ ನಡೆಸುವವರೇ ಬೇರೆ. ಪತ್ರಿಕೆಗಳನ್ನು ನಡೆಸುವವರು ದೊಡ್ಡ ದೊಡ್ಡ ಕುಳಗಳೇ. ಅವರು ಸಣ್ಣಮಟ್ಟವರು ಅಲ್ಲ. ಬುದ್ಧಿ ಇದ್ದವರು ವಿಚಾರವಿದ್ದವರು, ವೈಚಾರಿಕತೆಯ ಭಾವನೆ ಇದ್ದವರು ತಿಳುವಳಿಕೆ ಇದ್ದವರು, ಓದಿದವರು ಅವರ ಹತ್ತಿರ ಹೋಗಿ ಬರೆಯುವಾಗ, ಅವರು ಬರೆಯುವವರ ಕೈಗಳನ್ನೇನೂ ಅಷ್ಟಾಗಿ ಫ್ರೀಯಾಗಿ ಬಿಟ್ಟಿಲ್ಲ. ಅದು ಏನಾದರೂ ಆಗಿರಲಿ, ಅಲ್ಲಿ ಸತ್ಯ ಸಂಗತಿಯೂ ಬಹಳ ಪಾಲು ಹೊರಬರುತ್ತದೆ ಎಂದು ಭಾವಿಸೋಣ. ಇವತ್ತು ಅಗ್ನಿ ಪರೀಕ್ಷೆ ಆಗಬೇಕಾಗಿದೆ ಎಂದು ಈಗ ತಾನೇ ಮಾತನಾಡಿದ ದೇಶಪಾಂಡೆಯವರು ಹೇಳಿದರು. ಧರಂಸಿಂಗ್ ಸಾಹೇಬರು ಇನ್ನೂ ಮಾತನಾಡಲಿಲ್ಲವೆಂದು ಕಾಣುತ್ತದೆ, ಏಕೆಂದರೆ ಆಗಲೇ ನಾನು ಇಲ್ಲಿ ಇರಲಿಲ್ಲ. ಮಾತನಾಡಿದ ಹಲವಾರು ಜನ, ಶ್ರೀರಾಮರೆಡ್ಡಿಯವರು ಎಲ್ಲರೂ ಹಾಗೆ ಹೇಳುತ್ತಿದ್ದರು. ಶ್ರೀರಾಮರೆಡ್ಡಿಯವರು

ಮಾತನಾಡುವಾಗ, ಇದಕ್ಕೆ ಬೇರೆಬೇರೆ ಕಾರಣವಿದೆ, ಬಿಜೆಪಿಯವರ ಆಂತರಿಕವಾದ ಜಗಳ ಇದಕ್ಕೆ ಕಾರಣವಾಗಿದೆ, ಅಥವಾ ಇನ್ನಾರೋ ಪೋಲೀಸ್ ಅಧಿಕಾರಿಯನ್ನು ವರ್ಗಾವಣೆ ಮಾಡಲಿಲ್ಲವೆನ್ನುವುದು ಇದಕ್ಕೆ ಕಾರಣವಾಗಿದೆ, ನಿಮ್ಮ ಸರ್ಕಾರ ಸರಿಯಲ್ಲ, ಸರ್ಕಾರದಲ್ಲ ಹೊಂದಾಣಿಕೆ ಇಲ್ಲ ಎನ್ನತಕ್ಕಂಥ ಮಾತುಗಳನ್ನೆಲ್ಲಾ ಹೇಳಿದ್ದಾರೆ. ಕುಮಾರಸ್ವಾಮಿಯವರ ಈ ಸರ್ಕಾರ ಬಂದು ಬಹುಶಃ ನಾಲ್ಕೂವರೆ ತಿಂಗಳಾಯಿತು. 150 ಕೋಟಿ ರೂಪಾಯಿ ಭ್ರಷ್ಟಾಚಾರವಾಗಿದೆ ಎಂದು ಹೇಳುತ್ತಿದ್ದಾರಲ್ಲಾ ಈ 150 ಕೋಟಿ ರೂಪಾಯಿಗಳ ದುಡ್ಡನ್ನು ತಂದು ಕೊಡುವವನು, ಈ ನಾಲ್ಕೂವರೆ ತಿಂಗಳಲ್ಲಿ ಗಣಿ ಬಿಸಿನೆಸ್ ಮಾಡಿದವನು ಕೊಡಲಿಕ್ಕೆ ಆಗುವುದಿಲ್ಲ. ಇದು ಹೊಸದಲ್ಲ. ಈ ಸರ್ಕಾರ ಭ್ರಷ್ಟಾಚಾರದಿಂದ ಮುಕ್ತವಾಗಿದೆ ಅಥವಾ ಹಿಂದಿನ ಸರ್ಕಾರ ಸತ್ಯಕ್ಕೆ ಹತ್ತಿರವಾಗಿದೆ ಅಥವಾ ಅದರ ಹಿಂದಿನ ಸರ್ಕಾರ ಏನೂ ಮುಟ್ಟೇ ಇಲ್ಲ ಎನ್ನುವುದೇನೂ ಇಲ್ಲ. ಇವತ್ತು ಯಾವುದೇ ಒಂದು ಸರ್ಕಾರ ಅಧಿಕಾರಕ್ಕೆ ಬಂದರೂ ಜನರು ಏನು ಮಾತನಾಡುತ್ತಾರೆಂದರೆ, ಬಡಿದಾಡಿ ಓಟು ಹಾಕಿದ ಜನರಿಗಿಂತ ಇಂಥಿಂಥ ಗಣಿ ಮಾಲೀಕರು ಇಂಥಿಂಥ ದೊಡ್ಡದೊಡ್ಡ ಉದ್ಯಮಪತಿಗಳು, ಇಂಥಿಂಥ ದೊಡ್ಡದೊಡ್ಡ ಕಾಂಟ್ರಾಕ್ಟರ್‌ಗಳು ಸೇರಿ ಈ ಸರ್ಕಾರವನ್ನು ತಂದರು ಎಂದು ಹೇಳಿ; ಯಾವುದೇ ಸರ್ಕಾರ ಬಂದಾಗಲೂ ಅವರಿಗೆ ಇದರಲ್ಲಿ ಒಂದಷ್ಟು ಪಾಲು ಬರುತ್ತದೆ. ಈ ಸಲ ಇವರು ಬಂಡವಾಳ ಹೂಡಿದವರು, ಇವರು ಸರ್ಕಾರ ತಂದವರು ಎನ್ನತಕ್ಕಂಥ ಮಾತು ಬರುತ್ತದೆ. ನಾವು ಮನ ಬಿಚ್ಚಿ ನಮ್ಮ ಆತ್ಮಸಾಕ್ಷಿಯಾಗಿ ಹೇಳೋಣ. ನಾವೆಲ್ಲರೂ ಕೂಡ ಚುನಾವಣೆಗೆ ನಿಲ್ಲುವುದಕ್ಕೆ ತಯಾರಿ ಮಾಡುವಂದಿನಿಂದಲೇ ನಮ್ಮ ಭ್ರಷ್ಟಾಚಾರ ಶುರುವಾಗುತ್ತದೆ. ಯಾರೋ ಗಣಿ ಮಾಲೀಕ ಬರುತ್ತಾನೆ ಅಥವಾ ಯಾರೋ ಗುತ್ತಿಗೆದಾರ ಬರುತ್ತಾನೆ, ಅಥವಾ ಬೆಂಗಳೂರಿನಲ್ಲಿ ಸಲ್ಲದ ಬಿಸಿನೆಸ್ ಮಾಡುವವನು ಬರುತ್ತಾನೆ, ಬಂದು ಸಾರ್, ನಿಮಗ್ಯಾಕೆ ಚಿಂತೆ, ನಾವು ಕಟೌಟ್ ಹಾಕಿಸುತ್ತೇವೆ, ನಿಮ್ಮನ್ನು ಬೆಳಕಿಗೆ ಬರುವ ಹಾಗೆ ಮಾಡುತ್ತೇವೆ, ನೀವು 'ಬಿ' ಫಾರಂ ತೆಗೆದುಕೊಳ್ಳುವವರೆಗೆ ನಿಮ್ಮನ್ನು ತಯಾರು ಮಾಡುತ್ತೇವೆ, ಆಮೇಲೆ ಗೆಲ್ಲಿಸುತ್ತೇವೆ ಎಂದೂ ಕೂಡ ಹೇಳುತ್ತಾರೆ. ಇವತ್ತು ಒಬ್ಬ ಸಾಮಾನ್ಯ ಮನುಷ್ಯ ಅಥವಾ ಸತ್ಯಸಂಧ ಬಂದು ಎಂಎಲ್‌ಎ ಆಗುತ್ತೇನೆ ಅಥವಾ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗುತ್ತೇನೆ ಎನ್ನುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಒಂದು ನಿದರ್ಶನವೆಂದರೆ ಒಂದು ಚೂರು ಹತ್ತಿರ ಹತ್ತಿರ ನಮ್ಮ ಗೋವಿಂದೇಗೌಡರು ರಾಜಕೀಯದಲ್ಲಿ ಉಳಿಯಲಿಕ್ಕೆ ಆಯಿತೇ? ಮಾತನಾಡುವವರು ಆತ ಬಹಳ ಸತ್ಯಸಂಧ, ಗೋವಿಂದೇಗೌಡರು ಪರವಾಗಿಲ್ಲ ಎಂದು ಹೇಳುತ್ತಾರೆ. ಒಂದು ರೀತಿ ಬಂಡವಾಳ ತೆಗೆದೇ ಈ ಸರ್ಕಾರ ಆಗುವುದು. ನನ್ನನ್ನೂ ಸೇರಿಸಿ, ಎಲ್ಲರೂ

ಒಂದಲ್ಲ ಒಂದು ತರಹದಲ್ಲಿ ಈ ಭ್ರಷ್ಟಾಚಾರದ ಅಂಟು ಇಲ್ಲದೇ ಈ ರಾಜಕೀಯಕ್ಕೆ ಬರಲು ಸಾಧ್ಯವಿಲ್ಲವೆನ್ನುವುದು ನನ್ನ ಭಾವನೆ. ಈ ದೇಶದಲ್ಲಿ ಎಲ್ಲೆಲ್ಲಿ ದುಡ್ಡನ್ನು ಸಂಪಾದನೆ ಮಾಡುವುದಕ್ಕೆ ದೊಡ್ಡದೊಡ್ಡ ಉದ್ದಿಮೆಗಳಿದ್ದಾರೋ, ಅವರೆಲ್ಲ ರಾಜಕಾರಣಿಗಳಿಗೆ ಟಿಪ್ಸ್ ಕೊಡುತ್ತಾರೆ. ಎಲ್ಲರಿಗೂ ಒಂದಲ್ಲ ಒಂದು ರೀತಿಯಾಗಿ, ಬೇರೆಯವರಿಗೆ ಗಿಫ್ಟ್ ಕೊಟ್ಟಹಾಗೆ, ಎಲೆಕ್ಷನ್ ಟೈಂನಲ್ಲಿ ನಿಮಗಿಷ್ಟು, ನಿಮಗಿಷ್ಟು ಎಂದು ಅವರು ಬಂಡವಾಳವನ್ನು ನೇರವಾಗಿ ರಾಜಕಾರಣಿಗಳಿಗೆ ಕೊಡುತ್ತಾರೋ ಅಥವಾ ಅವರ ಜೊತೆಗೆ ಓಡಾಡುವ ಯಾವನೋ ಚಂಗಿಪಿಂಗಿ ತೆಗೆದುಕೊಳ್ಳುತ್ತಾನೋ ಗೊತ್ತಿಲ್ಲ. ಒಟ್ಟಿನಲ್ಲಿ ಅವರು ಎಲ್ಲರಿಗೂ ಬಂಡವಾಳ ಹೂಡುತ್ತಾರೆ. ಈ ರೀತಿ ತೆಗೆದುಕೊಂಡು ಬಂದಾಗ, ರಾಜಕೀಯ ಮಾಡುವಾಗ ಕರಪ್ಷನ್ ಇಲ್ಲ ಎನ್ನುವುದನ್ನು ಜನರು ಒಪ್ಪುವುದೇ ಇಲ್ಲ. ಒಂದು ಸಲ ನಮ್ಮ ಅಧಿಕಾರಿ ಸ್ನೇಹಿತರೆಲ್ಲಾ ಊಟಕ್ಕೆ ಕುಳಿತಿದ್ದರು. ನೀತಿವಂತ ಶಾಸಕರು ಕೆಲವಾದರೂ ಎಲ್ಲಾ ಪಾರ್ಟಿಯಲ್ಲೂ ಇದ್ದಾರೆ, ಭ್ರಷ್ಟಾಚಾರದಿಂದ ದೂರವಿರುವವರು ಇದ್ದಾರೆ ಎಂದು ಎಷ್ಟು ಹೇಳಿದರೂ ಅವರು ಒಪ್ಪುವುದಿಲ್ಲ. ಇದು ಯಾವ ಮಾತು ಎಂದು ಹೇಳುತ್ತೀರಿ, ರಾಜಕಾರಣ ಎಂದರೆ ಅವನು ದುಡ್ಡು ಹೊಡೆದೇ ಹೊಡೆದಿರುತ್ತಾನೆ ಎಂದು ಹೇಳುತ್ತಾರೆ. ಅದು ತಪ್ಪು. ಒಮ್ಮೊಮ್ಮೆ ನಾವು ಮಾತನಾಡುವಾಗ ಅಧಿಕಾರಿಗಳ ಗ್ಯಾಲರಿ ತೋರಿಸಿ ಹೇಳುತ್ತೇವೆ, ಇವರಿಗೆಲ್ಲಾ ಸರಿಯಾಗಿ ಬುದ್ಧಿ ಹೇಳಬೇಕು ಎಂದು ಹೇಳುತ್ತೇವೆ. ಅಲ್ಲಿಯೂ ಯೋಗ್ಯರಿದ್ದಾರೆ, ಅಲ್ಲಿಯೂ ಅಯೋಗ್ಯರಿದ್ದಾರೆ, ರಾಜಕೀಯ ಮಾಡುವುದಕ್ಕೆ ಬಂದಾಗ, ಇಲ್ಲಿ ನಮ್ಮಲ್ಲಿಯೂ ಕೂಡ ನಾವೆಲ್ಲರೂ ಸತ್ಯಸಂಧರು ಎಂದು ಹೇಳುವುದು ಬೇಡ. ನಾನು ಹಿಂದೆ 10 ವರ್ಷಗಳ ಕಾಲ ಶಾಸಕನಾಗಿ ನೋಡಿದ್ದೇನೆ. ಧರಂಸಿಂಗ್ ಸಾಹೇಬರು, ಖರ್ಗೆ ಸಾಹೇಬರು, ಸ್ಪೀಕರ್‌ರಾಗಿದ್ದಂಥ ರಮೇಶ್ ಕುಮಾರ್‌ರವರು, ದೇಶಪಾಂಡೆಯವರು, ದೇವೇಗೌಡರು, ಜೆ.ಹೆಚ್. ಪಟೇಲರ ಸರ್ಕಾರವಿದ್ದಾಗಿನಿಂದ ಶಾಸಕನಾಗಿ ನಾನು ಇಲ್ಲಿ ಕುಳಿತಿದ್ದೇನೆ. ನೀತಿವಂತರಾಗಿದ್ದ ಬಹಳ ಜನ ಮಂತ್ರಿಗಳಿದ್ದರು ಅವರು ಯಾರು ಎಂದು ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು ಎಂದು ಹೇಳಿ ನಾನೇಕೆ ಚಿಕ್ಕವನಾಗಲಿ. ದುಡ್ಡನ್ನು ನೋಡದೇ ಭ್ರಷ್ಟಾಚಾರದ ಬ್ಯಾಗನ್ನು ನೋಡದೇ ಯಾವುದೇ ಒಂದು ಫೈಲಿಗೆ ಸೈನ್ ಹಾಕಿರುವವರನ್ನು ನಾನು ಈ ವಿಧಾನಸೌಧದ ಮೂರನೇ ಮಹಡಿಯಲ್ಲಿ ಅವರು ಕುಳಿತು ಕೆಲಸ ಮಾಡುವಾಗ ನೋಡಿದ್ದೇನೆ. ಕೆಲವರು ಆ ಬ್ಯಾಗನ್ನೇ ಕಾಯ್ದು, ಅದರಲ್ಲಿರುವ ದುಡ್ಡಿಗೆ ಪ್ರಮೋಷನ್ ಅಥವಾ ವರ್ಗಾವಣೆ ಮಾಡುವುದನ್ನು, ದುಡ್ಡಿಗೆ ದಂಧೆ ಮಾಡುವವರನ್ನೂ ನೋಡಿದ್ದೇನೆ. ಮೊದಲನೇ ದಿನ ತಮ್ಮ ಆಫೀಸಿಗೆ ಪಿ.ಎಸ್.

ನೇಮಕ ಮಾಡುವುದರಿಂದ ಹಿಡಿದು, ಪಿ.ಎ. ಇಟ್ಟುಕೊಳ್ಳುವುದರಿಂದ ಹಿಡಿದು ಎಲ್ಲವನ್ನೂ ಲೆಕ್ಕ ಇಡುತ್ತಾರೆ. ಸ್ವಲ್ಪ ನೀತಿವಂತರಾಗಿರಬೇಕು ಎನ್ನುವವರು, ನೀತಿವಂತರನ್ನು ಹುಡುಕಿ ಪಿಎಸ್ ಅಥವಾ ಪಿಎ ಗಳನ್ನಾಗಿ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ವ್ಯಾಪಾರ ಮಾಡಬೇಕೆನ್ನುವವರು, ಅದಕ್ಕೆ ತಕ್ಕಂತೆ ವ್ಯಾಪಾರ ಮಾಡುವ ಒಬ್ಬನನ್ನು ಇಟ್ಟುಕೊಂಡಿರುತ್ತಾರೆ. ಇಂಥಾದ್ದನ್ನು ನಾನು 10 ವರ್ಷಗಳಿಂದ ಕಂಡಿದ್ದೇನೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಎಲ್ಲಾ ಪಕ್ಷದಲ್ಲಿ ನಾನು ಆ ಪಕ್ಷ, ಈ ಪಕ್ಷ ಎಂದು ಹೇಳುವುದಿಲ್ಲ, ಭ್ರಷ್ಟರು ಎಲ್ಲಾ ಪಕ್ಷದಲ್ಲೂ ಇರುತ್ತಾರೆ. ಒಂದು ಕಡೆ ಸ್ವಲ್ಪ ಹೆಚ್ಚಿರಬಹುದು, ಒಂದು ಕಡೆ ಸ್ವಲ್ಪ ಕಡಿಮೆಯಿರಬಹುದು. ಅದೇ ರೀತಿ ಮರ್ಯಾದಸ್ಥರೂ ಇದ್ದಾರೆ. ಆದರೆ ಇವತ್ತು ಬರುತ್ತಾ ಬರುತ್ತಾ ರಾಜಕಾರಣ ಏನಾಗಿದೆ ಎಂದರೆ ದುಡ್ಡಿದ್ದವನೇ ಸರ್ವೈವಲ್ ಆಗುವುದಕ್ಕೆ ಸಾಧ್ಯ ಎನ್ನುವಂತಾಗಿದೆ. ಅದು ಬಿಟ್ಟು ಸುಮ್ಮನೆ ಕುಳಿತುಕೊಂಡು ಹಾಗೆ ಹೋದರೆ ಅವನನ್ನು ಕ್ಯಾರೇ ಎನ್ನುವವರ್‍ಯಾರು ಜನರೂ ಕ್ಯಾರೇ ಎನ್ನುವುದಿಲ್ಲ. ಅವರ ಕಡೆ ಆಕರ್ಷಣೆಯಿರುವುದಿಲ್ಲ. ಅಂಥ ಸ್ಥಿತಿಯನ್ನು ನಾವು ತಲುಪುತ್ತಿದ್ದೇವೆ. ದುಡ್ಡಿದ್ದವರಾದರೆ, ಒಂದು ಸಲ ಸೋತರೆ, ಐದು ವರ್ಷ ಹೋಯಿತಲ್ಲಾ ಎಂದರೆ, ಹೋದರೆ ಹೋಗಲಿ, ಐದು ವರ್ಷ ಬೇಡ, ಆ ಐದು ವರ್ಷದಲ್ಲಿ ನೀಟ್‌ಆಗಿ ಮನೆಮಠ ಕಟ್ಟಿಕೊಂಡು ಇರುತ್ತೇವೆ, ಇನ್ನೊಂದು ಐದು ವರ್ಷಕ್ಕೆ ಬರುತ್ತೇವೆ ಎನ್ನುತ್ತಾರೆ. ದೇಶಪಾಂಡೆಯವರು ಹೇಳುತ್ತಿದ್ದರು ಅವರು ಈ ಕಡೆ ಕುಳಿತರೆ ನಾಳೆಯೇ ಗಣಿಗಳ ದುಡ್ಡು ನಿಂತು ಹೋಗುತ್ತದೆಯೇ? ಏಕೆಂದರೆ, ಅವರು ಬಿಸಿನೆಸ್ ಮಾಡುವವರು, ಯಾವಾಗಲೂ ಮಾಡುತ್ತಿರುತ್ತಾರೆ. ಒಂದು ಸಲ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ನನಗೆ ಹೇಳಿದರು, ನೀವು ತೆಗೆದುಕೊಳ್ಳದಿದ್ದರೆ, ಅವರೇನು ಹೊಡೆದುಕೊಳ್ಳುವುದನ್ನು ಬಿಡುತ್ತಾರೆಯೇ? ಅದನ್ನು ನೀವು ನಿಲ್ಲಿಸುವುದಕ್ಕಾಗುತ್ತದೆಯೇ ಪುಟ್ಟೇಗೌಡರೇ? ಅವರಿಂದ ತೆಗೆದುಕೊಂಡು ದೇವರು ದಿಂಡಿರಿಗಾದರೂ ಕೊಡಿ, ದೇವಸ್ಥಾನ ಕಟ್ಟುವುದಕ್ಕಾದರೂ ಧರ್ಮಕೊಡಿ ಎಂದು ಹೇಳಿದರು. ಭ್ರಷ್ಟಚಾರ ಮಾಡುವುದು ಎಲ್ಲರಿಗೂ ಸುಲಭವಲ್ಲ. ಅದರಲ್ಲೇ ಪಳಗಿ ಬಂದಿರುವವರಿಗೆ ಭ್ರಷ್ಟಾಚಾರ ಮಾಡಲು ಬರುತ್ತದೆ. ಭ್ರಷ್ಟಾಚಾರ ಮಾಡಲಿಕ್ಕೆ ಗೊತ್ತಿಲ್ಲದೇ ಇಲ್ಲದವರಿಗೆ ಜೀವ ನಡುಗುತ್ತದೆ. ಈ ದೇಶದಲ್ಲಿ ಒಬ್ಬ ಶೀಲವಂತಗೆ ಅವಳ ಶೀಲ ಎಷ್ಟು ಮುಖ್ಯವೋ ಅದೇ ರೀತಿ ಮನಸ್ಥಿತಿಯಿರುವವರಿಗೆ, ಮರ್ಯಾದೆಗೆ ಅಂಜಿ ಬದುಕುವವರಿಗೆ ಮಾನ ಮರ್ಯಾದೆ ಎನ್ನುವುದು ಬಹಳ ದೊಡ್ಡದು. ಇವತ್ತು ಭ್ರಷ್ಟಾಚಾರ ಎನ್ನುವುದು ಎಲ್ಲಾ ಇಲಾಖೆಯಲ್ಲೂ ಇದೆ. ಒಂದಲ್ಲ, ಎರಡಲ್ಲ ಅಥವಾ ಕುಮಾರಸ್ವಾಮಿಯವರು ನಾಲ್ಕೂವರೆ ತಿಂಗಳಿಂದೀಚೆಗೆ ಅಧಿಕಾರಕ್ಕೆ ಬಂದಮೇಲೆ ಮಾತ್ರ ದುಡ್ಡನ್ನು ಅಲ್ಲಿಂದ

ಹಂಚಿಲ್ಲ. ಲಾರಿ ಹೊಡೆಯುವವರು, ಅನಧಿಕೃತವಾಗಿ ಮಣ್ಣು ಹೊಡೆಯುವವರು, ಫಾರೆಸ್ಟ್‌ನಲ್ಲಿ ಹೊಡೆಯುವವರು ಇದೆಲ್ಲವೂ ಹಿಂದಿನಿಂದ ನಡೆದಿದೆ. ಆದರೆ ಎಷ್ಟರ ಮಟ್ಟಿಗೆ, ಈ ವಿಧಾನಸೌಧದಲ್ಲಿ ಕುಳಿತಂಥ ಮಂತ್ರಿಗಳು ತಮ್ಮ ಮಂತ್ರಿಗಿರಿಯನ್ನು ನಿಭಾಯಿಸುವಾಗ ಹೊಲದಲ್ಲಿ ಕಳೆ ಕೀಳುವುದನ್ನು ಬಿಟ್ಟು ಬಂದು ನಮಗೆ ಓಟು ಹಾಕಿರುತ್ತಾರಲ್ಲಾ, ಅವರಿಂದ ಹಿಡಿದು ಈ ರಾಜ್ಯದ ಜನರು ನಮ್ಮನ್ನು ಅಧಿಕಾರ ನಡೆಸಲು ಈ ಭಾಗದಲ್ಲಿ ಕೂರಿಸುತ್ತಾರಲ್ಲಾ, ಅವರೆಲ್ಲರೂ ನಮ್ಮ ಮನದಾಳದಲ್ಲಿದ್ದು ನಮಗಾಗಿ ಮತ ನೀಡಿದಂಥ ಈ ರಾಜ್ಯದ ಜನರಿಗೆ ನಮ್ಮಿಂದ ಏನಾದರೂ ಮಾಡಬೇಕು ಎನ್ನತಕ್ಕಂಥ ಕಮಿಟ್‌ಮೆಂಟ್ ಇರುವಂಥ ಮಂತ್ರಿಗಳೂ ಇಲ್ಲಿ ಇದ್ದರು, ಅವರು ಎಲ್ಲಾ ಪಕ್ಷದಲ್ಲಿ ಇದ್ದುದ್ದನ್ನು ನಾನು ನೋಡಿದ್ದೇನೆ. ಅವರ ಹೆಸರು ಹೇಳಿದರೆ ಬೇರೆಯವರಿಗೆ ಬೇಜಾರು ಆಗಬಹುದು, ಅಂಥವರು ಸರ್ಕಾರದಲ್ಲಿದ್ದರು.

ಈ ಸರ್ಕಾರದಲ್ಲೂ ನಾನು ನೋಡಿದ್ದೇನೆ. ಎಲ್ಲಾ ಪಕ್ಷಗಳಲ್ಲೂ ನಾನು ನೋಡಿದ್ದೇನೆ. ಅವರು, ಈ ರಾಜ್ಯಕ್ಕೆ ಏನಾಗಬೇಕು? ಬಡವರಿಗೆ ಏನಾಗಬೇಕು? ನಾವು ಅಲ್ಲಿಂದ ಬಂದಿರತಕ್ಕಂಥವರು ಎನ್ನುವ ಕನಿಷ್ಟ ಭಯವಿದ್ದರೂ ಕೂಡ ಜನರಿಂದ ಕನಿಷ್ಟ 50 marks ಹಾಕಿಸಿಕೊಂಡರೂ ಇನ್ನೂ 25 ಅನ್ನು ಈ ರಾಜ್ಯದ ಜನ vote ಹಾಕುವಾಗ ಪುಕ್ಕಟೆ ಹಾಕುತ್ತಾರೆ. ಆದರೆ ಅದು ಉಳಿದಿಲ್ಲ. ಇವತ್ತೇನಾಗಿದೆ ಎಂದರೆ ಗಣಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಕುಮಾರಸ್ವಾಮಿಯವರು ಬಂದಮೇಲೆ ನಾಲ್ಕೂವರೆ ತಿಂಗಳಿನಿಂದ ಈ ಗಣಿಗಾರಿಕೆ ಪ್ರಾರಂಭವಾಯಿತೆ ಅಥವಾ ಈ ಲಾರಿಗಳು ಇಷ್ಟೆಲ್ಲಾ ಹೋಗುತ್ತಿದ್ದವಲ್ಲಾ, ಈ ನಾಲ್ಕೂವರೆ ತಿಂಗಳಲ್ಲಿ ಚೈನಾದಿಂದ ತರಿಸಿದರೆ? ತರಿಸಲಿಲ್ಲ. ಇದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ದಂಧೆ ನಡೆಯುತ್ತಿರುವುದು ನಿಜ. ಅದರಲ್ಲೇನೂ ಅನುಮಾನವಿಲ್ಲ. ಯಾವ ಮರ್‍ಯಾದಸ್ಥ ಬೇಡವೆಂದರೂ ಕೂಡ ಇನ್ನೊಬ್ಬ ಯಾವನೋ ಮಧ್ಯೆ ಇರುವವನು, ಚಮಚಾಗಿರಿ ಮಾಡುವವನು ಅಥವಾ ನಮ್ಮನ್ನು ತೋರಿಸಿ, ಎಷ್ಟೋ ಜನ ಇಲ್ಲಿರುವ ಶಾಸಕರನ್ನು ತೋರಿಸಿ, ಇಲ್ಲಿರುವ ಶಾಸಕರ letter ತೋರಿಸಿ, ಮಂತ್ರಿಗಳ letter ತೋರಿಸಿ ದುಡ್ಡು ಮಾಡಿಕೊಂಡು ನಮ್ಮ ಜೊತೆ ಓಡಾಡುವವರು ಈ ದೇಶದ ರಾಜಕಾರಣ ಮಾಡುವವರಿಗಿಂತ ಇವರ ಜೊತೆ ಓಡಾಡುತ್ತಾರಲ್ಲಾ ಈ ಬೆಂಗಳೂರಿನಲ್ಲಿ ಅವರ ಬಂಗಲೆಗಳು ಬಹಳ ಇವೆ. ಇವರು ಇಂಥವರ ಜೊತೆಗೆ ಇದ್ದರು, ಇವರು ನಿಜಲಿಂಗಪ್ಪನವರ ಜೊತೆ, ಇವರು ದೇವರಾಜ ಅರಸುರವರ ಜೊತೆ, ದೇವೇಗೌಡರ ಜೊತೆ ಇದ್ದರು, ಪಟೇಲರ ಜೊತೆ ಇದ್ದರು ಎನ್ನುವುದು. ಅವರದು ಯಾವುದೇ ಜಾಸ್ತಿ ಬಂಗಲೆಗಳು ಕಾಣಿಸುತ್ತಿಲ್ಲ. ದೇವರಾಜ ಅರಸುರವರ ಬಂಗಲೆಯೂ ಕಾಣುತ್ತಿಲ್ಲ.

ವೀರೇಂದ್ರ ಪಾಟೀಲರ, ಮತ್ತೆ ಇನ್ಯಾರ ಬಹಳ ಜನರ ಬಂಗಲೆಯೂ ಕಾಣುತ್ತಿಲ್ಲ. ನಾನೇಕೆ ಈ ಮಾತನ್ನು ಹೇಳುತ್ತೇನೆಂದರೆ ನಾವು ಭ್ರಷ್ಟರಲ್ಲದಿದ್ದರೂ ಭ್ರಷ್ಟರನ್ನು ಮಾಡುವಂಥ ಒಂದು ದೊಡ್ಡ ಕೂಟವಿದೆ. ವಿಧಾನಸೌಧಕ್ಕೆ ಬನ್ನಿ. ನಮಗೆ vote ಹಾಕಿರುವವರನ್ನು ಆ gate ನಲ್ಲಿಯೇ ಬಿಡುವುದಿಲ್ಲ. ಕಷ್ಟ. ನಮ್ಮ ಜೊತೆಗೆ ಬಂದರೆ ಬರಬಹುದು. ಇಲ್ಲವಾದರೆ ಬರುವುದಕ್ಕೆ ಆಗುವುದಿಲ್ಲ. ಬರುವುದು ಯಾರು ಗೊತ್ತೇ? ನೀಟಾಗಿ ನಿಮ್ಮ gate ನಲ್ಲಿರುವ watchman ನಿಂದ ಹಿಡಿದು ಎಲ್ಲರಿಗೂ tips ಕೊಟ್ಟುಕೊಂಡು ಎಲ್ಲರನ್ನೂ ತಯಾರಿ ಮಾಡಿಕೊಂಡು MLA ಗಳನ್ನು ಬಿಡುವುದು late ಆದರೂ ಅವರನ್ನು ಮೊದಲೇ ಅವರು ಹಾಕಿರುವ dress ನಿಂದ ಬಿಡುತ್ತಾರೆ. ಸರ್, ಅಂಥವರನ್ನು ಕಂಡವರ ಹಾಗೆ ನಾವು ಮಾತನಾಡಲೇಬೇಕಲ್ಲಾ. ಇಲ್ಲವೆಂದರೆ ನಮ್ಮನ್ನು ಅಹಂಕಾರಿ ಎಂದು ಹೇಳುತ್ತಾರಲ್ಲಾ. ಏನೆಂದು ಕೇಳಿದರೆ, ಸರ್, 'ಅದೇ, ಒಂದುಚೂರು ಒಂದು ಮಾತಿದೆ. ಕುಮಾರಣ್ಣರವರಿಗೆ ಹೇಳಿ ಸರ್. ಯಡಿಯೂರಪ್ಪನವರಿಗೆ ಹೇಳಿ ಸಾರ್. ಕೃಷಿ ಸಚಿವರಿಗೆ ಹೇಳಿ ಸರ್, ಅಶೋಕ್‌ರವರಿಗೆ ಹೇಳಿ ಸರ್ ಎಂದು ಹೇಳುತ್ತಾರೆ. ಅಷ್ಟು letter ಸಿಕ್ಕಿದರೆ ಸಾಕು. ಅವರು ಇನ್ನೆಲ್ಲಾ case worker ಗೂ ನಿಮ್ಮಲ್ಲಿಯೇ multi storied building ಇದೆಯಲ್ಲಾ, ಎಲ್ಲರನ್ನೂ ಅವರು ಗುಲ್ಬರ್ಗಾ ರಾಯಚೂರಿಗೆ transfer ಮಾಡಿಸುತ್ತಾರೆ. ಪಾಪ, ಅವರು ಮಾತ್ರ ಅಲ್ಲಿಯೇ ಇದ್ದಾರೆ. ಅವರೆಲ್ಲಾ ಚೆನ್ನಾಗಿ ಇಲ್ಲಿಯ ವ್ಯವಸ್ಥೆಗೆ ಹೊಂದಿಕೊಂಡಿದ್ದಾರೆ. ಎಲ್ಲಾ ತರಹದ ದಂಧೆ ನಡೆಯುತ್ತದೆ. ಅದೇ ರೀತಿ ಇವತ್ತು ಏನಾಗಿದೆಯೆಂದರೆ ಗಣಿಯಲ್ಲೂ ಕೂಡ ಹೊಸದಾಗಿ ನಡೆದಿದೆ, ಇಷ್ಟು ತೆಗೆದುಕೊಂಡಿದ್ದಾರೆ, ಯಾರು ಬಿಟ್ಟಿದ್ದಾರೆ, ಯಾರು ಕೊಟ್ಟಿದ್ದಾರೆನ್ನುವುದಕ್ಕೆ ಸಾಕ್ಷ್ಯಾಧಾರಗಳು ಇಲ್ಲ. ಒಂದು ವೇಳೆ ಈ ಸರ್ಕಾರದಲ್ಲೇ ತೆಗೆದುಕೊಂಡಿದ್ದರೆ ಅದಕ್ಕೆ ಹಳೇ ಸರ್ಕಾರದಲ್ಲೂ ಕೂಡ ಎಲ್ಲಾ ಪಾಲುದಾರರೇ ಅಲ್ಲವೇ? ಅವರು practice ಮಾಡಿದ್ದರೆ ಇವರು ಕೊಡುತ್ತಾರೆ. ಮುಂದೆ ಬಂದವರಿಗೂ ಕೂಡ ಹಳೆಯದು ಇಷ್ಟು ಕೊಡುತ್ತಿದ್ದೆ ಸರ್, ಈಗಿಷ್ಟು ಕೊಡುತ್ತೇವೆ ಸರ್ ಎಂದು ಹೇಳುತ್ತಾರೆ. ಇದು ಎಲ್ಲಾ ಕಡೆ ಮಾಮೂಲಿಯಾಗಿದೆ. ನಿಜ. ಏಕೆಂದರೆ ನಾನು ಕುಮಾರಸ್ವಾಮಿಯವರ ಬಗ್ಗೆ ಒಂದು ಮೆಚ್ಚುಗೆಯ ಮಾತನ್ನು ನಮ್ಮ ಜಿಲ್ಲೆಯವರು ಎಂತಲೋ ಅಥವಾ ಕುಮಾರಣ್ಣನವರು ಹತ್ತಿರದವರೆಂತಲೋ ಈ ಮಾತು ಹೇಳುವುದಿಲ್ಲ. ಏಕೆಂದರೆ ಅವರು ಮೊದಲನೇ ಸಲ ಶಾಸಕರಾದವರು. ಇವರೆಲ್ಲಾ ಮುಖ್ಯಮಂತ್ರಿ ಮಾಡುತ್ತೇವೆಂದು ಓಡಾಡುವಾಗ ನಾನು sign ಹಾಕಲಿಲ್ಲ. ಕೊನೆಯಲ್ಲಿ ನಾನು ಕೈ ಎತ್ತಿದವನು ಅಷ್ಟೆ. ಇಲ್ಲಪ್ಪಾ, ನಾನು ನನ್ನ

ಜೀವ ಹೋದರೂ ದೇವೇಗೌಡರು ಹೇಳದೆ ಹಾಕುವುದಿಲ್ಲ ಎಂದೆ. ಅಧಿಕಾರ ಚೆನ್ನಾಗಿ ನಡೆಸುತ್ತಾರೋ ಇಲ್ಲವೋ ಎನ್ನುವ ಶಂಕೆ ಮನಸ್ಸಿನೊಳಗಡೆ ಇತ್ತು. ಏಕೆಂದರೆ 25–30–40 ವರ್ಷಗಳ ರಾಜಕೀಯ ಮಾಡಿರುವವರು ಈ ಜಾಗದಲ್ಲಿ ಕೂರುವಾಗ ಬಹಳ ತೊದಲಿಸಿ ಕಷ್ಟದಿಂದ ನಿರ್ವಹಣೆ ಮಾಡಿದ್ದಾರೆ. ಆ ಅವಕಾಶವೂ ಸಿಕ್ಕಿಲ್ಲ. ಇವರ ಯೋಗಾನುಯೋಗ. ಆ ಅವಕಾಶ ಇವರಿಗೆ ಸಿಕ್ಕಿದೆ. ಸ್ವಲ್ಪ ಈ ಮನುಷ್ಯನ ಹೃದಯ ದೊಡ್ಡದು. ಹೋದ ತಕ್ಷಣ sign ಹಾಕುತ್ತಾರೆ. ಥಟ್ ಅಂತ ಹೋದವಕ್ಕೆಲ್ಲಾ sign ಹಾಕುತ್ತಾರೆ. ದುರುಪಯೋಗ ಮಾಡಿಕೊಳ್ಳುವಂಥ ಅವಕಾಶಗಳೂ ಇರುತ್ತವೆ. ಆದರೆ ಅವರು ಮುಖ್ಯಮಂತ್ರಿಯಾಗಿರುವುದೇ ಅವರ ಹೃದಯ ವೈಶಾಲ್ಯತೆಯಿಂದ. ಮಾನ್ಯ ಧರ್ಮಸಿಂಗ್‌ರವರಿಗೆ ಹೃದಯ ವೈಶಾಲ್ಯತೆ ಇತ್ತು. ಪಾಪ, ಅವರಿಗಿಂತಲೂ ಇವರ ಕೈ ಇನ್ನೂ ಒಂದು ಚೂರು ಮುಂದೆ ಅದು ನಿಜ. ಇನ್ನು ನಮ್ಮ ಚೆನ್ನಿಗಪ್ಪನವರ ಬಾಯಿ ದೊಡ್ಡದು. ಇವರು ಶಾಸಕರಾಗಿದ್ದಾಗಲೂ ಹೊಲದಲ್ಲಿ ಹಳ್ಳಿಯವರನ್ನೆಲ್ಲಾ ಮಾತನಾಡಿಸುತ್ತಾರಲ್ಲಾ ಹಾಗೆಯೇ ಎನ್ನುವ ಒಂದು ರೀತಿಯ ಹಳ್ಳಿಯ ಭಾವನೆಯನ್ನು ಇಟ್ಟುಕೊಂಡು ಮಾತನಾಡುವಂಥ ಮನುಷ್ಯ. ಅಂದಾಕ್ಷಣಕ್ಕೆ ಅವರ ಇಲಾಖೆಯಲ್ಲಿ ಏನೂ ನಡೆದಿಲ್ಲ ಎಂದು ನಾನು ಹೇಳುವುದಿಲ್ಲ. ಇಲ್ಲಿ ನಾವು ಈ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತೇವಲ್ಲಾ, ಇದರ ಬಗ್ಗೆ ಎಲ್ಲಾ ಮಾತನಾಡುವಾಗ ಅವರವರ ಹೃದಯ ಮುಟ್ಟಿ ಭ್ರಷ್ಟಾಚಾರ ಮಾಡಿದ್ದೇವೆಯೇ ಅಥವಾ ಇಲ್ಲವೇ ಎನ್ನುವುದನ್ನು ಅವರವರೇ ತೀರ್ಮಾನ ಮಾಡಿಕೊಳ್ಳಬೇಕು. ಏಕೆಂದರೆ, ಇನ್ಯಾರೋ ಚೆನ್ನಿಗಪ್ಪ ಆ ಕಡೆ ಹೋಗಿ ಕುಳಿತುಕೊಂಡರೆ ಅವನೂ ತೋಳೇರಿಸಿ ಜೋರಾಗಿ ಮೇಲ್ಗಡೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿರುವವರು, ಈ ಕಡೆ ಪತ್ರಿಕೆಯವರೆಲ್ಲಾ ಒಂದಿಷ್ಟು ರಾಜ್ಯಕ್ಕೆ highlight ಮಾಡಿದಾಕ್ಷಣಕ್ಕೆ ಅಲ್ಲ. ಜನರೆಲ್ಲಾ ಅಳೆಯುತ್ತಾರೆ. ಆರು ತಿಂಗಳೊಳಗಡೆ ನಾವು ಕೇವಲ ಎಂ.ಎ. ಮಾಡಿದರೆ ಈ ದೇಶದ ಜನ ಇವತ್ತು ಎಂ.ಎ. ಪಿಹೆಚ್.ಡಿ. ಮಾಡಿದ್ದಾರೆ. ಪತ್ರಿಕೆ ಇದೆ, ಟಿ.ವಿ. ಇದೆ, ಎಲ್ಲದರ ಮೂಲಕ ನೋಡಿ ಹಳ್ಳಿಯಿಂದ ಐದು ಸಲ ಇಲ್ಲಿಗೆ ಬಂದವನು ಮಂತ್ರಿಯ ನಡವಳಿಕೆ, ಇವನು ನಮ್ಮನ್ನು ಹೊರಗಡೆ ಕೂರಿಸಿ ಪಾಪ, ಒಳಗಡೆ ಯಾರ ಹತ್ತಿರ ಮಾತನಾಡುತ್ತಿರುತ್ತಾನೆ, ಯಾವನನ್ನು ಕರೆದುಕೊಂಡು ಯಾವ ಹೋಟೆಲ್‌ಗೆ ಕರೆದುಕೊಂಡು ಹೋಗುತ್ತಿರುತ್ತಾನೆ ನಮ್ಮನ್ನು ಇಲ್ಲಿ footpath hotel ನಲ್ಲಿ ಬಿಟ್ಟು ಇವೆಲ್ಲವನ್ನೂ ನೋಡಿ ನಮ್ಮ ಹಣೆಬರಹವನ್ನು ಚೆನ್ನಾಗಿ ಬರೆದಿದ್ದಾನೆ. ಬರೆಯುತ್ತಾರೆ. ಆದರೆ ನಾವಿಲ್ಲಿ ಕುಳಿತುಕೊಂಡು ನೀವು ಸರಿಯಿಲ್ಲ ಅನ್ನುವುದಕ್ಕೆ ನಾನು ಆಗಲೇ ಹೇಳಿದ ಹಾಗೆ ನಾವು ಹೇಳುವವರೂ ಕೂಡ ಎಲ್ಲೋ ಒಂದು ಕಡೆ ನಮಗೂ ಆ ಸೋಂಕು ಆ ಭ್ರಷ್ಟಾಚಾರದ ಸೋಂಕು ಅಂಟಿಬಿಟ್ಟಿದೆ. ಈ ರಾಜಕೀಯ ಎಂದು

ಬಂದರೆ ಶಿಸ್ತು ಆಗಿ ಇರುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಇವತ್ತೇನು ಈ ಭ್ರಷ್ಟಾಚಾರದ ಆಪಾದನೆ ಕುಮಾರಸ್ವಾಮಿ, ಚೆನ್ನಿಗಪ್ಪನವರ ಮೇಲೆ ಅಥವಾ ಈ ಸರ್ಕಾರದ ಮೇಲೆ ಯಡಿಯೂರಪ್ಪನವರ ಮೇಲೆ ಬಂದಿದೆ, ಇದಕ್ಕೆ ಹಲವಾರು ಕಾರಣಗಳಿವೆ. ನಾನೊಂದಷ್ಟು, ಒಪ್ಪುತ್ತೇನೆ. ಏಕೆಂದರೆ, ನಮ್ಮ ಮಿತ್ರ ಪಕ್ಷವಾದರೂ ಕೂಡ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ನನಗೂ ಕೂಡ ಅದು ಸತ್ಯ ಹೇಳಬೇಕೆಂದರೆ ಯಡಿಯೂರಪ್ಪನವರ ಪಕ್ಷದ ಆಂತರಿಕ ಜಗಳ ಇದಕ್ಕೆ ಬಹುಶಃ ಕಾರಣವಿರಬಹುದು. ಎಲ್ಲಾ ಪಕ್ಷಗಳಲ್ಲೂ ಆಂತರಿಕ ಜಗಳವಿದೆ. ಕೇವಲ ಯಡಿಯೂರಪ್ಪನವರಿಗೆ ಇದೆ ಎನ್ನುವ ಮಾತು ಹೇಳುವುದಿಲ್ಲ. ಕಾಂಗ್ರೆಸ್‌ನಲ್ಲಿ ಇಲ್ಲವೇ? ಶಿವಕುಮಾರ್ ಸಾಹೇಬರು ಏನಾದರೂ ಮಾಡಿ ಅವರೂ ಒಂದು ಕಡೆ ಈ chair ಹಿಡಿಯಬೇಕು, ಇನ್ನೆಲ್ಲೋ ಖರ್ಗೆ ಸಾಹೇಬರು ಹಿಡಿಯಬೇಕು, ದೇಶಪಾಂಡೆಯವರು ಹಿಡಿಯಬೇಕೆನ್ನುವ ಆಸೆ ಎಲ್ಲರಿಗೂ ಇರುತ್ತದೆ. ಆದ್ದರಿಂದ, ನಮ್ಮನಮ್ಮದೇ ಆದ ಸಣ್ಣ ಗುಂಪು ಇರಬಹುದು. ಅದಕ್ಕೆ ಶಕ್ತಿ ಇಲ್ಲ. ಇಲ್ಲ ದೊಡ್ಡ ಗುಂಪು ಇರಬಹುದು. ಆ ತರಹ ಬಿಜೆಪಿಯಲ್ಲೂ ಕೂಡ ಎರಡೋ ಮೂರೋ ಗುಂಪು ಇರುವುದನ್ನು ಅಥವಾ ನಮ್ಮಲ್ಲೂ ಕೂಡ ಆ ತರಹದ ಗುಂಪು ಇದೆ. ಆದ್ದರಿಂದ ಅಲ್ಲಿಂದ ಬಹುಶಃ ಇದು ಪ್ರಾರಂಭವಾಗಿರಬಹುದು. ಏಕೆಂದರೆ, ಒಬ್ಬ MLC ಹೇಳಬೇಕಾಗಿದ್ದರೆ ಅವನು ಅಲ್ಲೇ ಜೊತೆಯಲ್ಲಿಯೇ ಪೊಲೀಸ್ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು transfer ಮಾಡಿಲ್ಲ ಎಂದು ಹೇಳಿದ್ದಾನೆ. ಅದರರ್ಥ ಅವನದೂ ಸ್ವಾರ್ಥ ತಾನೇ? ನೇರವಾಗಿ ಅಲ್ಲಿ ಸ್ವಾರ್ಥ ಕಾಣುತ್ತದೆ. ಭ್ರಷ್ಟಾಚಾರ ಎನ್ನುವುದು, ಶಿವಕುಮಾರ ಸಾಹೇಬರು ಹೇಳಿದರು, ನಮಗೆ ಭಯವಿತ್ತು ಹೇಗೆ ತೋರಿಸುತ್ತಾರೋ, ಹೇಗೆ ತೋರಿಸುತ್ತಾರೆಂಬ ಕುತೂಹಲ ಒಂದು ಕಡೆ. ಸಿನಿಮಾ ತೋರಿಸಿದ ಹಾಗೆ ಎಲ್ಲವನ್ನೂ ಟಿ.ವಿ. ತಂದು ತೋರಿಸುತ್ತಾರೆನ್ನುವ ಕುತೂಹಲವಿತ್ತು. ತೋರಿಸಿಬಿಡಲಪ್ಪ..............

ಶ್ರೀ ಡಿ.ಕೆ. ಶಿವಕುಮಾರ್ : ನೀವು Chief Minister ಕೈಯಲ್ಲಿ CBI enquiryಗೆ order ಮಾಡಿಸಿ. ನಿಮಗೆ, CBI ಗೆ, ರಾಜ್ಯಕ್ಕೆ ರಾಷ್ಟ್ರಕ್ಕೆ, ಎಲ್ಲರಿಗೂ ನಾವು ತೋರಿಸುತ್ತೇವೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಯಾವ CBI ಮಾಡಿದರೂ ಏನೂ ಇಲ್ಲ. ಸುಮ್ಮನೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಆರ್. ಅಶೋಕ್ : ಇನ್ನೂ side reel ತೋರಿಸಿಲ್ಲ........

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಅಗ್ನಿಪರೀಕ್ಷೆಗೆ ಒಳಪಟ್ಟು ಹೊರಬೇಕೆನ್ನುವುದಾದರೆ Chief Minister ಹೇಳಿದ್ದಾರೆ. ನನಗೆ ನಿಮ್ಮ ಯಾರ ಬೆಂಬಲವೂ ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ..... ಬೆಂಬಲ ಬೇಡವೆಂದೇನೂ ಹೇಳಲಿಲ್ಲ.

(ಗೊಂದಲ)

ಡಾ|| ಕೆ. ಅನ್ನದಾನಿ : ಯಾವ ಶಾಸಕರ ಬೆಂಬಲವೂ ಬೇಡವೆಂದು ಅವರು ಹೇಳಲಿಲ್ಲ. ಅದನ್ನು ನೀವು ಹುಟ್ಟುಹಾಕಿದ್ದೀರಾ.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ : ಸಿಬಿಐ ನವರಿಗೆ ತೋರಿಸುವುದಕ್ಕೆ ಮೊದಲೇ ಈ ಸದನಕ್ಕೆ ಸ್ವಲ್ಪ ಹಾವು ಬಿಡಿ. ಹೇಗಿದೆ ಹಾವು ನೋಡೋಣ. ಆ ಮೇಲೆ CBI ಗೆ ಕೊಟ್ಟರಾಯಿತು ಶಿವಕುಮಾರ್ ಸಾಹೇಬರೇ.

ಶ್ರೀ ಆರ್. ಧ್ರುವನಾರಾಯಣ್ : ಜನಾರ್ಧನ ರೆಡ್ಡಿಯವರು ಬಿಟ್ಟಿರುವ ಹಾವಿದೆಯಲ್ಲಾ, ...

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಪುಂಗಿ ಮಡಗಿದ್ದೇವೆ. ಊದುತ್ತೇವೆ. ಏನೂ ತಲೆಕಡಿಸಿಕೊಳ್ಳಬೇಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಆದ್ದರಿಂದ ಬಹು ಮುಖ್ಯವಾದ ಬೇಡಿಕೆ ಮೇಲೆ ಚರ್ಚೆ ಮಾಡುವುದಿತ್ತು. ರಾಜ್ಯದ ಇನ್ನೂ ಬೃಹತ್ ಸಮಸ್ಯೆಗಳಿದ್ದವು. ಅದನ್ನೆಲ್ಲಾ ನಾವು ಬದಿಗಿಟ್ಟು ಈ ಒಂದು ಸಮಯವನ್ನು ಬಳಸಿಕೊಂಡಿದ್ದೇವೆ. ಬಳಸಿಕೊಂಡಿರುವುದು ತಪ್ಪೆಂದು ಹೇಳುವುದಿಲ್ಲ. ಎಷ್ಟು ಬೇಕೋ ಅಷ್ಟು ಬಳಸಿಕೊಳ್ಳಬೇಕು. ಏಕೆಂದರೆ, ಯಾರಾದರೊಬ್ಬರ ಆಪಾದನೆ ಬಂದಾಗ ಅದನ್ನು ಹಾಗೆಯೇ ಬಿಟ್ಟುಕೊಂಡು ಹೋಗಲು ಆಗುವುದಿಲ್ಲ. ವಿರೋಧ ಪಕ್ಷದವರು ಹೇಳಿದ್ದನ್ನೆಲ್ಲಾ ಸಾರಾಸಗಟಾಗಿ ತಳ್ಳಿಹಾಕಿ ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ವಿರೋಧಿಗಳ ಮಾತನ್ನು ಅತ್ಯಂತ ಗಂಭೀರವಾಗಿ ನಾವು ಪರಿಗಣನೆ ಮಾಡಿದಾಗ ಈ ಸರ್ಕಾರದಲ್ಲಿರತಕ್ಕಂಥ ನಮ್ಮ ದೋಷವನ್ನೂ ಕೂಡ ತಿದ್ದಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಅವರೆಲ್ಲಾ ಹಿರಿಯರು ಹೇಳುವಾಗ, ಬಹಳ ಚಿಕ್ಕ ವಯಸ್ಸಿನಲ್ಲಿಯೇ ನೀವು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ. ಬಹಳ ದಿವಸ ನೀವು ರಾಜಕಾರಣದಲ್ಲಿರಬೇಕು ಎಂದು ಹೇಳುತ್ತಿದ್ದರು. ಇದನ್ನು ಅಗ್ನಿಪರಿಕ್ಷೆ ಒಳಪಡಿಸಿ ಎಂಬ ಮಾತನ್ನು ಹೇಳುತ್ತಿದ್ದರು. ಅಗ್ನಿ

ಪರೀಕ್ಷೆ ಅನ್ನುವುದಕ್ಕಿಂತ ಅಂಥದ್ದು ಏನೇ ಇದ್ದರೂ ಕೂಡ ವಿರೋಧ ಪಕ್ಷಗಳು ಹೇಳಿದಾಗ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆಲವರು ಇಲ್ಲಿ ಜಗಳ ತೆಗೆಯುತ್ತಾರೆ. ನಾನು ನಿನ್ನೆಯೇ ಹೇಳಿದೆ. ನಾನೇನು ಹೇಳುತ್ತೇನೆಂದರೆ, ಒಬ್ಬರನ್ನು ಹೇಳುವುದಕ್ಕೆ ಬಿಡಿ. ಬಿಟ್ಟರೆ ಅವರೇನು ಹೇಳುತ್ತಾರೆನ್ನುವುದನ್ನು ಕೇಳಿ ಅವರ ತಪ್ಪಿದರೆ ಅವರೇ ಕೆಟ್ಟವರೆಂದು ದೇಶಕ್ಕೆ project ಆಗುತ್ತಾರೆ. ನಾವ್ಯಾಕೆ ಅದಕ್ಕೆ ಜಗಳವಾಡಬೇಕು? ಆದ್ದರಿಂದ, ವಿರೋಧ ಪಕ್ಷದ ಮುಖಂಡರು ನಿಮಗೆ ಹೇಳಿರುವುದು ಏನು ಗೊತ್ತೇ? ನಾವು ಮಾಡಿಲ್ಲ. ನೀವು ಮಾತ್ರ ಮಾಡಿದ್ದೀರಾ ಎಂದು ಹೇಳಿಲ್ಲ. ನಮ್ಮ ಪರಿಪಾಠವನ್ನು ಬಿಟ್ಟುಬಿಡಿ. ನಾವು ಮಾಡುತ್ತಿದ್ದ ತಪ್ಪು ದಾರಿಯನ್ನು ಬಿಟ್ಟು ಅಲ್ಲೇನಾದರೂ ಅವ್ಯವಹಾರ ಇದ್ದರೆ ಅದನ್ನು ಬದಿಗಿಟ್ಟು ನೀವು ಬದಲಾವಣೆ ಮಾಡಿಕೊಳ್ಳಿ ಹೊಸಬರು ಎಂದು ಹಿರಿಯರಾಗಿ ಅವರು ನಿಮಗೆ ಮಾರ್ಗದರ್ಶನ ಮಾಡಿದ್ದಾರೆ. ಖಂಡಿತ ನಿಮಗೆ ಆ ಚಾಕಚಕ್ಯತೆ ಇದೆ. ನಿಮ್ಮ ಮಂತ್ರಿ ಮಹೋದಯರೂ ಕೂಡ ಒಂದು ರೀತಿ ಆತ್ಮಾವಲೋಕನ ಮಾಡಿ ಈ ಸರ್ಕಾರಕ್ಕೆ ಈ ಅಧಿಕಾರ ಶಾಶ್ವತವಲ್ಲ, ಬಹಳ ಜನ ಇದ್ದಾರೆ. ಎಲ್ಲರಿಗೂ ಅಧಿಕಾರ ಸಿಗುವುದಿಲ್ಲ ಕುಮಾರಣ್ಣನವರೇ. ನೀವು ಕುಳಿತಿರುವ ಜಾಗದಲ್ಲಿ ಕುಳಿತುಕೊಳ್ಳುವುದಕ್ಕೆ ಅದೆಷ್ಟು ಮಾಯ ಮಾಟ ಮಂತ್ರ ಮಾಡಿಸಿ ಯಾವ್ಯಾವ ದೇವರಿಗೆ ಕೈಮುಗಿದರೂ ಅವರಿಗೆಲ್ಲಾ ಆಗಿಲ್ಲ. ದೇವೇಗೌಡರು ಮಾಡಿದ ಪ್ರಯತ್ನ, ಅವರ ಸುಕೃತವೋ ನಿಮ್ಮ ಪ್ರಯತ್ನವೋ ನಿಮ್ಮ ತಾಯಿಯ ಸುಕೃತವೋ ನಿಮ್ಮೆಲ್ಲಾ ಗೆಳೆಯರ ಬೆಂಬಲವೋ ನೀವು ಆ ಜಾಗದಲ್ಲಿ ಬಂದು ಕುಳಿತಿದ್ದೀರಿ. ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿದ್ದು ಅವರಿಗೆ ಅವರದೇ ಆದಂಥ ಅಪಾರ ಅನುಭವವಿದೆ. ಅವರ ಗೆಳೆಯರು, ಅವರ ಬಂಧುಗಳೂ ಕೂಡ ಟೊಂಕ ಕಟ್ಟಿ ನಿಮ್ಮ ಪರವಾಗಿ ನಿಂತಿದ್ದಾರೆ. ಸಣ್ಣ ಪುಟ್ಟ ದೋಷಾರೋಪಣೆಗಳು ಇವೆಲ್ಲಾ ಬಂದೇ ಬರುತ್ತವೆ. ಅಂದಾಕ್ಷಣಕ್ಕೆ ಸಾರಾಸಗಟಾಗಿ ನಾವು ದೇವರು, ಹರಿಶ್ಚಂದ್ರರು ಎಂದು ಹೇಳಿ ನೀವು ಭಾವಿಸಬಾರದು. ನೀವು ದಯಮಾಡಿ ಅದನ್ನು ಗಂಭೀರವಾಗಿ ಪರಿಗಣನೆ ಮಾಡಿ. ಸರ್ಕಾರದ ಲೋಪ-ದೋಷಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿ. ಹಿಂದಿನ ಸರ್ಕಾರಗಳು ಮಾಡಿದಂಥ ಯಾವುದೇ ಧೋರಣೆಯಲ್ಲಿ ಬದಲಾವಣೆ ಮಾಡಿಕೊಳ್ಳುವಂಥ ತಪ್ಪು ನೀತಿಗಳಿದ್ದರೆ, ಅದನ್ನು ಬದಲಾವಣೆ ಮಾಡಿಕೊಂಡು ಹೋಗಬೇಕು. ಇವತ್ತೇನಾಗಿದೆ ಎಂದರೆ, ಕಲ್ಲು ಹೊಡೆಯುವರು, Mines ಹೊಡೆಯುವವರನ್ನು ನೀವೇನೂ ಬೇಡ, ನಮ್ಮ ಹಾಸನ-ಮಂಗಳೂರಿನ road ನಲ್ಲಿ ಹೋಗುವ Lorryಯನ್ನು ನೀವು ನೋಡಿದರೆ ಇದೇನು ಕೆಪ್ಪೆ ಮಣ್ಣನ್ನು ತುಂಬಿಕೊಂಡು Chinaಕ್ಕೆ ಮಾರುವುದಕ್ಕೆ ಹೋಗುತ್ತಿದ್ದಾರೋ? ಏನೋ? ಗೊತ್ತಿಲ್ಲ,

ಅಷ್ಟರಮಟ್ಟಿಗೆ Lorryಗಳ ಹಿಂದು ಹಿಂದೇ ಹೋಗುತ್ತದೆ. ದೊಡ್ಡ ವ್ಯವಹಾರವೆಂದಾಗ ಅಲ್ಲಿ ದಂಧೆ ನಡೆದೇ ನಡೆಯುತ್ತದೆ. ದಯಮಾಡಿ, ಇದನ್ನು ತಪ್ಪಿಸಲಿಕ್ಕೆ, ಸರಿಪಡಿಸಲಿಕ್ಕೆ ನೀವು ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆನ್ನತಕ್ಕಂಥ ಮಾತನ್ನು ಹೇಳಿ ಇವತ್ತು ನಾನು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮ್ಮೆಲ್ಲರಿಗೆ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಪುಟ್ಟೇಗೌಡರು ಮಾತನಾಡಿದ್ದನ್ನು ನಾನು ಸೂಕ್ಷ್ಮವಾಗಿ ಕೇಳಿದೆ. ಅನೇಕ ವಿಷಯಗಳನ್ನು ನಾನು ಒಪ್ಪುತ್ತೇನೆ. ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲೇನಾಗುತ್ತಿದೆ ಎಂಬ ಬಗ್ಗೆ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಎಲ್ಲಾ ಕಡೆ, ಎಲ್ಲಾ ರಂಗದಲ್ಲಿ ಅಂದರೆ ರಾಜಕಾರಣದಲ್ಲಿ, ಆಡಳಿತ ವರ್ಗದಲ್ಲಿ ಅಧಿಕಾರಿಗಳು, ಪತ್ರಿಕಾ ರಂಗ ಎಲ್ಲರೂ ಭ್ರಷ್ಟರೆಂದು ನಾನು ಹೇಳುವುದಿಲ್ಲ. ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ, ಇವರ ಮಧ್ಯೆದಲ್ಲಿ ಒಳ್ಳೆಯವರನ್ನು ಗುರುತಿಸುವಂಥ ಪರಿಸ್ಥಿತಿಯಲ್ಲಿ ನಾವಿಲ್ಲ. ಎಲ್ಲರ ಮಧ್ಯದಲ್ಲಿ ಒಳ್ಳೆಯವರಿದ್ದಾಗ ಕೆಟ್ಟವರು ಜಾಸ್ತಿ ಕಾಣುತ್ತಾರೆ ಬಿಟ್ಟರೆ ಒಳ್ಳೆಯವರೇನೂ ಜಾಸ್ತಿ ಕಾಣುವುದಿಲ್ಲ. ಎಲ್ಲರೂ ಭ್ರಷ್ಟರಾಗಿಯೇ ಕಾಣುತ್ತಿದ್ದಾರೆ. ಅದಕ್ಕೋಸ್ಕರ, ಇದನ್ನು ಹೋಗಲಾಡಿಸಲಿಕ್ಕಾಗಿಯೇ ಈ ಚರ್ಚೆ. ಪತ್ರಿಕೆಯಲ್ಲಿ ಬಂದಂಥ ವಿಷಯದ ಬಗ್ಗೆ ಚರ್ಚೆ ಇಲ್ಲ. ಪತ್ರಿಕೆಯಲ್ಲಿ ಮಾನ್ಯ ಜನಾರ್ಧನ ರೆಡ್ಡಿಯವರು ಕೊಟ್ಟಂಥ ಹೇಳಿಕೆ ಬಗ್ಗೆ ಚರ್ಚೆ. ಕೇವಲ ಪತ್ರಿಕೆಯವರು ಬರೆದಿದ್ದರೆ ಇಲ್ಲಿ ಚರ್ಚೆಯಾಗುತ್ತಿರಲಿಲ್ಲ. ಈ ವಿಷಯ ಕೇವಲ ಪತ್ರಿಕೆಯಲ್ಲಿ ಬಂದಿದ್ದರೆ ಈ ಸದನದಲ್ಲಿ ಇಷ್ಟು ದೊಡ್ಡದಾಗಿ ಚರ್ಚೆಯಾಗುತ್ತಿರಲಿಲ್ಲ. ಪತ್ರಿಕೆಯಲ್ಲಿ ಮಾನ್ಯ ಜನಾರ್ಧನ ರೆಡ್ಡಿಯವರೇ ಸ್ವತಃ ಹೇಳಿಕೆ ಕೊಟ್ಟಿದ್ದರಿಂದ ಈ ಚರ್ಚೆ ಪ್ರಾರಂಭವಾಗಿದೆ. ಅದಕ್ಕೆ ಪತ್ರಿಕೆಯಲ್ಲಿ ಬಂದಿದ್ದನ್ನು ಸಂಪೂರ್ಣವಾಗಿ ತಳ್ಳಿ ಹಾಕಲಿಕ್ಕೆ ಕೇವಲ ಒಂದು ಪತ್ರಿಕೆಯಲ್ಲಿ ಬಂದದ್ದೂ ಅಲ್ಲ. ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಸುದ್ದಿ ಮಾಧ್ಯಮದಲ್ಲಿ, electronic media ದಲ್ಲಿ ಬಂದಿದೆ. ಆದ್ದರಿಂದ, ಈ ಚರ್ಚೆ ನಡೆದಿದ್ದರಿಂದ ನಾವು ಅದನ್ನು ಸಾರಾಸಗಟಾಗಿ ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಅದರೊಟ್ಟಿಗೆ, ನಾನು ಒಳ್ಳೆಯ, ಕೆಟ್ಟ ಪತ್ರಕೆಗಳು ಎಂದು ಹೇಳುವುದಿಲ್ಲ. ಬೇರೆ ಬೇರೆ ವಿಷಯಗಳನ್ನು ಬರೆಯುವಂಥವೂ ಕೆಲವು ಇವೆ. ಮೊನ್ನೆ ಒಂದು ಪತ್ರಿಕೆಯಲ್ಲಿ, ಒಬ್ಬರು DCPಯವರು Singaporeಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಹೋದ ಬಗ್ಗೆ ಮಾಹಿತಿ ಬಂದದ್ದನ್ನು ನೋಡಿದೆ. ನಿನ್ನೆ ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಆ ಅಧಿಕಾರಿ ಹೋಗಿ, ನಾನು ಮುಖ್ಯಮಂತ್ರಿಗಳ ಜೊತೆಗೆ ಹೋದದ್ದಲ್ಲ, ಸರ್ಕಾರದ ಅಪ್ಪಣೆಯನ್ನು ಪಡೆದು ಹೋದೆ ಎಂದು ಹೇಳಿದ್ದಾರೆ. ನಾವು ಪತ್ರಿಕೆಗಳನ್ನು

ನಂಬಬೇಕಾಗುತ್ತದೆ. ಅವರು ಕೊಟ್ಟ ವರದಿಯ ಮೇಲೆ ಅಲ್ಲ. ಅವರನ್ನೂ ನಂಬಬೇಕಾಗುತ್ತದೆ. ಗಣಿಗಾರಿಕೆಯ ಬಗ್ಗೆ ಇಷ್ಟು ಚರ್ಚೆಯಾಗಬೇಕಾದರೆ 150 ಕೋಟಿ ರೂಪಾಯಿಗಳನ್ನು ಮಾನ್ಯ ಅರಣ್ಯ ಸಚಿವರ ಮುಖೇನ ಮುಖ್ಯಮಂತ್ರಿಗಳಿಗೆ ಕೊಟ್ಟಂಥ ಆಪಾದನೆ ಬಂದಿದ್ದರಿಂದ, ಅದೂ ಜನಾರ್ಧನ ರೆಡ್ಡಿಯವರು ಕೊಟ್ಟದ್ದು. ಅವರು ಕೇವಲ ವಿಧಾನ ಪರಿಷತ್ತಿನ ಸದಸ್ಯರಲ್ಲ. ಅವರು ಗಣಿ ಉದ್ದಿಮೆದಾರರೂ ಹೌದು. ನನಗೆ ಅನುಮಾನವೇನೆಂದರೆ, ಅವರೂ ಸಹ ಕೊಟ್ಟಿದ್ದಾರೆಯೇ ಎಂದು ಹೇಳಬೇಕಾಗುತ್ತದೆ. ಗಣಿ ಉದ್ದಮೆಯಲ್ಲಿದ್ದು ಅವರೇ ಹೇಳಬೇಕಾದರೆ ಅದರಲ್ಲಿ ಸ್ವಲ್ಪ ಏನೋ ಇರಬೇಕೆನ್ನುವಂಥ ಅನುಮಾನ ಬಂದಿದ್ದು ಬಿಟ್ಟರೆ, ಕೇವಲ ವಿಧಾನ ಪರಿಷತ್ತಿನ ಸದಸ್ಯರು ಅಥವಾ ಭಾರತೀಯ ಜನತಾ ಪಕ್ಷದ ಸದಸ್ಯರಾಗಿ ಅವರು JD(S)ನವರ ಮೇಲೆ ಏನೋ ಆಪಾದನೆ ಮಾಡಿದ್ದಾರೆ ಎನ್ನುವಂಥದ್ದು ಅಲ್ಲ. ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. 150 ಕೋಟಿ ರೂಪಾಯಿಗಳನ್ನು ಲಂಚವಾಗಿ ಕೊಡಬೇಕಾದರೆ, ಆ ಉದ್ದಿಮೆಯಲ್ಲಿ ಎಷ್ಟು ದೊಡ್ಡ ವ್ಯವಹಾರ ಇರಬೇಕೆನ್ನುವಂಥದ್ದನ್ನೂ ಆಲೋಚನೆ ಮಾಡುವಂಥ ಪರಿಸ್ಥಿತಿ ಬಂದಿದೆ. 150 ಕೋಟಿ ರೂಪಾಯಿಗಳ ಲಂಚ ಕೊಡಬೇಕಾದರೆ ಎಷ್ಟು ಕೋಟಿ ರೂಪಾಯಿಯ ವ್ಯವಹಾರ ನಡೆಯುತ್ತಿದೆ? ನಾನು ಗಣಿಗಾರಿಕೆಗೆ ವಿರೋಧ ಅಲ್ಲ. ಇವತ್ತು ಗಣಿಗಾರಿಕೆಯಿಂದ ನಮಗೆ foreign exchange ಬರುತ್ತದೆಂದು ನಾವು ಆಲೋಚನೆಯನ್ನು ಮಾಡುತ್ತೇವೆ. ಆದರೆ, ಕಬ್ಬಿಣದ ಅದಿರು, manganese ಅದಿರು, granite ಅನ್ನು ಸಿಕ್ಕಾಪಟ್ಟೆ, ಬೇಕಾಬಿಟ್ಟಿ ನಾವು ವಿದೇಶಕ್ಕೆ ಕಳುಹಿಸಿದ್ದೇವೆ. ಇದನ್ನು ಇಲ್ಲಿ ಉಪಯೋಗವನ್ನು ಮಾಡಿದ್ದರೆ, ಇಲ್ಲಿ steel plantಅನ್ನು ತೆಗೆದು ಉಪಯೋಗವನ್ನು ಮಾಡಿದ್ದರೆ, ಎಷ್ಟು ಉದ್ಯೋಗ ಸೃಷ್ಟಿಯಾಗುತ್ತಿತ್ತು. ಇಲ್ಲಿ ನಮ್ಮ ದೇಶದ ಅಭಿವೃದ್ಧಿ ಎಷ್ಟೊಂದು ಆಗುತ್ತಿತ್ತು. ನಾವು ಒಂದು ವಿಷಯವನ್ನು ತೆಗೆದುಕೊಳ್ಳಬೇಕು. ಲಕ್ಷ್ಮಿ ಮಿತ್ತಲ್‌ರವರು ಜರ್ಮನಿಗೆ ಹೋಗಿ, Luxemburg ನಲ್ಲಿ Arcelorಅನ್ನು take over ಮಾಡಿದಾಗ ಇಡೀ ದೇಶ ಸಂತೋಷ ಪಟ್ಟು ಪತ್ರಿಕೆಗಳಲ್ಲಿ ಆ ವಿಷಯ ಮುಖಪುಟದಲ್ಲಿ ಬಂತು. ಆದರೆ, ನಾವು ಇಷ್ಟು ಅದಿರನ್ನು ವಿದೇಶಕ್ಕೆ ರಫ್ತು ಮಾಡಿ ಸ್ವಲ್ಪ ಹಣದ ಲಾಭವನ್ನು ಗಳಿಸುವುದಕ್ಕಿಂತ ಇಲ್ಲಿಯೇ ಮಾಡಿ ಇದರಿಂದ ಲಾಭ ಎಷ್ಟಾಗುತ್ತಿತ್ತು ಎನ್ನುವ ಲೆಕ್ಕವನ್ನು ಹಾಕಬೇಕು. ಇವತ್ತು ನಮ್ಮ ಗಣಿಗಾರಿಕೆಯಿಂದ ಕೇವಲ ಬಳ್ಳಾರಿ ಜಿಲ್ಲೆ ಮಾತ್ರ ಬೇರೆ ಎಲ್ಲಾ ರಸ್ತೆಗಳೂ ಹಾಳಾಗಿವೆ. ಮಾನ್ಯ ಪುಟ್ಟೆಗೌಡರು ಮತ್ತು ವಿಶ್ವನಾಥ್‌ರವರು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಗಣಿಗಾರಿಕೆಗೇನೂ ಸಂಬಂಧವಿಲ್ಲ. ನಮ್ಮ ಜಿಲ್ಲೆಗೆ ಬರುವವರಿಗೆ ರಸ್ತೆಗಳು ಕೆಟ್ಟು

ಹೋಗಿವೆ. ಅಲ್ಲಿಯ ಪರಿಸರ ನಾಶವಾಗಿದೆ. ಕೇವಲ ಒಂದು power plant ಬರಲಿಕ್ಕೆ ಪರಿಸರ ನಾಶವಾಗುತ್ತದೆಂದು ಹೋರಾಟ ಮಾಡುವವರಿಗೆ ಅಲ್ಲಿ ಬಳ್ಳಾರಿಯ ಪರಿಸರ ಎಷ್ಟು ನಷ್ಟವಾಗಿದೆ? ರಸ್ತೆಗಳು ಎಷ್ಟು ಹಾಳಾಗಿವೆ ಎಂಬುದನ್ನು ತಿಳಿಯಬೇಕು. ಪ್ರಾಯಶಃ bridgeಗಳೆಲ್ಲಾ ಬಿದ್ದು ನಾವು ಬೇರೆ ದಾರಿಯಲ್ಲಿ ಬರುವ ಹಾಗಾಗಿ ನಮ್ಮದು ಒಂದು island ತರಹ ಆಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ನಾನಂತೂ ಅಂದುಕೊಂಡಿದ್ದೇನೆ. ಅದಕ್ಕೋಸ್ಕರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇದನ್ನು ನಿಲ್ಲಿಸಿ. ತನಿಖೆಯನ್ನು ಮಾಡಿ. ಯಾವ ರೀತಿಯಲ್ಲಿ ಎಷ್ಟನ್ನು permit ಇದ್ದವರು ಮಾಡುತ್ತಿದ್ದಾರೆ? ಎಷ್ಟು ಅಕ್ರಮ ಗಣಿಗಾರಿಕೆ ಇದೆ? ಇದರ ಬಗ್ಗೆ ತಾವು ಚರ್ಚೆಯನ್ನು ಮಾಡಬೇಕು. ಇದರಲ್ಲಿ environment clearanceಗೆ ಕೇಂದ್ರ ಸರ್ಕಾರದ Ministry of Environment (MOE) ಅಲ್ಲಿಂದಲೂ clearance ಸಿಕ್ಕಬೇಕಾಗುತ್ತದೆ. Clearance ಸಿಕ್ಕುವಾಗ ಪ್ರತಿಯೊಬ್ಬರಿಗೂ ಇಷ್ಟು ಕೋಟಾ ಅಂತ fix ಮಾಡುತ್ತಾರೆ. 90 percent ಗಿಂತ ಜಾಸ್ತಿಯಾದಾಗ ಅವರದ್ದು cancel ಆಗುತ್ತದೆ. Violation ಅಂತ ಇವತ್ತಿಗೆ ಅದನ್ನು ಯಾರೂ ನೋಡಿದವರು ಇಲ್ಲ ಎಷ್ಟು Violation ಆಗಿದೆ ಎಂದು ಯಾರೂ ನೋಡಿಲ್ಲ. ನಮ್ಮಲ್ಲಿ ಕಳೆದ ವರ್ಷ ಒಂದು ಸಲ ಕೇಂದ್ರದವರು ಬಂದು raid ಮಾಡಿ ಕೆಲವನ್ನು ಸ್ಥಗಿತಗೊಳಿಸಿದ್ದರಂತೆ. ಪುನಃ ನಮ್ಮ ರಾಜ್ಯದ ಸರ್ಕಾರದ Pollution Control Board ನವರೇನು ಮಾಡುತ್ತಿದ್ದಾರೆ? Mines and Geology ಇಲಾಖೆಯವರೇನು ಮಾಡುತ್ತಿದ್ದಾರೆ? ಇದರ ಬಗ್ಗೆ ಸ್ವಲ್ಪ ತನಿಖೆ ಮಾಡಿ, ಒಂದು ಸಲ ನಿಲ್ಲಿಸಿ. ಯಾರ್‍ಯಾರು permission ಇದ್ದು ಮಾಡುತ್ತಿದ್ದಾರೆ? Licence ಇದ್ದು ಮಾಡುತ್ತಿದ್ದಾರೆ, ಅವರಿಗೆ ಬೇಕಾದರೆ ಪುನಃ ಬಿಡಿ. ಆದರೆ, ಕೇವಲ ಅಲ್ಲೇನೋ ಕೃಷಿ ಭೂಮಿ ಸಿಗುತ್ತದೆಂದು ಹೇಳಿ ಸರ್ವನಾಶ ಮಾಡಿಬಿಟ್ಟಿದ್ದೀರಿ. ಬಳ್ಳಾರಿ ಜಿಲ್ಲೆಯಂತೂ ಇನ್ನೂ ವಾಪಸ್ಸು original position ಗೆ ಬರುವಂಥ ಸಾಧ್ಯತೆಗಳಿಲ್ಲ. ಹಾಗಾದರೆ, ಅಲ್ಲಿ ಜಿಲ್ಲಾಡಳಿತ ಯಾರೂ ಏನೂ ನೋಡುತ್ತಿಲ್ಲವೇ? ಇದರ ಬಗ್ಗೆ ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಆಪಾದನೆಯನ್ನು ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದೆರಡು ಹೇಳಿಕೆಗಳನ್ನು ಕೊಟ್ಟರು. ಮಾನನಷ್ಟ ಮೊಕದ್ದಮೆಯನ್ನು ಹಾಕುತ್ತೇನೆಂದು ಹೇಳಿದ್ದಾರೆ. ಅವರು blackmail ಮಾಡಿದರೆ ನೀವು ಮಾನನಷ್ಟ ಮೊಕದ್ದಮೆಯನ್ನು ಹಾಕಬೇಕಾಗುತ್ತದೆ ಅಥವಾ ನಿಮ್ಮ ಮೇಲೆ ಏನೂ ಆಧಾರವಿಲ್ಲದೆ ಆಪಾದನೆಯನ್ನು

ಮಾಡಿದ್ದರೆ, ಏಕೆ ಇಷ್ಟರವರೆಗೆ ಕ್ರಮ ತೆಗೆದುಕೊಳ್ಳಲಿಲ್ಲ? ಈವರೆಗೆ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ನೀವೇನು ಮಾಡಿದಿರಿ? Blackmail ಮಾಡಿದ್ದರೆ ನೀವೇಕೆ ಇಷ್ಟರವರೆಗೆ ಸುಮ್ಮನಿದ್ದಿರಿ? ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಡವೆ? You give a complaint. Take action against him. ನಿನ್ನೆ ವಾಟಾಳ್‌ರವರ ಮಾತನಾಡುವಾಗ ಚುನಾವಣಾ ವ್ಯವಸ್ಥೆಯಿಂದ ಈ ರೀತಿ ಬಂತು ಎಂದು ಹೇಳಿದರು. ಚುನಾವಣಾ ವ್ಯವಸ್ಥೆಯಿಂದ ಸಂಪೂರ್ಣವಾಗಿ ಈ ರೀತಿ ಬರಲಿಲ್ಲ. ಮಾನ್ಯ ರಮೇಶ್ ಕುಮಾರ್‌ರವರು ಸ್ವಲ್ಪ ಆ ಬಗ್ಗೆ ಮಾತನಾಡಿದರು. ಎಲ್ಲಾ ಹಣ ಸಂಗ್ರಹವಾಗಿದ್ದು party ಗೆ ಹೋಗಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. Party fund ಎಂದು collect ಮಾಡುವಂಥದ್ದು party treasury ಗೆ ಹೋಗುತ್ತದೆಯೇ? ಮಂತ್ರಿಗಳು ಮತ್ತು ಉಳಿದ ನಿಮ್ಮ ಸುತ್ತಮುತ್ತಲಿರುವವರು party fund ಎಂದು ಏಕೆ collect ಮಾಡಬೇಕು? ಪಕ್ಷದ treasuryಗೆ ಹೋಗಬೇಕು. ಇನ್ನು ಮುಂದಾದರೂ ಈ ವ್ಯವಸ್ಥೆಯನ್ನು ತರಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಆಲೋಚನೆ ಮಾಡದಿದ್ದರೆ ಕೇವಲ Mining ಅಲ್ಲ ಈ ill-gotten wealth ಇದೆಯಲ್ಲಾ, ಬೇಕಾಗಿದ್ದಕ್ಕಿಂತ ಜಾಸ್ತಿ ಹಣವನ್ನು ಸಂಪಾದನೆ ಮಾಡುವುದಿದೆಯಲ್ಲಾ, ಇದು ನಮ್ಮ ದುರಾದೃಷ್ಟ, ಈ ಎಲ್ಲಾ ವ್ಯವಸ್ಥೆ ಹಾಳಾಗಲಿಕ್ಕೆ ಕಾರಣವೇ ಅದು. ಕಷ್ಟಪಟ್ಟು ಸಂಪಾದನೆ ಮಾಡಿದ್ದರೆ ಯಾವುದೇ ಹಣ ಕೆಟ್ಟದಕ್ಕೆ ಉಪಯೋಗವಾಗುವುದಿಲ್ಲ. ಒಳ್ಳೆಯ ರೀತಿಯಲ್ಲಿ ಸಂಪಾದನೆ ಮಾಡಿದ್ದರೆ ಮಾತ್ರ ಒಳ್ಳೆಯದಕ್ಕೆ ವಿನಿಯೋಗವಾಗುತ್ತದೆಯೇ ವಿನಃ ಬೇರೆಯದಕ್ಕೆ ಉಪಯೋಗವಾಗುವುದಿಲ್ಲ. ಹಿಂದೆ liquor lobby ಇತ್ತು. ನಂತರ granite lobby ಆಯಿತು. ಅದರ ನಂತರ I.T. lobby ಇವತ್ತು mines lobby. ಇಷ್ಟು ದೊಡ್ಡ ಪ್ರಮಾಣದಲ್ಲಿದೆಯೆಂದು ನಮಗೆ ಗೊತ್ತಿರಲಿಲ್ಲ. ಪ್ರಾರಂಭವಾಗಿತ್ತು. ಆದರೆ, ಇಷ್ಟು ದೊಡ್ಡ ಪ್ರಮಾಣವೆಂಬುದು ಗೊತ್ತಿರಲಿಲ್ಲ. ಅಲ್ಲಿ ಏನು ನಡೆಯುತ್ತಿದೆ? ಯಾರ್‍ಯಾರು? ಯಾವ್ಯಾವ ರೀತಿಯಲ್ಲಿ ಎಷ್ಟು ಶ್ರೀಮಂತರಾಗಿದ್ದಾರೆ ಎನ್ನುವುದರ ಬಗ್ಗೆ ಚರ್ಚೆಯಾಗಿದೆ. ಅದಕ್ಕೋಸ್ಕರ, ಇದು ಪ್ರಾರಂಭವಾಗಿದ್ದು ಕೇವಲ ಅಧಿಕಾರಿಯ ವರ್ಗಾವಣೆಯಿಂದಲೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನೀವು first election ನಲ್ಲಿ ಬಂದಿರಿ. ಆವಾಗ excise lobby ಇತ್ತು. ಎರಡನೇ election ನಲ್ಲಿ ಬಂದಿರಿ ಆಗ granite lobby ಇತ್ತು. ಈಗ ಮೂರನೇ election ನಲ್ಲಿ ಬಂದಿದ್ದೀರಿ. Mines lobby ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದರ ಮಧ್ಯೆದಲ್ಲಿ I.T. Lobby ಇದೆ. ಪರಿಹಾರ ಮಾಡಬೇಕೆಂದು ಎಲ್ಲರೂ ತೀರ್ಮಾನ ಮಾಡಿದರೆ ಆಗುತ್ತದೆ. ಎಲ್ಲನೂ ತೀರ್ಮಾನ ಮಾಡದಿದ್ದರೆ ಆಗುವುದಿಲ್ಲ. ಎಲ್ಲರ ಮನಸ್ಸು ಒಂದೇ ಇದ್ದರೆ ಮಾತ್ರ ಈ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ ಜಿಲ್ಲೆಯ ಪೋಲಿಸ್ ಅಧಿಕಾರಿಗಳ ವರ್ಗಾವಣೆ ಕೇವಲ ನೆಪಮಾತ್ರ ಎಂದು ನಾನು ಅಂದು ಕೊಂಡಿದ್ದೇನೆ. ನಾನು ಮೊನ್ನೆ ಚರ್ಚೆಯಲ್ಲಿ ಕೇಳಿದೆ. 150 ಕೋಟಿ ರೂ ಲಂಚ ತೆಗೆದುಕೊಂಡಿದ್ದಕ್ಕೆ ಅಧಿಕಾರಿಯ ವರ್ಗಾವಣೆಯಾಯಿತಾ ಅಥವಾ ಅಧಿಕಾರಿಯ ವರ್ಗಾವಣೆಯಾದುದರಿಂದ ಇದು ಹೊರಗೆ ಬಂತಾ ಎನ್ನುವುದನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಮಾನ್ಯ ಚನ್ನಿಗಪ್ಪನವರು ಮಂತ್ರಿಗಳಾದ ಸ್ವಲ್ಪ ದಿವಸಕ್ಕೆ ಈ ಭಾಗಕ್ಕೆ ಭೇಟಿಯನ್ನು ಕೊಟ್ಟು ಒಂದು ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. 25 ಸಾವಿರ ಕೋಟಿ ರೂ. ಸರ್ಕಾರಕ್ಕೆ ನಷ್ಟವಾಗಿದೆ, ಅಂತ. ಈವರೆಗೆ ಏಕೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎನ್ನುವುದು ಬಹಳ ಪ್ರಮುಖವಾದ ಅಂಶ. ಅದರ ಬಗ್ಗೆ ಮಾನ್ಯ ರಮೇಶಕುಮಾರ್‌ರವರು ಸ್ವಲ್ಪ ವಿಸ್ತಾರವಾಗಿ ಮಾತನಡಿದರು, ಅದರ ಬಗ್ಗೆ ನಾನು ಪುನಃ ಹೇಳುವುದಿಲ್ಲ. ಮಾನ್ಯ ಮಾಧುಸ್ವಾಮಿಯವರೂ ಕೂಡ ಬಹಳ ಬೆಳಕನ್ನು ಚೆಲ್ಲಿದ್ದಾರೆ. ನಮ್ಮಲ್ಲಿ ರಸ್ತೆಗಳಿಗೆ ಅದಂಥ ಪರಿಸ್ಥಿತಿಯನ್ನು ನೋಡಿದಾಗ, ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ವಿದೇಶಿ ಹಣ ಬಂದಿದೆ ಇದರಿಂದಾಗಿ ನಮ್ಮ ರಾಜ್ಯಕ್ಕೆ ಆದ ನಷ್ಟ ಎಷ್ಟು ಎಂಬುದನ್ನು ನೋಡಬೇಕಾಗುತ್ತದೆ. ಲಾಬಿಯ ಬಗ್ಗೆ ಹೇಳುವಾಗ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ವರದಿಯನ್ನು ಸದನಕ್ಕೆ ಕೊಡಬೇಕಾಗುತ್ತದೆ. ಮೆಡಿಕಲ್ ಕಾಲೇಜ್, ಇಂಜನಿಯರಿಂಗ್ ಕಾಲೇಜ್, ನರ್ಸಿಂಗ್ ಕಾಲೇಜ್, ಟಿಸಿಹೆಚ್ ಕಾಲೇಜ್, ಇವೆಲ್ಲಾ ಎಜ್ಯುಕೇಷನ್ ಲಾಬಿಗಳು. ಎರಡೂ ಕಡೆ ಹೆಚ್ಚಿನವರ ಹತ್ತಿರ ಇವೆಲ್ಲಾ ಇದ್ದುದ್ದರಿಂದ ಈ ಚರ್ಚೆ ಇಲ್ಲಿ ನಡೆಯುವುದಿಲ್ಲ. ಇದರ ಬಗ್ಗೆ ಚರ್ಚೆಯಾಗಲಿ, ನನಗೆ ಇದರ ಬಗ್ಗೆ ಏಕೆ ಹೆಚ್ಚು ಚರ್ಚೆಯಾಗುವುದಿಲ್ಲ ಎನ್ನುವುದೂ ಸಹ ಅರ್ಥವಾಗಿದೆ. ಒಂದು ವೇಳೆ ನಾನೇ ಈ ವ್ಯವಹಾರದಲ್ಲಿ ಇದ್ದಾಗ ಅದರ ಬಗ್ಗೆ ನನಗೆ ಜಾಸ್ತಿ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಾ, ಈ ಟ್ರಾನ್ಸ್‌ಪೋರ್ಟೇಷನ್ ಮಾಡುವಾಗ ಮಾನ್ಯ ಖರ್ಗೆಯವರ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ, ಏಕೆಂದರೆ ಅಲ್ಲಿ ನಾವು ಬಹಳ ಹೋರಾಟ ಮಾಡಿದ್ದೆವು. ಅಲ್ಲಿ ನಮ್ಮವರು ಉಪವಾಸ ಕುಳಿತುಕೊಂಡರು. ನಮ್ಮಲ್ಲಿ ಬ್ರಿಡ್ಜ್ ಬಿದ್ದಾಗ ಉಪವಾಸ ಎಲ್ಲಾ ಮಾಡಿದರು. ಆಗ ಸ್ವಲ್ಪ ದಿವಸಕ್ಕೆ ಮಾತ್ರ ಹಿಡಿತಕ್ಕೆ ತಂದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಿರೋ ಇಲ್ಲವೋ ಗೊತ್ತಿಲ್ಲ

ಏಪ್ರಿಲ್‌ನಲ್ಲಿ ಏನು ಒಂದು ಜಿ.ಓ ಅನ್ನು ಹೊರಡಿಸಿದ್ದಾರೆ, ಅಂದು ನಾವು ಆರ್‌ಟಿಓ ರವರನ್ನು ಹಿಡಿದು ಓವರ್‌ಲೋಡ್ ಮಾಡಿದಂಥ ಎಲ್ಲಾ ಲಾರಿಗಳನ್ನು ತಡೆದು ಅದಕ್ಕೆ ಎಲ್ಲಾ ಫೆನಾಲ್ಟಿ ಹಾಕಿಸುವಂಥ ವ್ಯವಸ್ಥೆ ಕಾನೂನಿನಲ್ಲಿತ್ತು. ಅದನ್ನು ಬದಲಾವಣೆ ಮಾಡಿ ಆರ್‌ಟಿಓ ಗೆ ಫೆನಾಲ್ಟಿ ಹಾಕುವಂಥ ಪವರ್ ಅನ್ನು ಈಗ ವಿತ್‌ಡ್ರಾ ಮಾಡಿದ್ದಾರೆ. ಆರ್‌ಟಿಓ ಗೆ ಫೆನಾಲ್ಟಿ ಹಾಕುವಂಥ ಪವರ್ ವಿತ್‌ಡ್ರಾ ಕೇಸ್ ರಿಜಿಸ್ಟರ್ ಮಾಡಬೇಕಂತೆ ! ಕೇಸು ರಿಜಿಸ್ಟು ಮಾಡಬೇಕಾದರೆ ಇಡೀ ದಿವಸ ಕೆಲಸ ಆಗುತ್ತದೆಂದು ಅವರು ಕೇಸ್ ರಿಜಿಸ್ಟರ್ ಮಾಡುತ್ತಿಲ್ಲ. ಅಟ್‌ಲಿಸ್ಟ್ ಸರ್ಕಾರಕ್ಕೆ ಆದಾಯ ಬರುವಂಥದ್ದು ನಿಂತು ಹೋಗಿದೆ. ಅದಕ್ಕಾಗಿ ತಾವು ಇದನ್ನು ಯಾವ ಕಾರಣಕ್ಕಾಗಿ ಏಪ್ರಿಲ್‌ನಲ್ಲಿ ಜಿಓ ಮಾಡಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಾನು ಹಾಗೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ದಿನನಿತ್ಯ ಅನುಭವಿಸುವುದು. ಆ ರಸ್ತೆಗಳನ್ನು ಏನೂ ನೋಡುವ ಹಾಗೆ ಇಲ್ಲ. 50 ಲಕ್ಷ ಒಂದು ಕೋಟಿ ರೂ ಕೆಲಸ ಮಾಡಿಸಿ ಒಂದು ವಾರದೊಳಗಾಗಿ ಆ ರಸ್ತೆ ಹಾಳಾಗುತ್ತದೆ, ಏಕೆಂದರೆ, ಆ ರೋಡ್‌ಗಳಲ್ಲಿ ಸುಮಾರು 40 ರಿಂದ 45 ಟನ್ ಲೋಡ್ ಆ ಟರ್ನ್‌ವೀಲರ್‌ಗಳಲ್ಲಿ ಹೋಗುತ್ತದೆ. ಅವರೇನು ಹೇಳಿದರು, ಫೆನಾಲ್ಟಿ ಮ್ಯಾಕ್ಸಿಮಮ್ ಮೂರು ಸಾವಿರ ರೂಪಾಯಿ ಹಾಕುತ್ತಿದ್ದರು, ಅದಕ್ಕೆ ಅವರು ಮೂರು ಸಾವಿರ ಅಲ್ಲ ಐದು ಸಾವಿರ ನಮಗೆ ಫೆನಾಲ್ಟಿ ಹಾಕಿ ಸಾರ್ ನಮಗೆ ಆಗುಂಬೆನಲ್ಲಿ ಹಾಗೂ ಹುಲಿಕಲ್ ಮೇಲೆ ಹೋಗುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಂಡು ಫೆನಾಲ್ಟಿ ಹಾಕಿಸಿಕೊಂಡು ಹೋಗುತ್ತಿದ್ದಾರೆ. ಇದಕ್ಕೆ ಬದಲಾಗಿ ಕೋರ್ಟಿಗೆ ಹಾಕಿದ್ದು ಬಹಳ ಒಳ್ಳೆದಾಯಿತು, ಕೇಸ್ ರಿಜಿಸ್ಟರ್ ಮಾಡಿಸುವುದು ಇದೆಯಲ್ಲಾ ಇದರಿಂದಾಗಿ ಕನಿಷ್ಟ ಎರಡು ದಿನವಾದರೂ ಲಾರಿ ಅಲ್ಲಿ ನಿಲ್ಲುತ್ತದೆ. ಕನಿಷ್ಟ ಅಷ್ಟಾದರೂ ಅವರಿಗೆ ಶಿಕ್ಷೆ ಆಗುತ್ತದೆ. ಜೊತೆಗೆ ಮ್ಯಾಜಿಸ್ಟ್ರೇಟ್‌ರವರು ಅವರಿಗೆ 5 ರಿಂದ 10 ಸಾವಿರ ರೂಪಾಯಿ ಅವರಿಗೆ ಫೆನಾಲ್ಟಿ ಹಾಕುತ್ತಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸ್ವಲ್ಪ ಹಣ ಬರುತ್ತದೆ, ಇರುವುದರಲ್ಲಿ ಪರವಾಗಿಲ್ಲವೆಂಬುದು ನನ್ನ ಅನಿಸಿಕೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಕೇಸ್ ರಿಜಿಸ್ಟರ್ ಆಗುತ್ತಿಲ್ಲ, ಅದು ಸಮಸ್ಯೆ, ಕೇಸ್ ರಿಜಿಸ್ಟರ್ ಆಗುತ್ತದೆಯೇ ಎಂದು ನಾನು ಅಧಿಕಾರಿಗಳನ್ನು ಕೇಳಿದೆ ಅದಕ್ಕೆ ಅವರು ತುಂಬಾ ಪ್ರೊಸೀಜರ್ ಇದೆ ಎಂದು ಹೇಳುತ್ತಾರೆ, ನಂತರ ಅವರು ಅದನ್ನು ಕೋರ್ಟಿಗೆ ಹಾಕಬೇಕು. ಅವರು ಕೋರ್ಟಿನಲ್ಲಿ ಕಂಟೆಸ್ಟ್ ಮಾಡಿದರೆ ನಿಲ್ಲುತ್ತದೆಯೋ ಇಲ್ಲವೊ ಗೊತ್ತಿಲ್ಲ ಏಕೆಂದರೆ ಈ ರೀತಿಯ ಎರಡು ಕೇಸ್‌ಗಳು ಕೋರ್ಟಿನಲ್ಲಿ ನಿಲ್ಲದಿದ್ದರೆ ತಾನೇ ತಾನಾಗಿ ಕೇಸ್ ರಿಜಿಸ್ಟರ್ ಮಾಡುವುದೇ ನಿಂತು

ಹೋಗುತ್ತದೆ, ಅದಕೋಸ್ಕರ ನಾನು ಹೇಳುವಂಥದ್ದು ಕೊನೆಪಕ್ಷ ಬೊಕ್ಕಸಕ್ಕಾದರೂ ಹಣ ಬರಲಿ, ಹಿಂದಿನ ಬಜೆಟ್‌ನ್ನು ತಾವು ಓದಿದಿರೋ ಇಲ್ಲವೊ ಗೊತ್ತಿಲ್ಲ ಮಾನ್ಯ ಸಿದ್ದರಾಯ್ಯನವರು ಹಿಂದೆ ಬಜೆಟ್‌ನ್ನು ಮಂಡಿಸಿದಾಗ ಅಲ್ಲಿ ಸ್ಟಾರ್ಟಿಂಗ್ ಪಾಯಿಂಟ್‌ನಲ್ಲಿ ಅವರಿಂದ ರಸ್ತೆಗಳ ದುರಸ್ಥಿಗೆ ಹಣವನ್ನು ಸಂಗ್ರಹ ಮಾಡುತ್ತೇವೆಂದು ಹೇಳಿದ್ದರು, ಆ ಬಜೆಟ್‌ನಲ್ಲಿ ಟೋಲ್ ಅನ್ನು ಕಲೆಕ್ಟ್ ಮಾಡುತ್ತೇವೆಂದು ಇದೆ. ಇವತ್ತಿನವರವಿಗೂ ಒಂದು ನಯಾ ಪೈಸೆ ಟೋಲ್ ಕಲೆಕ್ಟ್ ಆಗಿಲ್ಲ. ಆದುದರಿಂದ ಇದರ ಬಗ್ಗೆ ಎಲ್ಲೋ ಒಂದು ಕಡೆಗೆ ಅನುಮಾನ ಬರುತ್ತದೆ. It is an on-going scheme. ನಿಮ್ಮ ಕ್ಷೇತ್ರದ ಅಭಿವೃದ್ಧಿಗೆ ಹಣ ಬರುವುದಿಲ್ಲ, It is an on-going scheme ಎಂಬುದು ನನ್ನ ಅಭಿಪ್ರಾಯ. ಅದುದರಿಂದ ಅದನ್ನು ಯಾರೂ ಇಂಪ್ಲಿಮೆಂಟ್ ಮಾಡಲಿಕ್ಕೆ ತಯಾರಿಲ್ಲ, ಅದು ಎಲ್ಲಿ ಇಂಪ್ಲಿಮೆಂಟ್ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಇಲ್ಲದಿದ್ದರೆ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ತಾವೇನು ರಾಜಿ ಮಾಡಿಕೊಳ್ಳುತೇವೆಂದು ಏನು ಹೇಳುತ್ತಿದ್ದೀರಿ, ರಾಜಿ ಎಂದರೆ ಏನರ್ಥ? ಆಪಾದನೆಯನ್ನು ಮಾಡಿಯಾಗಿದೆ, ನಾನು ಇಲ್ಲವೆಂದು ಹೇಳಿದರೆ ಜನ ನಂಬುವಂಥ ಪರಿಸ್ಥಿತಿಯಲ್ಲಿ ಇಲ್ಲ, ಅವರು ಹೇಳಿದರೂ it is barred by limitation ಅಂತ ನನ್ನ ಅಭಿಪ್ರಾಯ. It is barred by limitation. ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಈಗ ನಿಮ್ಮ ನಿಮ್ಮ ಹಾಗೂ ನಮ್ಮ ಸಮಾಧಾನಕ್ಕೆ ನಾವು ಇದನ್ನು ಮಾಡಿಕೊಳ್ಳುವುದು ಬಿಟ್ಟರೆ, ಇದನ್ನು ಜನರ ಮನಸ್ಸಿನಿಂದ ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲ. ಆದರೂ ನೀವು ಯಾವ ಪ್ರಯತ್ನವನ್ನು ಮಾಡುತ್ತೀರೆಂದು ನಾವು ನೋಡಬೇಕೆಂದು ಇದ್ದೇವೆ. ಈಗ ನಿನ್ನೆ ಒಂದು ಉದಾಹರಣೆಯನ್ನು ಕೊಟ್ಟರು. 200 ಎಕರೆ ತೆಗೆದುಕೊಂಡು 400 ಎಕರೆ ಗಣಿಗಾರಿಕೆ ಮಾಡಿದರು ಎಂದು ಹೇಳಿದರು, ಅಲ್ಲಿ ನಿಮ್ಮ ಸರ್ಕಾರದ ಅಧಿಕಾರಿಗಳು ಇಲ್ಲವೆ? ಸರ್ಕಾರದ ಅಧಿಕಾರಿಗಳಿಗೆ ಗೊತ್ತಿಲ್ಲದೆ ಇದೆಲ್ಲಾ ಆಗುತ್ತದೆಯೇ? ನಮ್ಮಲ್ಲೂ ಕೂಡ ಒಂದು ಎಕರೆ ಗ್ರಾನೈಟ್ ಅಥವಾ ಲ್ಯಾಥೋ ಲೆಟಕೈಟ್ ಕ್ವಾರಿಯಲ್ಲಿ ಎಷ್ಟು ಜಾಸ್ತಿ ಮಾಡುತ್ತಾರೆಂದು ಗಲಾಟೆ ಶುರುವಾಗಿದೆ, ಆದರೆ ಬಳ್ಳಾರಿಯಲ್ಲಿ ಗಲಾಟೆಯಿಲ್ಲ, ಈಗ ಹೊಸಬರು ಬರುತ್ತಿದ್ದಾರೆಂದು ಚರ್ಚೆ ಪ್ರಾರಂಭ ಆದದ್ದು ಬಿಟ್ಟರೆ, ಇದ್ದವರಿಗೆ ಬಿಟ್ಟು ಹೊಸಬರಿಗೆ ವ್ಯವಸ್ಥೆ ಪ್ರಾರಂಭವಾಗುತ್ತದೆಂದು ಚರ್ಚೆಯಾಗಿದೆ ಎನ್ನುವ ಅನುಮಾನಗಳು ಇವೆ. ನಿನ್ನೆ ಜೈಲಿನಲ್ಲಿರುವ ಖೈದಿಗಳ ಸತ್ಯಹರಿಶ್ಚಂದ್ರನ ನಾಟಕದ ಬಗ್ಗೆ ಹೇಳಿದಿರಿ. ಅವರು ಸುಧಾರಣೆಯಗುತ್ತಿದ್ದಾರೆ ಸ್ವಾಮಿ. ಇಲ್ಲಿ ಇವರು ಇನ್ನೂ

ಸುಧಾರಣೆಯಾಗಿಲ್ಲ. ಅಲ್ಲಿ ಸುಧಾರಣೆಯಾಗಿದೆ, ಅವರಿಗೆ ಸುಧಾರಣೆಯಾಗಿ ಇವರಿಗೆ ಬರುವಂಥ ಪರಿಸ್ಥಿತಿ ಇದೆ. ಇಲ್ಲಿ ಸುಧಾರಣೆಯಾಗಬೇಕಾಗಿದೆ ಅಷ್ಟೆ. ಇದನ್ನು ಹೇಗೆ ಸುಧಾರಣೆ ಮಾಡುತ್ತೀರಿ ಎಂದು ತಮ್ಮ ಮೂಲಕ ಕೇಳುತ್ತಾ ಮತ್ತೆ ಮಾನ್ಯ ಮಾಧುಸ್ವಾಮಿಯವರು ಹೇಳಿದಂಥ ವಿಷಯಗಳಲ್ಲಿ ಅಧಿಕಾರಿಗಳ ವರ್ಗದಲ್ಲಿ ಏನಾಗುತ್ತದೆ, ಅಲ್ಲಿ ಲೋಕಲ್ ಲೆವಲ್‌ನಲ್ಲಿ ಏನಾಗುತ್ತದೆ, ಇದರ ಬಗ್ಗೆ ತನಿಖೆ ಮಾಡಬೇಕಾಗುತ್ತೆಂದು ಹೇಳುತ್ತಾ, ಇನ್ನು ಬಳ್ಳಾರಿಯಲ್ಲಿ ಅದರ ಪರಿಣಾಮ ಏನು? ಗಣಿಗಾರಿಕೆಯಿಂದಾದ ಪರಿಣಾಮ, ಏಕೆಂದರೆ ಅಷ್ಟು ಪರಿಸರ ನಾಶವಾಗಿದ್ದಕ್ಕೆ ಬೇರ ಏನು ವ್ಯವಸ್ಥೆ ಆಗಬೇಕಾಗುತ್ತದೆ. ಇದನ್ನೂ ಕೂಡ ನೋಡಬೇಕಾಗುತ್ತದೆ, ಏಕೆಂದರೆ ಕೃಷಿಭೂಮಿಯಿಂದ ಎಲ್ಲಾ ತೆಗಿದಿದ್ದಾರಲ್ಲವೆ? ಅದಕ್ಕೆ ಪರ್ಮಿಷನ್ ಇತ್ತಾ? ಅಲ್ಲಿ ಯಾವುದೇ ಮಿನರಲ್ಸ್ ಇದ್ದರೂ ಅದು ಸರ್ಕಾರಕ್ಕೆ ಹೋಗಬೇಕಾಗುತ್ತದೆ ಅಲ್ಲವೆ? ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದರ ಬಗ್ಗೆ ಅಲೋಚನೆ ಮಾಡದಿದ್ದರೆ ಮುಂದೆ ಎಲ್ಲಾ ಜಿಲ್ಲೆಗಳಲ್ಲೂ ಎಲ್ಲಾ ಪಟ್ಟಾ ಲ್ಯಾಂಡ್‌ಗಳಲ್ಲಿ ಸಹ ಮೈನ್ಸ್ ಸಿಕ್ಕಲಿಕ್ಕೆ ಶುರುವಾದರೆ, ಈ ಪರಿಸ್ಥಿತಿಯನ್ನು ಎಲ್ಲಿ ನಿಯಂತ್ರಣಕ್ಕೆ ತರುತ್ತೀರಿ ಎನ್ನುವುದನ್ನು ತಾವು ಹೇಳಬೇಕೆಂದು ಹೇಳುತ್ತಾ ಮೊನ್ನೆ ನಾನೊಂದು ಫಿಲ್ಮಾ ಆವಾರ್ಡ್‌ನ್ನು ನೋಡುತ್ತಿದ್ದೆ. ಸುಮಾರು 25 ವರ್ಷಗಳ ಕಾಲದಿಂದಲೂ ಒ ಪಿ ದತ್ತ ಎನ್ನುವವರು ಸಿನಿಮಾರಂಗಕ್ಕೆ ಕೊಟ್ಟಂಥ ಕೊಡುಗೆಗಾಗಿ ಅವರಿಗೆ ಸನ್ಮಾನವನ್ನು ಮಾಡಿದಾಗ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. Lead the way or get out of the way. That means, make the fair for tomorrow. ಏಕೆಂದರೆ, ನನ್ನ ಕೈಯಲ್ಲಿ ಆಗಲಿಲ್ಲವೆಂದರೆ ಬೇರೆಯವರು ನೋಡಿಕೊಳ್ಳುತ್ತಾರೆ ಎನ್ನುವಂಥ ಮಾತನ್ನು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು ಇಷ್ಟೇ. ಆಪಾದನೆ ಬಂದಿದೆ ಮಾನ್ಯ ಅರಣ್ಯ ಸಚಿವರ ಮುಖೇನ ಆಗಿದೆ ಅಂತ, ಅದರ ಬಗ್ಗೆ ಸಂಪೂರ್ಣವಾದ ಮಾಹಿತಿ, ಏನು ಆಗಿದೆ ಎಂಬುದು ಇಲ್ಲಿ ಸಿಗಬೇಕಾಗುತ್ತದೆ. ಇಲ್ಲದೇ ಇದ್ದರೆ ದತ್ತರವರು ಏನು ಹೇಳುತ್ತಾರೆ ಅದನ್ನು ನಾನು ಒಪ್ಪುತ್ತೇನೆಂದು ಹೇಳುತ್ತಾ ಮಾನ್ಯ ಪ್ರಕಾಶ್‌ರವರ ಮೇಲೆ ಕೂಡ ಆಪಾದನೆ ಇದೆ, ಏಕೆಂದರೆ ನಾನು ಮಾನ್ಯ ಪ್ರಕಾಶ್‌ರವರ ಬಗ್ಗೆ ಎತ್ತುತ್ತಿದ್ದೇನೆ ಏಕೆಂದರೆ ಇವೆಲ್ಲವನ್ನೂ ಏಕೆ ಚರ್ಚೆ ಮಾಡಬೇಕೆಂದರೆ ಅವರೂ ಕೂಡ ಉತ್ತರ ಹೇಳಬೇಕಾಗುತ್ತದೆ. ಅವರ ಮೇಲೆ ಆಪಾದನೆಯನ್ನು ಮಾಡಿದಾಗ ಈ ಸದನಕ್ಕೆ ಗೊತ್ತಾಗಬೇಕಾಗುತ್ತದೆ ಇಡೀ ರಾಜ್ಯಕ್ಕೆ ಈ ಸದನದ ಮುಖೇನ ಗೊತ್ತಾಗಬೇಕಾಗುತ್ತದೆ. ಅವರ ಮಗನ ಹೆಸರನ್ನು ಎಫ್‌ಐಆರ್ ನಿಂದ ತೆಗೆಸಿರುವುದರ ಬಗ್ಗೆ ಏನು ಆಪಾದನೆ

ಮಾಡಿದ್ದಾರೆ, ಅದನ್ನು ಕ್ಲಾರಿಫೈ ಮಾಡಬೇಕಾಗುತ್ತದೆ. ಇವೆಲ್ಲಾ ಆಪಾದನೆಯನ್ನು ಇಟ್ಟುಕೊಂಡು ಇದರಲ್ಲಿ ಮುಂದುವರೆಯುವುದು ಸರಿಯಾಗುವುದಿಲ್ಲವೆಂದು ಹೇಳುತ್ತಾ, ಹೆಚ್ಚು ವಿಷಯಗಳನ್ನು ಈಗಾಗಲೇ ನನ್ನ ಸಹೋದ್ಯೋಗಿ ಸ್ನೇಹಿತರು ಎಲ್ಲಾ ಮಾತನಾಡಿದ್ದಾರೆ ಹೀಗಾಗಿ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಇದರಲ್ಲಿ ಇತ್ಯರ್ಥವಾಗಬೇಕಾಗುತ್ತದೆ, ಇದು ಸರ್ಕಾರ ಬಂದಿರುವುದು ಕಳೆದ 4–5 ತಿಂಗಳುಗಳ ಹಿಂದೆ, ಒಂದರ ಮೇಲೊಂದು ಆಪಾದನೆ ಬರುವಾಗ, ಬಿಎಂಐಸಿ ವಿಚಾರದಲ್ಲಿ ಸರ್ಕಾರದ ಒಂದು ಅಂಗ ಬಿಲ್‌ನ್ನು ತರಬೇಕು ಎಂದು ಹೇಳಿದರೆ ಇನ್ನೊಬ್ಬರು ಬೇಡ ಎಂದಿದ್ದರಿಂದ ಅದು ನಿಂತು ಹೋಯಿತು. ಅದನ್ನು ತಂದಿದ್ದರೆ ನಾವು ಈಗಲೂ ಕೂಡ hypothetical ಆಗಿ ಚರ್ಚೆ ಮಾಡುವುದಕ್ಕಾಗಿ, ತಂದಿದ್ದರೆ ಚರ್ಚೆ ಮಾಡುವುದಕ್ಕೆ ನನಗೆ ಬಹಳ ಆಸೆ ಇತ್ತು. ಆದರಿಂದ ಅದರ ಆಗುಹೋಗುಗಳ ಬಗ್ಗೆ ಚರ್ಚೆ ಮಾಡಬೇಕೆಂದು ಇತ್ತು. ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆ ಎಂಬುದನ್ನು ಮಾನ್ಯ ಪುಟ್ಟೇಗೌಡರು ನೇರವಾಗಿ ಒಪ್ಪಿಕೊಂಡಿದ್ದಾರೆ. ಆದರೆ, ಮಾನ್ಯ ಯಡಿಯೂರಪ್ಪನವರಿಗೆ ಕೇಳಿದ್ದಕ್ಕೆ ನೆನ್ನೆ ದಿವಸ ನಡೆದ ನಮ್ಮ ಸಭೆಗೆ ತಾವು ಬರಬೇಕಾಗಿತ್ತೆಂದು ಹೇಳಿದರು. ಇಂಥ ಸಂದರ್ಭದಲ್ಲಿ ನಾವು ಅಂಥ ಸಭೆಗೆ ಬರತಕ್ಕಂಥದ್ದು ಸರಿಯಾಗುವುದಿಲ್ಲ. ಏಕೆಂದರೆ, ನಿಮ್ಮ ನಿಮ್ಮ ಭಿನ್ನಾಭಿಪ್ರಾಯಗಳ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಅಲ್ಲಿಗೆ ಬರತಕ್ಕಂಥದ್ದು ಸರಿಯಲ್ಲ. ಏಕೆಂದರೆ, ನಮ್ಮಿಂದ ಆ ಸುದ್ದಿ ಹೊರಗಡೆ ಹೋಯಿತೆಂಬ ಅಪವಾದಕ್ಕೆ ನಾವು ಗುರಿ ಆಗಬಾರದು. ಆದರೆ, ನಿಮ್ಮ ಭಿನ್ನಾಭಿಪ್ರಾಯದಿಂದಾಗಿ ನಮಗೇನೂ ತೊಂದರೆಯಿಲ್ಲ ಎನ್ನುವಂಥದ್ದು ಇರಬಾರದು. ನಿಮ್ಮಗಳ ಭಿನ್ನಾಭಿಪ್ರಾಯದಿಂದ ಆಡಳಿತದ ಮೇಲೆ ಎಷ್ಟು ಪರಿಣಾಮ ಬೀರುತ್ತದೆಂಬುದು ಮತ್ತು ರಾಜ್ಯಕ್ಕೆ ಇದರಿಂದ ಎಷ್ಟು ತೊಂದರೆ ಆಗುತ್ತದೆಂಬುದು ಹಾಗೂ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ ಎಲ್ಲರೂ ಸುಮ್ಮನೆ ಕುಳಿತುಕೊಂಡರೆ ನಿಮ್ಮ ರೆವಿನ್ಯೂ ರೆಸಿಟ್ಸ್ ಕಡಿಮೆ ಆಗುತ್ತದೆ. ಹಾಗೆಯೇ ನಿಮ್ಮ ಅಭಿವೃದ್ಧಿ ಕಾಮಗಾರಿಗಳೂ ಕೂಡ ಕಡಿಮೆಯಾಗುತ್ತವೆ. ಆದ್ದರಿಂದ ಅವರನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನತಕ್ಕಂಥದರ ಬಗ್ಗೆ ಸರ್ಕಾರ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆಂದು ತಮ್ಮ ಮೂಲಕ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3. ಪ್ರಕಟಣೆ

ಉಪಾಧ್ಯಕ್ಷರು : ಲೋಕೋಪಯೋಗಿ ಮತ್ತು ಇಂಧನ ಸಚಿವರಾಗಿರತಕ್ಕಂಥ ಮಾನ್ಯ ಹೆಚ್.ಡಿ. ರೇವಣ್ಣನವರು ವಿಧಾನ ಮಂಡಲದ ಮಾನ್ಯ ಸದಸ್ಯರುಗಳ